10 ಆಗಸ್ಟ್ 2025 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 152 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ
# ಪ್ರಜೋದಯ
ದಿನಪತ್ರಿಕೆ
ಸಂಪಾದಕ : ಜೆ.ಆರ್. ಕೆಂಚೇಗೌಡ


ಇಂಗ್ಲೆಂಡ್ ವಿರುದ್ಧದ ಆ್ಯಂಡರ್ಸನ್ -ತೆಂಡೂಲ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಯ ಲಾರ್ಡ್ಸ್ ಪಂದ್ಯದ ವೇಳೆ ಟೀಂ ಇಂಡಿಯಾ ನಾಯಕ ಶುಭಮನ್ ಗಿಲ್ ಧರಿಸಿದ್ದ ಜೆರ್ಸಿ ಬರೋಬ್ಬರಿ 5.41 ಲಕ್ಷಕ್ಕೆ ಬಿಕರಿಯಾಗಿದೆ.



ಹಬ್ಬದ ನಲ್ಮೆಯ ನಂತರದ ನರಳಾಟ ಅನಿವಾರ್ಯವೇ ? » 2


ಬಾಳುವಂಥ ಹೂವೇ ಬಾಡುವಾಸೆ ಏಕೆ? » 3


ಧಾರ್ಮಿಕ ಆಚರಣೆಗಳಿಂದ ಮನಸ್ಸಿಗೆ ನೆಮ್ಮದಿ » 4


# ಮತಗಳ್ಳತನ: ಕಾನೂನು ಇಲಾಖೆ ಪರಿಶೀಲನೆ

## ವರದಿ ನೀಡಲು ಅಡ್ವೊಕೇಟ್ ಜನರಲ್‌ಗೆ ಸೂಚನೆ | ಶಿಫಾರಸ್ಸಿನ ಅನ್ವಯ ಕ್ರಮ | ಮುಖ್ಯಮಂತ್ರಿ ಸಿದ್ದರಾಮಯ್ಯ

• ಪ್ರಜೋದಯ ವರದಿ

**ಬೆಂಗಳೂರು:** ಲೋಕಸಭೆ ಚುನಾವಣೆಯಲ್ಲಿ ಮತಗಳ್ಳತನ ನಡೆದಿರುವ ಆರೋಪಗಳ ಬಗ್ಗೆ ಕಾನೂನು ಇಲಾಖೆ ಪರಿಶೀಲನೆ ನಡೆಸಲಿದ್ದು, ಅವರು ನೀಡುವ ಶಿಫಾರಸ್ಸಿನ ಅನ್ವಯ ಕಾನೂನಿನ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಶನಿವಾರ ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಸಭೆ ಚುನಾವಣೆಯಲ್ಲಿ ಮತಗಳ್ಳತನ ನಡೆದಿರುವ ಆರೋಪಗಳ ಬಗ್ಗೆ ಪರಿಶೀಲನಾ ಕಾರ್ಯವನ್ನು ತ್ವರಿತವಾಗಿ ನಡೆಸಿ ವರದಿ ನೀಡಲು ಅಡ್ವೊಕೇಟ್ ಜನರಲ್ ಅವರಿಗೆ ಸೂಚನೆ ನೀಡಲಾಗುವುದು. ಆದರೆ, ಮತದಾರರ ಪಟ್ಟಿಯ ಸಂಬಂಧ ಸಂಪೂರ್ಣ ಅಧಿಕಾರವಿರುವುದು ಚುನಾವಣಾ ಆಯೋಗಕ್ಕೆ ಮಾತ್ರ ಎಂದು ಹೇಳಿದರು.

ರಾಹುಲ್ ಗಾಂಧಿ ಅವರು ಮಾಧ್ಯಮಗಳಲ್ಲಿ ಪ್ರದರ್ಶನ ಮಾಡಿದ್ದು ನಿಜ. ಬಿಜೆಪಿಯವರು ತಪ್ಪು ಮಾಡಿ ಸುಳ್ಳು ಹೇಳುತ್ತಿದ್ದಾರೆ. ನಾವು ಕಳೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಹದಿನಾರು ಸ್ಥಾನಗಳನ್ನು ಗೆಲ್ಲುವೆವು ಎಂದು ಆಂತರಿಕ ಸಮೀಕ್ಷೆ ತಿಳಿಸಿತ್ತು. ಆದರೆ, ನಾವು ಗೆದ್ದದ್ದು 9 ಸ್ಥಾನಗಳನ್ನು ಮಾತ್ರ. ರಾಹುಲ್ ಗಾಂಧಿ ಸಾಕ್ಷಿ ಸಮೇತ ಎಲ್ಲಾ ವಿಚಾರಗಳನ್ನು ತಿಳಿಸಿದ್ದಾರೆ. ಈ ಎಲ್ಲಾ ದಾಖಲೆಗಳು ರಾಜ್ಯ ಮತ್ತು ಕೇಂದ್ರ ಚುನಾವಣಾ ಆಯೋಗದ ಬಳಿ ಲಭ್ಯವಿದೆ. ಒಂದೇ ಸಣ್ಣ ಮನೆಯಲ್ಲಿ 80 ಜನ ವಾಸ ಮಾಡಲು ಸಾಧ್ಯವೇ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಚುನಾವಣಾ ಆಯೋಗದ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಿಸಲು ನ್ಯಾಯಾಂಗದ ಮಧ್ಯ ಪ್ರವೇಶ ಕುರಿತು ಪ್ರತಿಕ್ರಿಯಿಸಿದ ಅವರು, ಚುನಾವಣೆಗಳಲ್ಲಿ, ಇವಿಎಂಗಳಲ್ಲಿ, ಮತದಾರರ ಪಟ್ಟಿಗಳಲ್ಲಿ ಕೈವಾಡ ನಡೆಯುತ್ತಿದೆ ಎಂದು ನಾವು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇವೆ ಎಂದರು.

ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಗೂ ಮುನ್ನ ಕ್ರಮ ಕೈಗೊಳ್ಳಲಾಗುತ್ತದೆಯೇ ಎಂಬ ಪ್ರಶ್ನೆಗೆ, ನಾವು ಅದನ್ನು ತಕ್ಷಣ ಮಾಡುತ್ತೇವೆ. ನಮ್ಮ ಕಾನೂನು ಸಲಹೆಗಾರ ಮತ್ತು ಅಡ್ವೊಕೇಟ್ ಜನರಲ್‌ಗೆ ಇದನ್ನು ಪರಿಶೀಲಿಸಿ ತ್ವರಿತವಾಗಿ ಪೂರ್ಣಗೊಳಿಸಲು ಹೇಳಿದ್ದೇನೆ. ರಾಹುಲ್ ಗಾಂಧಿ ಕೆಲವು ಸಮಸ್ಯೆಗಳನ್ನು ಎತ್ತಿದ್ದಾರೆ. ಆ ಎಲ್ಲಾ ವಿವರಗಳು ಭಾರತದ ಚುನಾವಣಾ ಆಯೋಗದಲ್ಲಿ ಲಭ್ಯವಿದೆ. ಅವರು ಚುನಾವಣಾ ಆಯೋಗದಲ್ಲಿ ಲಭ್ಯವಿರುವ ದಾಖಲೆಗಳನ್ನು ಮಾತ್ರ ಪ್ರಸ್ತುತಪಡಿಸಿದ್ದಾರೆ.

» ನಾಲ್ಕನೇ ಪುಟದಲ್ಲಿ



### ಕಣ್ಮುಚ್ಚಿ ಕುಳಿತಿದ್ರಾ: ಸರ್ಕಾರಕ್ಕೆ ರಾಜಣ್ಣ ಪ್ರಶ್ನೆ

ಮತಗಳ್ಳತನ ಎಂದು ನಾವು ಹೇಳುತಿದ್ದೇವೆ. ಇದು ನಡೆದಿರೋದು ನಿಜ. ಆದರೆ ನಾವು ಮೊದಲು ನೋಡಿಕೊಳ್ಳದೇ ಈಗ ಹೇಳುತ್ತಿರೋದು ನಮಗೆ ನಾಚಿಕೆ ಆಗಬೇಕು. ನಮ್ಮದೇ ಸರ್ಕಾರ ಇದ್ದಾಗ ವೋಟರ್ ಲಿಸ್ಟ್ ಮಾಡಿದ್ದು, ಆಗೇನು ಕಣ್ಮುಚ್ಚಿ ಕುಳಿತಿದ್ರಾ, ಎಂದು ಸಚಿವ ಕೆ.ಎನ್.ರಾಜಣ್ಣ ತಮ್ಮದೇ ಸರ್ಕಾರದ ವಿರುದ್ಧ ಬೇಸರ ವ್ಯಕ್ತಪಡಿಸಿದ್ದಾರೆ. ತುಮಕೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದನ್ನೆಲ್ಲಾ ಮಾತನಾಡೋಕೆ ಹೋದರೆ ಏನೇನೋ ಆಗುತ್ತೆ. ವೋಟರ್ ಲಿಸ್ಟ್ ಎಲ್ಲಾ ಯಾವ ಕಾಲದಲ್ಲಿ ಮಾಡಿದ್ದು, ನಮ್ಮದೇ ಸರ್ಕಾರ ಇರುವಾಗ ಮಾಡಿರೋದು ಅಲ್ವಾ? ಆವಾಗ ಎಲ್ಲಾ ಕಣ್ಮುಚ್ಚಿ ಕುಳಿತಿದ್ರಾ, ಎಂದು ತಮ್ಮ ಸರ್ಕಾರವನ್ನೇ ಪ್ರಶ್ನಿಸಿದ್ದಾರೆ.

## ಶ್ರೀಧರ್‌ಗೌಡರಿಂದ ಶಾಸಕರ ವಿರುದ್ಧ ಸುಳ್ಳು ಆರೋಪ: ಜೆಡಿಎಸ್

• ಪ್ರಜೋದಯ ವರದಿ




**ಅರಕಲಗೂಡು:** ಪಟ್ಟಣದ ಅಭಿವೃದ್ಧಿ ಹಿನ್ನಲೆ ಸಿದ್ಧಗೊಂಡಿರುವ ಮಾಸ್ಟರ್ ಪ್ಲಾನ್-2041ರ ದುರ್ಬಳಕೆಯಾಗಬಾರದೆಂಬ ಉದ್ದೇಶದಿಂದ ಶಾಸಕ ಎ. ಮಂಜು ಜನರಿಗೆ ಅರಿವು ಮೂಡಿಸಿ ದರೆ ಕಾಂಗ್ರೆಸ್ ಮುಖಂಡ ಹೆಚ್.ಪಿ. ಶ್ರೀಧರ್‌ಗೌಡರೇಕೆ ಕುಂಬಳಕಾಯಿ ಕಳ್ಳ ಅಂದ್ರೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತಿದ್ದಾರೆಂದು ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಹೊನ್ನವಳ್ಳಿ ಸತೀಶ್ ಅವರು ಪ್ರಶ್ನಿಸಿದರು.


ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ಈ ವಿಚಾರವಾಗಿ ಶಾಸಕರು ಸಾರ್ವಜನಿಕರಿಗೆ ತಿಳುವಳಿಕೆ ನೀಡಿದ್ದಾರೆ ವಿನಃ ಯಾರ ಹೆಸರು ಪ್ರಸ್ತಾಪಿಸಿಲ್ಲ. ಆದರೆ ಶ್ರೀಧರ್‌ಗೌಡ ತನಗೆ ಹೇಳಿದ್ದಾರೆಂದು ತಪ್ಪು ಭಾವನೆಯಿಂದ ಶಾಸಕರ ವಿರುದ್ಧ ಆರೋಪ ಮಾಡಿದ್ದಾರೆಂದರು.

ಶ್ರೀಧರ್‌ಗೌಡರ ಪ್ರತಿಕ್ರಿಯೆಯನ್ನು ಗಮನಿಸಿದರೇ ಕುಂಬಳಕಾಯಿ ಕಳ್ಳ ಎಂದರೇ ಹೆಗಲು ಮುಟ್ಟಿ ನೋಡಿಕೊಂಡಂತಾಗಿದೆ. ಹಾಗಾಗಿ ಜನಪ್ರತಿನಿಧಿಯಾಗಿ ಶಾಸಕ ಮಂಜು ಅವರು ಪ್ಲಾನ್ ಕುರಿತು ತಮ್ಮ ಬಳಿ ಹೇಳಿಕೊಂಡಿರುವ ಜನರಿಗೆ ತಿಳುವಳಿಕೆ ನೀಡಿರುವುದರಲ್ಲಿ ತಪ್ಪಿಲ್ಲ. ಆದರೆ ಅದನ್ನು ಶ್ರೀಧರ್‌ಗೌಡ ವೈಯಕ್ತಿಕವಾಗಿ, ರಾಜಕೀಯ ದ್ವೇಷದಿಂದ ಶಾಸಕರ ಮೇಲೆ ಗುರುತರವಾದ ಆರೋಪ ಮಾಡಿರುವುದನ್ನು ಪಕ್ಷ ಮತ್ತು ಅಭಿಮಾನಿಗಳು ಸಹಿಸುವುದಿಲ್ಲ. ಈ ರೀತಿಯ ತಪ್ಪು ಹೇಳಿಕೆಗಳನ್ನು ಕೇಳಿಸಿಕೊಂಡವರಿಗೆ ಮತ್ತು ಅದನ್ನು ನೋಡಿದಂತಹ ಕೆಲವರಿಗೆ ರುಚಿ ಅನಿಸಬಹುದು ಮತ್ತೆ ಕೆಲವರಿಗೆ ಸರಿ ಅನಿಸಲ್ಲ. ಶಾಸಕರು ಬೆಳೆದು ಬಂದಿರುವ ರೀತಿಯನ್ನು ಕ್ಷೇತ್ರದ ಜನರು ಗಮನಿಸಿ ಆಶೀರ್ವಾದ ಮಾಡಿದ್ದಾರೆ. ಅವರನ್ನು ಆಯ್ಕೆ ಮಾಡಿರುವ ಮತದಾರರಿಗೆ ಅಗೌರವ ತರುವ ನಿಟ್ಟಿನಲ್ಲಿ ಮಾತನಾಡಬೇಡಿ. ಅದರಿಂದ ನಿಮಗೆ ಯಾವುದೇ ಪ್ರಯೋಜನವಾಗದು ಎಂದು ಎಚ್ಚರಿಸಿದರು.

ನಗರ ಯೋಜನಾ ಪ್ರಾಧಿಕಾರ ಮಾಜಿ ಅಧ್ಯಕ್ಷ ಮುತ್ತಿಗೆ ರಮೇಶ್ ಅವರು ಮಾತನಾಡಿ, ಶಾಸಕ ಎ.ಮಂಜು ಅವರು 1989ರಿಂದಲೂ ಹೋರಾಟ ಮಾಡಿಕೊಂಡು ನಾಲ್ಕು ಬಾರಿ ಶಾಸಕರು, ಸಚಿವರಾಗಿ ಗುರುತಿಸಿ ಕೊಂಡಿದ್ದಾರೆ. ಅವರ ಜೊತೆಯೆ ಸಾವಿರಾರು ಮಂದಿ ಬೆಳೆದು ಬದುಕು ಕಟ್ಟಿ ಕೊಂಡಿದ್ದಾರೆ. ಶ್ರೀಧರ್‌ಗೌಡ ತಮ್ಮ ಹೇಳಿಕೆ ಮೂಲಕ ಶಾಸಕರು ಕೆಲವು ಕುಟುಂಬದವರನ್ನು ಹಾಳುಮಾಡಿದರು ಎಂದು ದ್ವೇಷದಿಂದ ಸಲ್ಲದ ಮಾತುಗಳನ್ನಾಡಿರುವುದು ಸತ್ಯಕ್ಕೆ ದೂರವಾದದು. ಶ್ರೀಧರ್‌ಗೌಡ ಹೇಳಿಕೆ ನೀಡುವುದನ್ನು ಗಮನಿಸಿದರೇ ಅವರ ಸೋಲಿನ ಹತಾಶೆಯನ್ನು ಎತ್ತಿತೋರಿಸುತ್ತಿದೆ ಎಂದು ಟೀಕಿಸಿದರು.

ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ನರಸೇಗೌಡ, ಮುಖಂಡರಾದ ಮುತ್ತಿಗೆ ರಾಜೇಗೌಡ, ಕೃಷ್ಣೇಗೌಡ, ಗಾಂಧಿನಗರ ದಿವಾಕರ್‌ಗೌಡ, ದೊಡ್ಡಮಗ್ಗೆ ಮಂಜು, ಬಿಟ್ಟಗೌಡನಹಳ್ಳಿ ಲೋಕೇಶ್, ದುಮ್ಮಿ ಮಂಜು ಇತರರು ಇದ್ದರು.

## ಜೋರು ಮಳೆಯಿಂದ ಜನ ಜೀವನಕ್ಕೆ ಅಡಚಣೆ



• ಪ್ರಜೋದಯ ವರದಿ

**ಹಾಸನ:** ನಗರ ಹಾಗು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಶನಿವಾರ ಮಧ್ಯಾಹ್ನ ಸುರಿದ ಜೋರು ಮಳೆಯಿಂದ ಜನ ಜೀವನಕ್ಕೆ ಅಡಚಣೆ ಉಂಟಾಯಿತು. ಸುಮಾರು 2 ಗಂಟೆಗೂ ಹೆಚ್ಚು ಕಾಲ ಧಾರಾಕಾರ ಮಳೆಯಾಗಿದ್ದು, ನಗರದಲ್ಲಿ ಹಲವು ಪ್ರಮುಖ ರಸ್ತೆಗಳಲ್ಲಿ ನೀರು ನಿಂತು ಸಂಚಾರ ಅಸ್ತವ್ಯಸ್ತಗೊಂಡಿತು.

ಮಧ್ಯಾಹ್ನ 2.45ರ ಸುಮಾರಿಗೆ ಆರಂಭವಾದ ಮಳೆ, ಗುಡುಗು, ಭಾರೀ ಗಾಳಿಯೊಂದಿಗೆ ಮಳೆ ಸುರಿಯಿತು. ನಗರದ ಹೊಸ ಬಸ್ ನಿಲ್ದಾಣ, ಎನ್.ಆರ್.ರಸ್ತೆ, ಬಿ.ಎಂ.ರಸ್ತೆ ಹಾಗು ಮಾರುಕಟ್ಟೆ ಪ್ರದೇಶದಲ್ಲಿ ಮಳೆ ನೀರು ರಸ್ತೆಗಳಲ್ಲಿ ಹರಿದು ಜನರು ಪರದಾಡುವ ಪರಿಸ್ಥಿತಿ ನಿರ್ಮಾಣವಾಯಿತು. ಕೆಲವೆಡೆ ಒಳಚರಂಡಿ ಮುಚ್ಚಿ ಮಳೆ ನೀರು ರಸ್ತೆ ಮೇಲೆ ಉಕ್ಕಿ ಹರಿದಿದ್ದರಿಂದ ವಾಹನ ಸವಾರರು ಪರದಾಟ ನಡೆಸಿದರು. ಮಳೆಯ ವೇಳೆ ಹಲವರು ಅಂಗಡಿಗಳ ಒಳಗೆ, ಬಸ್ ನಿಲ್ದಾಣ, ಕಟ್ಟಡಗಳ ಶೆಡ್‌ಗಳ ಕೆಳಗೆ ಆಶ್ರಯ ಪಡೆದರು.

**ಮಳೆ ಮುನ್ಸೂಚನೆ**

ಹವಾಮಾನ ಇಲಾಖೆಯ ಪ್ರಕಾರ ಅರೇಬಿಯನ್ ಸಮುದ್ರದಿಂದ ಬೀಸುತ್ತಿರುವ ತೇವಾಂಶ ಗಾಳಿಯ ಪರಿಣಾಮವಾಗಿ ಮುಂದಿನ 24 ಗಂಟೆಗಳವರೆಗೆ ಜಿಲ್ಲೆಯಲ್ಲಿ ಭಾರೀ ಮಳೆಯಾಗುವ ಇದೆ. ಭಾನುವಾರ ಮಧ್ಯಾಹ್ನ ಹಾಗು ಸಂಜೆ ವೇಳೆ ಮತ್ತೆ ಮಳೆ ಬೀಳುವ ಸಾಧ್ಯತೆ ಹೆಚ್ಚಿದೆ.

## ಮೆಟ್ರೋ ಹಳದಿ ಮಾರ್ಗಕ್ಕೆ ಮೋದಿ ಚಾಲನೆ

• ಪ್ರಜೋದಯ ವರದಿ

**ಬೆಂಗಳೂರು:** ಬೆಂಗಳೂರು ಮೆಟ್ರೋ 3ನೇ ಹಂತದ ಯೋಜನೆಗೆ ಶಂಕುಸ್ಥಾಪನೆ, ಹಳದಿ ಮೆಟ್ರೋ ಮಾರ್ಗ ಉದ್ಘಾಟನೆ ಹಾಗೂ ಮೂರು ವಂದೇ ಭಾರತ್ ರೈಲುಗಳಿಗೆ ಹಸಿರು ನಿಶಾನೆ ತೋರುವ ಅಂಗವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾನುವಾರ ಬೆಂಗಳೂರಿಗೆ ಆಗಮಿಸಲಿದ್ದಾರೆ.

ಸುಮಾರು 4 ಗಂಟೆಗಳ ನಗರ ಭೇಟಿ ಸಮಯದಲ್ಲಿ ಪ್ರಧಾನಿ ಮೋದಿಯವರು 3 ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಬೆಳಿಗ್ಗೆ 10 ಗಂಟೆಗೆ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಬಂದಿಳಿಯುವ ಮೋದಿಯವರು, ಹೆಲಿಕಾಪ್ಟರ್ ಮತ್ತು ರಸ್ತೆಯ ಮೂಲಕ ಕೆಎಸ್‌ಆರ್‌ಬೆಂಗಳೂರು (ನಗರ) ರೈಲು ನಿಲ್ದಾಣಕ್ಕೆ ಪ್ರಯಾಣಿಸಲಿದ್ದಾರೆ, ಅಲ್ಲಿ ಕೆಎಸ್‌ಆರ್ ಬೆಂಗಳೂರು-ಬೆಳಗಾವಿ ನಡುವಿನ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಹಸಿರು ನಿಶಾನೆ ತೋರಲಿದ್ದಾರೆ. ಅಮೃತಸರ-ಶ್ರೀಮಾತಾ ವೈಷ್ಣೋದೇವಿ ಕತ್ರಿ ಮತ್ತು ಅಜ್ನಿ (ನಾಗ್ಪುರ)-ಪುಣೆ ನಡುವಿನ ಇನ್ನೂ ಎರಡು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳನ್ನು ವರ್ಚುವಲ್ ಮೂಲಕ ಹಸಿರು ನಿಶಾನೆ ತೋರಲಿದ್ದಾರೆ.

# ವಸತಿ ಯೋಜನೆಯಡಿ ಗೋಲ್ಮಾಲ್: 2 ಕೋಟಿ ವಂಚನೆ

## ಜಿಲ್ಲಾ ವಸತಿ ನೋಡಲ್ ಅಧಿಕಾರಿಯಿಂದ 190ಕ್ಕೂ ಹೆಚ್ಚು ಫಲಾನುಭವಿಗಳಿಗೆ ಪಂಗನಾಮ

• ಪ್ರಜೋದಯ ವರದಿ

**ಹಾಸನ:** ಪಿಎಂಎವೈ ವಸತಿ ಯೋಜನೆಯಡಿ ಜಿಲ್ಲೆಯ 190ಕ್ಕೂ ಹೆಚ್ಚು ಫಲಾನುಭವಿಗಳ 2 ಕೋಟಿ ರೂ. ಹೆಚ್ಚಿನ ಅನುದಾನವನ್ನು ಜಿಲ್ಲಾ ವಸತಿ ನೋಡಲ್ ಅಧಿಕಾರಿ ದುರುಪಯೋಗಪಡಿಸಿಕೊಂಡಿರುವ ಹಗರಣ ಬಯಲಿಗೆ ಬಂದಿದೆ.

ಅಕ್ರಮದ ಬಗ್ಗೆ ಸಕಲೇಶಪುರ ನಗರ ಪೊಲೀಸ್ ಠಾಣೆಯಲ್ಲಿ ಜಿಲ್ಲಾ ಪಂಚಾಯಿತಿಯ ವಸತಿ ನೋಡಲ್ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಕೆ.ಎಂ.ರಾಜೇಶ್ ವಿರುದ್ಧ ಪ್ರಕರಣ ದಾಖಲಾಗಿದೆ.

2022ರವರೆಗೆ ಸಕಲೇಶಪುರ ತಾಲ್ಲೂಕು ಪಂಚಾಯಿತಿಯಲ್ಲಿಯಲ್ಲಿ ವಸತಿ ನೋಡಲ್ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಕೆ.ಎಂ.ರಾಜೇಶ್ ನಂತರ 2022ರಿಂದ ಜಿಲ್ಲಾ ವಸತಿ ನೋಡಲ್ ಅಧಿಕಾರಿಯಾಗಿ (ಹೆಚ್ಚುವರಿ ಪ್ರಭಾರ) ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಈ ವೇಳೆ ಪಿಎಂಎವೈ ಯೋಜನೆಯ ಫಲಾನುಭವಿಗಳಿಗೆ ಬಿಡುಗಡೆಯಾದ ಅನುದಾನದಲ್ಲಿ ಸಕಲೇಶಪುರ ತಾಲ್ಲೂಕು ಪಂಚಾಯಿತಿಯ ವಸತಿ ಲಾಗಿನ್ ಹಾಗು ಜಿಲ್ಲಾ ಪಂಚಾಯಿತಿ ಯೋಜನಾಧಿಕಾರಿ ಲಾಗಿನ್ ದುರ್ಬಳಕೆ ಮಾಡಿಕೊಂಡು ಸುಮಾರು 190ಕ್ಕೂ ಹೆಚ್ಚು ಫಲಾನುಭವಿಗಳ




### ನಕಲಿ ದಾಖಲೆ ಸೃಷ್ಟಿಸಿ

ಫಲಾನುಭವಿಗಳ ಮನೆ ನಿರ್ಮಾಣದ ಪ್ರಗತಿಯ ಫೋಟೋಗಳ ಅಪ್‌ಲೋಡ್ ಮಾಡಿರುವುದನ್ನು ಗಮನಿಸಿದಾಗ ನಕಲು ಮಾಡಿರುವುದು ಸ್ಪಷ್ಟವಾಗಿದೆ. ಈ ಎಲ್ಲಾ ವ್ಯತ್ಯಾಸಗಳು ಕಂಡು ಬಂದಿರುವ ಬಗ್ಗೆ ಗುರುವಾರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಅವರ ಗಮನಕ್ಕೆ ತರಲಾಗಿದೆ. ಅವರ ನಿರ್ದೇಶನದಂತೆ ಅಕ್ರಮ ನಡೆಸಿರುವ ವಸತಿ ನೋಡಲ್ ಅಧಿಕಾರಿ ರಾಜೇಶ್ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದು, ಪ್ರಕರಣ ದಾಖಲಿಸಿ ಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

### ಯಾರದ್ದೋ ಫೋಟೋ, ಯಾರದ್ದೋ ಬ್ಯಾಂಕ್ ಖಾತೆ

ಪಿಎಂಎವೈ ಯೋಜನೆಯಡಿ ಫಲಾನುಭವಿಗಳಿಗೆ ಹಣ ಬಾರದೆ ಇದ್ದರಿಂದ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗೆ ದೂರು ನೀಡಿದ ಹಿನ್ನಲೆ ಆನ್‌ಲೈನ್‌ನಲ್ಲಿ ಪರಿಶೀಲಿಸಿದಾಗ ಗ್ರಾಮ ಪಂಚಾಯಿತಿ ಹೆಸರು, ಫಲಾನುಭವಿಯ ಹೆಸರು, ಗ್ರಾಮ, ಫಲಾನುಭವಿ ಸಂಖ್ಯೆ ಮಂಜೂರಾತಿ ಸಂಖ್ಯೆ ಇವುಗಳು ಸಕಲೇಶಪುರ ತಾಲ್ಲೂಕಿನ ಫಲಾನುಭವಿಗಳಾಗಿವೆ. ಆದರೆ, ಬ್ಯಾಂಕ್ ಹೆಸರು ಶಾಖೆ ಹೆಸರು ಐಎಫ್‌ಎಸ್‌ಸಿ ಕೋಡ್, ಹಾಸನ ತಾಲ್ಲೂಕಿಗೆ ಸಂಬಂಧಿಸಿದ ವಿವಿಧ ಶಾಖೆಗಳಿಗೆ ಸಂಬಂಧಿಸಿದ್ದಾಗಿವೆ.

### ಪ್ರಮುಖಾಂಶಗಳು...

- ತಾ.ಪಂ, ಜಿ.ಪಂ ಲಾಗಿನ್ ದುರ್ಬಳಕೆ
- ಕೆ.ಎಂ.ರಾಜೇಶ್ ವಿರುದ್ಧ ಪ್ರಕರಣ ದಾಖಲು
- ಪಿಎಂಎವೈ ಯೋಜನೆಯಡಿ ಅಕ್ರಮ

ಅಂದಾಜು 2 ಕೋಟಿ ರೂ. ಸರ್ಕಾರದ ಅನುದಾನವನ್ನು ಅರ್ಹ ಫಲಾನುಭವಿಗಳ ಖಾತೆಗೆ ಜಮೆ ಮಾಡುವ ಬದಲು ಅವರ ಬೇರೊಂದು ತಾಲ್ಲೂಕಿನ ವಿವಿಧ ಖಾತೆದಾರರಿಗೆ ಸರ್ಕಾರದ ಅನುದಾನವನ್ನು ಜಮೆ ಮಾಡಿಸಿ ಹಣಕಾಸು ಅವ್ಯವಹಾರ ಮಾಡಲಾಗಿದೆ ಎಂದು ಸಕಲೇಶಪುರ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಜಿ.ಡಿ.ಗಂಗಾಧರನ್ ದೂರು ನೀಡಿದ್ದಾರೆ.

**ಲಾಗಿನ್ ದುರ್ಬಳಕೆ ಮಾಡಿಕೊಂಡು ಅಕ್ರಮ**

ವಸತಿ ಯೋಜನೆಗಳ ಫಲಾನುಭವಿಗಳು ಮನೆ ನಿರ್ಮಾಣ ಮಾಡಿಕೊಂಡಿರುವ ಬಗ್ಗೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತೆಗೆದ ಫೋಟೋವನ್ನು ತಾಲ್ಲೂಕು ಪಂಚಾಯಿತಿ ವಸತಿ ನೋಡಲ್ ಅಧಿಕಾರಿ, ಪರಿಶೀಲಿಸಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗೆ ಲಿಖಿತವಾಗಿ ಗಮನಕ್ಕೆ ತರಬೇಕು.

» ನಾಲ್ಕನೇ ಪುಟದಲ್ಲಿ

## ನಂಜೆದೇವರ ಕಾವಲಿನಲ್ಲಿ 1 ಕೋ.ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ

• ಪ್ರಜೋದಯ ವರದಿ

**ಹಾಸನ:** ಐತಿಹಾಸ ಹಿನ್ನಲೆ ಹೊಂದಿರುವ ತಾಲ್ಲೂಕಿನ ನಂಜೆದೇವರ ಕಾವಲು ಗ್ರಾಮದ ಶ್ರೀ ನಂಜುಂಡೇಶ್ವರ ಸ್ವಾಮಿ ದೇವಾಲಯಕ್ಕೆ ತೆರಳಲು 1 ಕೋಟಿ ರೂ. ವೆಚ್ಚದಲ್ಲಿ ರಸ್ತೆ ನಿರ್ಮಿಸಿ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ ಎಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಹೇಳಿದರು.

ತಾಲ್ಲೂಕಿನ ನಂಜೆದೇವರ ಕಾವಲು ಗ್ರಾಮದಲ್ಲಿ ಶನಿವಾರ ರಸ್ತೆಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಹಾಸನ ಕ್ಷೇತ್ರದಲ್ಲಿ 900 ವರ್ಷಗಳ ಐತಿಹಾಸಿಕ ದೇವಸ್ಥಾನ ಇರುವುದು ನಮ್ಮ ಸೌಭಾಗ್ಯ, ಅದನ್ನು ಉಳಿಸಿ ಬೆಳೆಸುವುದು ಎಲ್ಲರ ಕರ್ತವ್ಯ. ಈ ನಿಟ್ಟಿನಲ್ಲಿ ಗ್ರಾಮಸ್ಥರು ಬಂದು ರಸ್ತೆ ನಿರ್ಮಿಸಿಕೊಡಿ ಎಂದು ಕೇಳಿದ ಕೂಡಲೇ ಒಪ್ಪಿಗೆ ನೀಡಿ, ಶೀಘ್ರ ಕಾಮಗಾರಿ ಮುಗಿಸಿ ಭಕ್ತರಿಗೆ ಅನುಕೂಲ ಕಲ್ಪಿಸಬೇಕೆಂದು ಹಿಂದೆಯೇ ಸೂಚನೆ ನೀಡಿದ್ದೆ, ಅದರಂತೆ ಇಂದು ಕಾರ್ಯ ನೆರವೇರಿದೆ ಎಂದರು.

ನಮ್ಮ ತಂದೆಯ ಕಾಲದಿಂದಲೂ ದೇವಾಲಯಗಳ ಅಭಿವೃದ್ಧಿಗೆ ನಮ್ಮದೇ ಆದ ಸಾಕಷ್ಟು ಕೆಲಸ ಮಾಡಿದ್ದೇವೆ, ದೇವಾಲಯಕ್ಕೆ ಇನ್ನು ಹೆಚ್ಚು ಮೂಲ ಸೌಕರ್ಯದ ಅಗತ್ಯವಿದ್ದು ಎಲ್ಲವನ್ನೂ ಪೂರೈಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಅದಕ್ಕೆ ಎಲ್ಲರ ಸಹಕಾರ ಅಗತ್ಯ. ಹಿಂದೆ ತಮಗೆ ಸರ್ಕಾರ ನೀಡಿದ 10 ಕೋಟಿ ರೂ. ವಿಶೇಷ ಅನುದಾನದಲ್ಲಿ 1 ಕೋಟಿಯನ್ನು ಈ ರಸ್ತೆಗೆ ಬಳಕೆ ಮಾಡಲಾಗಿದೆ. ದೇವರ ಕೃಪೆಯಿಂದ ಕೇವಲ 15

» ನಾಲ್ಕನೇ ಪುಟದಲ್ಲಿ



### ಪಾರ್ವತಮ್ಮ ದೇಗುಲಕ್ಕೆ 5 ಕೋಟಿ ರೂ.

ನಂಜುಂಡೇಶ್ವರ ಸ್ವಾಮಿ ದೇವಾಲಯದ ಪಕ್ಕದಲ್ಲಿ ಪಾರ್ವತಮ್ಮ ಅವರ ದೇವಾಲಯ ನಿರ್ಮಾಣದ ಬಗ್ಗೆಯೂ ಗಮನಕ್ಕೆ ಬಂದಿದ್ದು, ಅತೀ ಶೀಘ್ರವಾಗಿ ದೇವಾಲಯದ ಪಕ್ಕದಲ್ಲಿ ಹೊಸದಾಗಿ ಪಾರ್ವತಮ್ಮ ಅವರ ದೇವಾಲಯ ನಿರ್ಮಾಣಕ್ಕೆ ಮುಂದಿನ ಶಾಸಕರ ಅನುದಾನದಲ್ಲಿ 5 ಕೋಟಿ ರೂ. ನೀಡುವುದಾಗಿ ಭರವಸೆ ನೀಡಿದ ಅವರು, ಗ್ರಾಮಸ್ಥರ ಮತ್ತೊಂದು ಬೇಡಿಕೆಯಂತೆ 108 ಅಡಿ ಶಿವನ ವಿಗ್ರಹ ಸ್ಥಾಪನೆ ಬಗ್ಗೆಯೂ ಗ್ರಾಮಸ್ಥರು ಬೇಡಿಕೆ ಇಟ್ಟಿದ್ದಾರೆ, ಅದನ್ನೂ ಶೀಘ್ರವಾಗಿ ಮಾಡಲಾಗುವುದೆಂದು ಶಾಸಕರು ಭರವಸೆ ನೀಡಿದರು.

# ಬುದ್ಧಿಮಾಂಧ್ಯ ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ

## ಪೈಶಾಚಿಕ ಕೃತ್ಯದ ವಿಡಿಯೋ ವೈರಲ್ | ಮೂವರು ಆರೋಪಿಗಳ ಬಂಧನ, ಮತ್ತೊಬ್ಬನಿಗಾಗಿ ಶೋಧ

• ಪ್ರಜೋದಯ ವರದಿ

**ಹಾಸನ:** ಬುದ್ಧಿಮಾಂಧ್ಯ ಯುವತಿ ಮೇಲೆ ಸಾಮೂಹಿಕವಾಗಿ ಅತ್ಯಾಚಾರ ಎಸಗಿ, ಅದನ್ನು ವಿಡಿಯೋ ಚಿತ್ರಿಕರಿಸಿ ಯುವತಿಯ ತಮ್ಮನ ಮೊಬೈಲ್‌ಗೆ ಕಳುಹಿಸಿರುವ ಅಮಾನವೀಯ ಘಟನೆ ನಗರದಲ್ಲಿ ನಡೆದಿದೆ.

ಅತ್ಯಾಚಾರಕ್ಕೊಳಗಾದ ಯುವತಿಯ ಸಹೋದರ ಪೆನ್‌ಷನ್‌ಮೊಹಲ್ಲಾ ಪೊಲೀಸ್ ಠಾಣೆಗೆ ಮೂವರ ವಿರುದ್ಧ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ. ಮತ್ತೊಬ್ಬ ಆರೋಪಿ ತಲೆಮರೆಸಿ ಕೊಂಡಿದ್ದು, ಬಂಧನಕ್ಕಾಗಿ ಪೊಲೀಸರು ಶೋಧ ನಡೆಸುತ್ತಿದ್ದಾರೆ. ಆರೋಪಿಗಳ ಪೈಶಾಚಿಕ ಕೃತ್ಯಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ನಗರದಲ್ಲಿ ಗಾಂಜಾ ಮಾರಾಟ ಹೆಚ್ಚಾಗಿದ್ದು ಅದರಿಂದಲೇ ಇಂತಹ ಕೃತ್ಯಗಳು ನಡೆಯುತ್ತಿವೆ ಎಂದು ನಾಗರಿಕರು ಆರೋಪಿಸಿದ್ದಾರೆ.



**8 ದಿನಗಳ ಹಿಂದೆ ಕೃತ್ಯ**


ಕುಟುಂಬ ನಿರ್ವಹಣೆಗಾಗಿ ಮ್ಯಾಕಾನಿಕ್ ಕೆಲಸ ಮಾಡುವ ಅಂಗವಿಕಲ ದಂಪತಿಯ ಪುತ್ರಿ ಬುದ್ಧಿಮಾಂಧ್ಯಳಾಗಿದ್ದು ಮನೆಯಲ್ಲಿಯೇ ಇರುತ್ತಿದ್ದಳು. ಕಳೆದ 8 ದಿನಗಳ ಹಿಂದೆ ತಂದೆ, ತಮ್ಮ ಕೆಲಸಕ್ಕೆ ಹೋಗಿದ್ದು ಮನೆಯಲ್ಲಿ ಯಾರು ಇಲ್ಲದ ವೇಳೆ ಬಂದಿರುವ ಮೂವರು ಆರೋಪಿಗಳು ಬುದ್ಧಿಮಾಂಧ್ಯ ಯುವತಿಯನ್ನು ಕರೆದೊಯ್ದು ಸಾಮೂಹಿಕವಾಗಿ ಅತ್ಯಾಚಾರ ಎಸಗಿ ಅದರ ವಿಡಿಯೋ ರೆಕಾರ್ಡ್ ಮಾಡಿ ವೈರಲ್ ಮಾಡಿದ್ದಾರೆ.

ಶುಕ್ರವಾರ ರಾತ್ರಿ ಕೆಲಸ ಮುಗಿಸಿ ಕೊಂಡು ಮನೆಗೆ ಬಂದು ವಿಶ್ರಾಂತಿ ಪಡೆಯುತ್ತಿದ್ದ ವೇಳೆ ಅತ್ಯಾಚಾರ ಎಸಗಿರುವ ವಿಡಿಯೋವನ್ನು ಯುವತಿಯ ಸಹೋದರನ ಮೊಬೈಲ್‌ಗೆ ಆತನ ಸ್ನೇಹಿತ ಕಳುಹಿಸಿದ್ದಾನೆ. ವಿಡಿಯೋವನ್ನು ಸೂಕ್ಷ್ಮವಾಗಿ ಗಮನಿಸಿದಾಗ ತನ್ನ ಅಕ್ಕನ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿರುವುದು ಬೆಳಕಿಗೆ ಬಂದಿದೆ.

ನಂತರ ವಿಡಿಯೋ ಕಳುಹಿಸಿದ ಸ್ನೇಹಿತನಿಗೆ ಕರೆ ಮಾಡಿ ಯಾರು ವಿಡಿಯೋ ಕಳುಹಿಸಿದ್ದ ಎಂದು ಕೇಳಿದಾಗ ಉಮ್ರಾನ್ ಎಂಬುವವನು ನನಗೆ ವ್ಯಾಟ್ಸ್ಆ್ಯಪ್ ಮೂಲಕ ಕಳುಹಿಸಿದ್ದಾನೆ ಎಂದು ಹೇಳಿದ್ದಾನೆ. ಅಷ್ಟರಲ್ಲಿ

» ನಾಲ್ಕನೇ ಪುಟದಲ್ಲಿ

## ಗಾಯಾಳು ಆರೋಗ್ಯ ವಿಚಾರಿಸಿದ ಸಂಸದ



• ಪ್ರಜೋದಯ ವರದಿ

**ಹಾಸನ:** ಕಾಡಾನೆ ದಾಳಿಯಿಂದ ಗಂಭೀರ ಗಾಯಗೊಂಡು ಹಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಹಿಳೆಯ ಆರೋಗ್ಯವನ್ನು ಶನಿವಾರ ಸಂಸದ ಶ್ರೇಯಸ್ ಪಟೇಲ್ ಅವರು ಆಸ್ಪತ್ರೆಗೆ ಭೇಟಿ ನೀಡಿ ಯೋಗಕ್ಷೇತ್ರ ವಿಚಾರಿಸಿದರು.

ಅರಕಲಗೂಡು ತಾಲ್ಲೂಕು ಮಲ್ಲಿಪಟ್ಟಣ ಹೋಬಳಿ ಮದಲಾಪುರ ಗ್ರಾಮದ ಕಮಲಮ್ಮ ಎಂಬ ಮಹಿಳೆ ಮಂಗಳವಾರ ಕಾಡಾನೆ ದಾಳಿಯಿಂದ ಗಂಭೀರ ಗಾಯಗೊಂಡು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದರು. ಆಸ್ಪತ್ರೆಗೆ ಭೇಟಿ ನೀಡಿದ ಸಂಸದರು, ಮಹಿಳೆಗೂ ಧೈರ್ಯ ತುಂಬಿದರು.

ಈ ವೇಳೆ ಹಿಮ್ಸ್ ನಿರ್ದೇಶಕ ಡಾ. ರಾಜಣ್ಣ ಅವರೊಂದಿಗೆ ಮಾತನಾಡಿ, ರೈತ ಮಹಿಳೆ ಬೇಗ ಗುಣಮುಖರಾಗಲೂ ಉತ್ತಮ ರೀತಿಯ ಚಿಕಿತ್ಸೆ ನೀಡುವಂತೆ ಸಲಹೆ ನೀಡಿದರು.

## ಸಿಐಟಿಯು 7ನೇ ಜಿಲ್ಲಾ ಸಮ್ಮೇಳನ: ಆಳುವ ಸರ್ಕಾರಗಳ ವಿರುದ್ಧ ಆಕ್ರೋಶ

# ಬೆಲೆ ಏರಿಕೆಗೆ ಬಂಡವಾಳಶಾಹಿಗಳೇ ಕಾರಣ: ಮೀನಾಕ್ಷಿ ಸುಂದರಂ

• ಪ್ರಜೋದಯ ವರದಿ

**ಹಾಸನ:** ದೇಶದ ಆರ್ಥಿಕತೆ ದುಡಿಯುವ ಜನರಿಗಲ್ಲ ಎಂಬ ಸ್ಥಿತಿ ನಿರ್ಮಿಸಿರುವ ಬಂಡವಾಳಶಾಹಿಗಳಿಗೆ ಪರ್ಯಾಯ ಶಕ್ತಿಯಾಗಿ ದುಡಿಯುವ ಜನತೆ ಎದ್ದು ನಿಲ್ಲಲಿದೆ ಎಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಅವರು ಹೇಳಿದರು.

ನಗರದ ಕನ್ನಡ ಸಾಹಿತ್ಯಪರಿಷತ್ ಭವನದಲ್ಲಿ ಶನಿವಾರ ಸಿಐಟಿಯು 7ನೇ ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ದೇಶ ಅಭಿವೃದ್ಧಿಯಾಗಬೇಕು, ದೇಶವನ್ನು ಉಳಿಸಬೇಕು ಎಂದರೆ ಕಾರ್ಮಿಕರು ಹೆಚ್ಚು ದುಡಿಯಬೇಕು ಎಂದು ಈ ದೇಶದ ಬಂಡವಾಳಶಾಹಿಗಳು ಹೇಳುತ್ತಿದ್ದಾರೆ. ಇವತ್ತಿನ ಬೆಲೆ ಏರಿಕೆಗೆ ಮೂಲ ಕಾರಣ ಇದೇ ಬಂಡವಾಳಶಾಹಿಗಳು ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೆ ತರುತ್ತಿರುವ ಜನವಿರೋಧಿ ನೀತಿಗಳಿಂದ ಜನರು ಬೀದಿಗೆ ಬರುವಂತಾಗಿದೆ. ಇನ್ನೊಂದೆಡೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಬದಲಾವಣೆಗಳಾಗುತ್ತಿವೆ. ರಷ್ಯಾದಿಂದ ಬರುವ ವಸ್ತುಗಳಿಂದ ಭಾರತಕ್ಕೆ ಲಾಭವಿದೆ. ನಮ್ಮ ದೇಶದಲ್ಲಿನ ಆಯಿಲ್ ಕಂಪನಿಗಳಿಗೆ ಶೇ.80 ರಷ್ಟು ಲಾಭವಿದೆ ಮತ್ತು ಕೇಂದ್ರ ಸರ್ಕಾರಕ್ಕೆ ಎರಡು ಲಕ್ಷ ಕೋಟಿ ತೆರಿಗೆಯಿಂದ ಲಾಭ ಬಂದಿದೆ. ಆದರೆ, ಈ ಲಾಭದ ಶೇ.1 ಭಾಗವೂ ಜನರಿಗೆ ಸಿಗುತ್ತಿಲ್ಲ ಎಂದು ದೂರಿದರು.

**ಬಡವರು ಶ್ರೀಮಂತರಾದರೆ ಸಮಸ್ಯೆ**

ನಮ್ಮ ದೇಶದಲ್ಲಿ ಹುಟ್ಟಿದ ಎಂಟು ತಿಂಗಳೊಳಗಿನ ಕರುವನ್ನು ವಿದೇಶಕ್ಕೆ ರಫ್ತು ಮಾಡುವುದರಲ್ಲಿ ಭಾರತ ಒಂದನೇ ಸ್ಥಾನದಲ್ಲಿದೆ. ರಫ್ತು ಮಾಡುತ್ತಿರುವವರೆಲ್ಲರೂ ಅದೇ ಹಿಂದೂ ಸಮಾಜದ ಬಂಡವಾಳಿಗರು. ಕರ್ನಾಟಕ ಸರ್ಕಾರ ಒಂದೆ ಕಂಪನಿಗೆ 16 ಸಾವಿರ ಕೋಟಿ ಹಣ ಖರ್ಚು ಮಾಡಿದೆ.

» ನಾಲ್ಕನೇ ಪುಟದಲ್ಲಿ




### ಹೋರಾಟ ಮಾಡಿಯೇ ಎಲ್ಲಾ ಪಡೆಯಬೇಕು

ಕಾಯಕವೇ ಕೈಲಾಸ ಎನ್ನುವಂತೆ ನಮ್ಮ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ದೇಶದ ದುಡಿಯುವ ಜನರನ್ನು ಮತ್ತದೆ ಹಳೆ ಕಾಲದ ಶೋಷಣೆಗೆ ಕರೆದೊಯ್ಯುತ್ತಿದೆ. ಕೆಲಸ ಮಾಡಬೇಕು ಆದರೆ ಬೇರೆ ಏನು ನಿರೀಕ್ಷಿಸಬಾರದು ಎಂದು ಭವದ್ಗೀತೆ ಹೇಳುತ್ತಲಿದೆ, ದುಡಿಯುವ ಜನರಿಗೆ ದುಡಿಮೆಯ ನಂತರ ಕೂಲಿ ಸಿಗದಿದ್ದರೆ ಅವರಿಗೆ ಬದುಕಲು ಸಾಧ್ಯವಿಲ್ಲ. ಹಾಗಾಗಿ ನಾವು ಎಲ್ಲವನ್ನು ಪ್ರಶ್ನೆ ಮಾಡಿ ಹೋರಾಟ ಮಾಡಿ ಪಡೆದುಕೊಳ್ಳ ಬೇಕೆಂದು ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಹೆಚ್.ಆರ್.ನವೀನ್ ಕುಮಾರ್ ಅವರು ಹೇಳಿದರು.

## ಪ್ರವಾಹ: ಮನೆ ಕಳೆದುಕೊಂಡವರಿಗೆ 5 ಲಕ್ಷ ರೂ. ಪರಿಹಾರ

**ಉತ್ತರಕಾಶಿ:** ಮೇಘ ಸ್ಫೋಟದಿಂದ ಉಂಟಾದ ಪ್ರವಾಹದಿಂದ ಮನೆ ಕಳೆದುಕೊಂಡವರಿಗೆ 5 ಲಕ್ಷ ರೂ. ಪರಿಹಾರ ನೀಡುವುದಾಗಿ ಉತ್ತರಾಖಂಡ ಮುಖ್ಯ ಮಂತ್ರಿ ಪುಷ್ಕರ್ ಸಿಂಗ್ ಧಾಮಿ ಘೋಷಿಸಿದ್ದಾರೆ.

ಧರಾಲಿ ಗ್ರಾಮದಲ್ಲಿ ನಾಪತ್ತೆಯಾದವರ ಶೋಧಕ್ಕಾಗಿ ರಕ್ಷಣಾ ಸಿಬ್ಬಂದಿ ಶನಿವಾರವೂ ಕಾರ್ಯಾಚರಣೆ ನಡೆಸಿದ್ದಾರೆ. ಮಣ್ಣಿನ ರಾಶಿ, ಅವಶೇಷಗಳಲ್ಲಿ ಸಿಲುಕಿರುವವರ ಪತ್ತೆಗಾಗಿ ಶ್ವಾನಗಳು, ಡ್ರೋನ್ ಬಳಸಲಾಗಿದೆ. ಶನಿವಾರ 287 ಮಂದಿಯನ್ನು ರಕ್ಷಿಸಿದ್ದು, ಮಂಗಳವಾರದಿಂದ ಈ ವರೆಗೆ ಒಂದು ಸಾವಿರಕ್ಕೂ ಹೆಚ್ಚು ಜನರನ್ನು ರಕ್ಷಿಸಲಾಗಿದೆ. ಸಂಕಷ್ಟಕ್ಕೆ ಸಿಲುಕಿದ ಜನರನ್ನು ಸುರಕ್ಷಿತ ಸ್ಥಳಗಳಿಗೆ ಕರೆದುಕೊಂಡು ಹೋಗಲು ನಾಲ್ಕು ಹೆಲಿಕಾಪ್ಟರ್‌ಗಳನ್ನು ನಿಯೋಜಿಸಲಾಗಿದೆ.

# ಹಬ್ಬದ ನಲ್ಮೆಯ ನಂತರದ ನರಳಾಟ ಅನಿವಾರ್ಯವೇ?

**ಹೂವಿನ ಅಲಂಕಾರ, ಮಾವಿನ ತೋರಣ, ಚೆಂದದ ಮಂಟಪ, ಬಾಳೆ ಕಂಬ, ಬಗೆ ಬಗೆಯ ದೀಪಗಳು- ಇವೆಲ್ಲವೂ ಮನೆ-ಮನಗಳಲ್ಲಿ ದೈವೀಕ ಭಾವವನ್ನು ಜಾಗೃತಗೊಳಿಸುವುದರಲ್ಲಿ ಸಂಶಯವೇ ಇಲ್ಲ. ಹಿರಿಯರಿಗೆ ಉಡುಗೊರೆಯನ್ನ ಕೊಟ್ಟು ಆಶೀರ್ವಾದ ಪಡೆಯುವುದರ ಮೂಲಕ ಹೊಸ ಶಕ್ತಿ ಮತ್ತು ಚೈತನ್ಯವನ್ನು ಪಡೆದ ಭಾವ. ಹಬ್ಬದ ದಿನ ಇಷ್ಟು ಸಂತೋಷವಾಗಿರುವ ಮನೆಯ ವಾತಾವರಣವು, ಹಬ್ಬದ ನಂತರ ಏಕಾಏಕಿ ಬದಲಾಗಲು ಕಾರಣವೇನು? ಹಬ್ಬದ ನಂತರ ಆರೋಗ್ಯದ ವ್ಯತ್ಯಾಸವಾಗುವುದು ಸರ್ವೇಸಾಮಾನ್ಯವಾಗಿ ಬಿಟ್ಟಿದೆ.**



ನಮ್ಮ ಜೈವಿಕ ಗಡಿಯಾರವನ್ನು ಗಮನಿಸಿ ಅದನ್ನು ರಕ್ಷಿಸುವುದು ಸಹ ಒಂದು ರೀತಿಯ ಪೂಜೆ. ಹಾಗಾಗಿ ಹಬ್ಬದ ಸಮಯದಲ್ಲಿ ಇದನ್ನು ಭಂಗಗೊಳಿಸುವುದು ಆರೋಗ್ಯಕ್ಕೆ ದೊಡ್ಡ ಪೆಟ್ಟನ್ನೇ ನೀಡುತ್ತದೆ. ಹಬ್ಬದ ಸಮಯದಲ್ಲಿ ಪ್ರಸಾದದ ಹೆಸರಿನಲ್ಲಿ ತಿನಿಸುಗಳನ್ನೆಲ್ಲ ಆಗಾಗ್ಗೆ ಮೆಲ್ಲುವುದು, ಪದೇ ಪದೆ ಕರುಂಕುರುಂ ಎಂದು ಚಪ್ಪರಿಸುವುದು ಸಾಮಾನ್ಯದ ವಿಷಯ. ಈ ಅಭ್ಯಾಸದಿಂದಲೇ ಅಜೀರ್ಣ, ವಾಂತಿ, ಬೇಧಿ, ಜ್ವರ, ತಲೆನೋವು ಕಾಣಿಸಿ ಕೊಂಡು ಹಬ್ಬದ ಆನಂದಕ್ಕೆ ಧಕ್ಕೆ ಉಂಟಾಗುತ್ತದೆ.

ಶ್ರಾವಣ ಮಾಸ ಬಂತೆಂದರೆ ಹಬ್ಬಗಳ ಸಾಲೋ ಸಾಲು. ಎಡೆ ಸಂಭ್ರಮ ಮತ್ತು ಸಡಗರ. ಮನೆಗಳೆ ಬೆಳಗಿ ಹೊಳೆಯುವ ಸಮಯ. ಮನಸ್ಸುಗಳು ಆನಂದದಿಂದ ತೇಲಾಡುವ ಸಂದರ್ಭ. ಬಂಧು-ಬಳಗವೆಲ್ಲ ಸೇರಿ ಪ್ರಾರ್ಥಿಸುವ ಕ್ಷಣ. ಊಟ-ತಿಂಡಿ ವಿಷಯದ ಬಗ್ಗೆಯಂತೂ ಹೇಳುವುದೇ ಬೇಡ. ಪ್ರತಿ ಹಬ್ಬಕ್ಕೊಂದು ಹೊಸ ರೀತಿಯ ವೈಶಿಷ್ಟ್ಯ.

ಪಾಯಸದಿಂದ ಹಿಡಿದು ಹೋಳಿಗೆಯವರೆಗೆ- ಎಲ್ಲ ಬಗೆಯ ಸಿಹಿತಿನಿಸುಗಳ ಉತ್ಸವವೇ ಆಗಿ ಬಿಡುತ್ತದೆ ನಮ್ಮ ಹಬ್ಬಗಳು. ಸ್ನೇಹಿತರ ಮನೆಗಳಿಗೆ ಹೋಗಿ ಜತೆಯಾಗಿ ಸಂಭ್ರಮಿಸುವುದರಲ್ಲಿರುವ ಸಂತಸವೇ ಬೇರೆ. ಹೊಸ ಬಟ್ಟೆಗಳನ್ನು ತೊಟ್ಟು ಮನೆಯ ತುಂಬಾ ಓಡಾಡುವ ಮುದ್ದು ಮಕ್ಕಳನ್ನು ನೋಡುವುದೇ ಮುದ.

ಹೂವಿನ ಅಲಂಕಾರ, ಮಾವಿನ ತೋರಣ, ಚೆಂದದ ಮಂಟಪ, ಬಾಳೆ ಕಂಬ, ಬಗೆ ಬಗೆಯ ದೀಪಗಳು- ಇವೆಲ್ಲವೂ ಮನೆ-ಮನಗಳಲ್ಲಿ ದೈವೀಕ ಭಾವವನ್ನು ಜಾಗೃತಗೊಳಿಸುವುದರಲ್ಲಿ ಸಂಶಯವೇ ಇಲ್ಲ. ಹಿರಿಯರಿಗೆ ಉಡುಗೊರೆಯನ್ನ ಕೊಟ್ಟು ಆಶೀರ್ವಾದ ಪಡೆಯುವುದರ ಮೂಲಕ ಹೊಸ ಶಕ್ತಿ ಮತ್ತು ಚೈತನ್ಯವನ್ನು ಪಡೆದ ಭಾವ.

ಹಬ್ಬದ ದಿನ ಇಷ್ಟು ಸಂತೋಷವಾಗಿರುವ ಮನೆಯ ವಾತಾವರಣವು, ಹಬ್ಬದ ನಂತರ ಏಕಾಏಕಿ ಬದಲಾಗಲು ಕಾರಣವೇನು? ಹಬ್ಬದ ನಂತರ ಆರೋಗ್ಯದ ವ್ಯತ್ಯಾಸವಾಗುವುದು ಸರ್ವೇಸಾಮಾನ್ಯವಾಗಿ ಬಿಟ್ಟಿದೆ. ಜ್ವರ, ಮೈ ಕೈ ನೋವು, ಅಜೀರ್ಣ, ವಾಂತಿ, ಬೇಧಿ, ನೆಗಡಿ, ತಲೆನೋವು, ಅಸಿಡಿಟಿ- ಹೀಗೆ ಬೇರೆ ಬೇರೆ ರೀತಿಯ ಕಾರಣಗಳಿಂದ ಬಳಲುವುದೇ ಹೆಚ್ಚಾಗಿ ಬಿಡುತ್ತದೆ.

ಹಬ್ಬದ ದಿನ ಸಿಕ್ಕ ಸಂತೋಷವೆಲ್ಲ ಒಂದೇ ದಿನದಲ್ಲಿ ನೀರು ಪಾಲಾದಂತೆ. ಮನೆಯಲ್ಲಿ ಯಾರೋ ಒಬ್ಬರು ಹುಷಾರು ತಪ್ಪಿದರೆ ಅದರ ಪರಿಣಾಮವಾಗಿ ಒಬ್ಬರಾದ ಮೇಲೆ ಒಬ್ಬರಂತೆ ಮನೆಯವರೆಲ್ಲರೂ ಮಲಗುವುದು ಖಂಡಿತ. ಒಂದನ್ನು ಖರೀದಿಸಿದರೆ ಇನ್ನೊಂದು ಉಚಿತ ಎಂಬ ಸೇಲ್‌ನಂತೆ ಹಬ್ಬದ ಜತೆ ಆರೋಗ್ಯದ ವ್ಯತ್ಯಾಸ ಉಚಿತವೇ? ನಲ್ಮೆಯ ನಂತರ ನರಳಾಟ ಅಗತ್ಯವೇ? ಹಬ್ಬದ ಸಮಯದಲ್ಲಿ ಸ್ವಾಸ್ಥ್ಯ ರಕ್ಷಣೆ ಅಸಾಧ್ಯವೇ? ಹಬ್ಬ ಮುಗಿದ ಮೇಲೂ ಆರೋಗ್ಯವಂತರಾಗಿ ನಮ್ಮ ದೈನಂದಿನ ಚಟುವಟಿಕೆಗಳನ್ನು ನಡೆಸುವುದು ಆಗಲಾರದ ವಿಷಯವೇ? ಬನ್ನಿ ನಮ್ಮ ಆಯುರ್ವೇದ ಆಚಾರ್ಯರ ನದ ಧಾರೆಯಲ್ಲಿ ಈ ಪ್ರಶ್ನೆಗಳಿಗೆ ಉತ್ತರ ಸಿಗುತ್ತದೆಯಾ ಎಂದು ನೋಡೋಣ...

ಸಾಮಾನ್ಯವಾಗಿ ಹಬ್ಬದ ಸಮಯದಲ್ಲಿ ನಮ್ಮ ದಿನಚರಿ ಮತ್ತು ಆಹಾರದಲ್ಲಿ ಆಗುವ ವ್ಯತ್ಯಾಸವೇ ನಮ್ಮ ಸ್ವಾಸ್ಥ್ಯ ಹಾಳಾಗಲು ಮುಖ್ಯ ಕಾರಣ. ಈ ವಿಷಯದಲ್ಲಿ ಹಬ್ಬದ ದಿನ ನಾವು ಪಾಲಿಸಬಹುದಾದ ಕೆಲ ನಿಯಮಗಳನ್ನು ಇಲ್ಲಿ ಹಂಚಿಕೊಂಡಿದ್ದೇನೆ. ಬ್ರಾಹ್ಮಿ ಮುಹೂರ್ತದಲ್ಲಿ ಏಳಬೇಕಾಗಿರುವುದು ಆಯುರ್ವೇದದ ಮೊದಲ ನಿಯಮ. ಹಬ್ಬದ ದಿನವಂತೂ ಇದನ್ನು ಪಾಲಿಸಲೇಬೇಕು.

ಬ್ರಾಹ್ಮಿ ಮುಹೂರ್ತ ಎಂದರೆ ಸೂರ್ಯೋದಯಕ್ಕೆ ಒಂದೂವರೆ ಗಂಟೆಯ ಮುಂಚಿನ ಸಮಯ. ಈ ಸಮಯದಲ್ಲಿ ಏಳುವುದು ನಮ್ಮ ಸ್ವಾಸ್ಥ್ಯವನ್ನು ಕಾಪಾಡುತ್ತದೆ. ವಿಶೇಷವಾಗಿ ಹಬ್ಬದ ದಿನ ಈ ಮುಹೂರ್ತದಲ್ಲಿ ಎದ್ದು ಧ್ಯಾನ-ಜಪಗಳಲ್ಲಿ ತೊಡಗಿದರೆ ಬಹಳ ಶ್ರೇಷ್ಠ. ಕಾರಣ, ಈ ಸಮಯದ ಪ್ರಶಾಂತ ವಾತಾವರಣದಲ್ಲಿ ಹೆಚ್ಚು ಪ್ರಯತ್ನವಿಲ್ಲದೆಯೇ ನಮ್ಮ ಶರೀರ-ಇಂದ್ರಿಯ-ಮನಸ್ಸುಗಳನ್ನು ಪರಮಾತ್ಮನ ಚಿಂತನೆಯಲ್ಲಿ ತೊಡಗಿಸಿಕೊಳ್ಳಬಹುದು ಮತ್ತು ಪ್ರಾಣದ ಅಂಶವು ನೈಸರ್ಗಿಕವಾಗಿ ಹೆಚ್ಚಾಗಿರುವುದರಿಂದ ಬಹಳ ಸಹಜವಾಗಿಯೇ ನಮ್ಮ ಶರೀರದಲ್ಲಿರುವ ಪ್ರಾಣಶಕ್ತಿಯು ವೃದ್ಧಿಯಾಗಿ ಇಡೀ ದಿನ ಲವಲವಿಕೆಯಿಂದ ಇರಲು ಸಹಕಾರಿಯಾಗುತ್ತದೆ.

ಬೆಳಗ್ಗೆ ಬೇಗ ಏಳಬೇಕಾಗಿರುವುದರಿಂದ ಹಿಂದಿನ ದಿನದ ಕೆಲಸವನ್ನು ಬೇಗ ಮುಗಿಸಿ ರಾತ್ರಿ ಬೇಗ ಮಲಗುವುದು ಆರೋಗ್ಯವನ್ನು ಮತ್ತಷ್ಟು ಕಾಪಾಡುತ್ತದೆ. ಸಾಮಾನ್ಯವಾಗಿ ರಾತ್ರಿ ನಿದ್ದೆಗೆಡುವುದು, ಮುಂದಿನ ದಿನ ಹಬ್ಬದ ಊಟ ಮಾಡಿ ಗಡದ ನಿಯನ್ನು ಮಾಡುವುದು ಬಹಳಷ್ಟು ಅನಾರೋಗ್ಯಕ್ಕೆ ಕಾರಣ. ಆದ್ದರಿಂದ ಹಬ್ಬದ ಸಮಯದಲ್ಲಿ ಸ್ವಾಸ್ಥ್ಯ ಪರಿಪಾಲನೆಗೆ ನಮ್ಮ ನಿದ್ದೆಯನ್ನು ಸರಿದೂಗಿಸಿಕೊಳ್ಳುವುದು ಬಹಳ ಅವಶ್ಯಕ.


ಆಯುರ್ವೇದದ ಪ್ರಕಾರ ಹಗಲು ನಿಯು ಅನಾರೋಗ್ಯಕರ. ಕಾರಣ, ಇದು ಮೂರು ದೋಷಗಳನ್ನು ಅಂದರೆ ವಾತ, ಪಿತ್ತ, ಕಫಗಳನ್ನು ಹಾಳು ಮಾಡಿ ವಿವಿಧ ರೀತಿಯ ಕಾಯಿಲೆಗಳನ್ನು ಉಂಟು ಮಾಡುತ್ತದೆ. ಉದಾಹರಣೆಗೆ- ಉಬ್ಬಸ, ಕೆಮ್ಮು, ತಲೆ ಭಾರ, ಪದೇಪದೆ ನೆಗಡಿ, ಆಹಾರದಲ್ಲಿ ರುಚಿ ಕಡಿಮೆ ಎನಿಸುವುದು, ಜೀರ್ಣಶಕ್ತಿ ಕುಂದುವುದು, ಅಂಗಗಳ ಮಾಂಸ ದುಷ್ಟಿ, ಮೇದಸ್ಸಿನ ದುಷ್ಟಿ, ಸ್ಥೌಲ್ಯ, ಮಧು ಮೇಹ, ಪದೇ ಪದೆ ಜ್ವರ ಬರುವುದು, ಹುಳಿತೇಗು, ಎದೆ ಉರಿ, ಪಿತ್ತ ವಾಂತಿ ಇತ್ಯಾದಿ.

ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಹಬ್ಬದ ಸಮಯ ಹಗಲು ನಿದ್ದೆಯನ್ನು ವರ್ಜಿಸಿ ರಾತ್ರಿ ನಿದ್ದೆಯನ್ನು ಪಾಲಿಸಿ- ಇದರಿಂದ ಮಾತ್ರ ಆರೋಗ್ಯದ ರಕ್ಷಣೆ ಸಾಧ್ಯ. ನಂತರ, ಹಬ್ಬದ ದಿನ ಮಾಡಲೇ ಬೇಕಾದ ಕೆಲಸ- ಅಭ್ಯಂಗ. ಇದನ್ನು ಸ್ನಾನ ಮಾಡುವ ಮುನ್ನ ಖಾಲಿ ಹೊಟ್ಟೆಯಲ್ಲಿ ಮಾಡಬೇಕು. ಎಣ್ಣೆ/ತುಪ್ಪ/ಬೆಣ್ಣೆ ಮುಂತಾದ ಸ್ನೇಹಯುಕ್ತ, ಜಿಡ್ಡಿನಿಂದ ಕೂಡಿದ ದ್ರವ್ಯಗಳನ್ನು ಅನುಲೋಮವಾಗಿ, ಅಂದರೆ ಲೋಮಕ್ಕೆ ಅನುಗುಣವಾಗಿ/ಕೆಳಮುಖವಾಗಿ, ಸುಸ್ಥಿತಿಯಲ್ಲಿ ಇರಿಸಿದ ದೇಹದ ಭಾಗಕ್ಕೆ ಹಚ್ಚುವುದೇ ಅಭ್ಯಂಗ. ಬೆಚ್ಚಗಿನ ಎಣ್ಣೆಯನ್ನು (ಎಳ್ಳೆಣ್ಣೆ ಅಥವಾ ಕೊಬ್ಬರಿ ಎಣ್ಣೆ) ಅಂಗೈ ತುಂಬುವಷ್ಟು ತೆಗೆದುಕೊಂಡು ಮೊದಲು ನೆತ್ತಿ ನೆನೆಯುವಷ್ಟು ಹಾಕಬೇಕು.

ಸಮಯವಿದ್ದರೆ ತಲೆಗೆ ಪೂರ್ತಿಯಾಗಿ ಸವರಿಕೊಳ್ಳಬಹುದು. ನಂತರ ಬೆಚ್ಚಗಿನ ಎಣ್ಣೆಯ ಹನಿಗಳನ್ನು ಎರಡೂ ಕಿವಿಗಳಿಗೆ ಹಾಕಬೇಕು. ಇದಾದ ಮೇಲೆ, ಎಣ್ಣೆಯನ್ನು ನಿಧಾನವಾಗಿ ಮುಖಕ್ಕೆ ಸವರಿಕೊಂಡು, ಮೂಗಿಗೂ ಎರಡು ಹನಿ ಎಣ್ಣೆಯನ್ನು ಬಿಟ್ಟುಕೊಳ್ಳಬೇಕು. ಅಥವಾ, ಕಿರುಬೆರಳನ್ನು ಎಣ್ಣೆಯಲ್ಲಿ ಅದ್ದಿ ಮೂಗಿನ ಹೊಳ್ಳೆಗಳ ಒಳಗೆ ಸವರಿಕೊಳ್ಳುವುದು. ನಂತರ ಕತ್ತು, ಕೈಗಳು, ಎದೆ, ಹೊಟ್ಟೆ, ಬೆನ್ನು ಪೃಷ್ಠ, ಕಾಲುಗಳಿಗೆ ನಂತರ ಪಾದಗಳಿಗೆ, ಅಭಿಮುಖವಾಗಿ ಮೇಲಿನಿಂದ ಕೆಳಮುಖವಾಗಿ ಅಂಗಾಂಗಗಳನ್ನು ಸ್ಥಿರವಾಗಿ ಇರಿಸಿ ಹಚ್ಚುವುದು.

ನೆನಪಿಡಿ, ಯಾವಾಗಲೂ ಮೇಲಿನಿಂದ ಕೆಳಗೆ ಹಚ್ಚಬೇಕೇ ಹೊರತು ಕೆಳಗಿನಿಂದ ಮೇಲೆ ಉಜ್ಜಬೇಡಿ. ವಿಶೇಷವಾಗಿ ಕೆನ್ನೆ, ಹೊಟ್ಟೆ ಹಾಗೂ ಸಂಧಿ ಭಾಗಗಳಲ್ಲಿ ವರ್ತುಲಾಕಾರವಾಗಿ ಹಚ್ಚಬೇಕು. ಹೀಗೆ ಹಚ್ಚಿದ ಎಣ್ಣೆಯನ್ನು ಸುಮಾರು ಐದು ನಿಮಿಷಗಳ ಕಾಲ ಬಿಟ್ಟರೆ ಸಾಕು, ದೇಹವು ಚೆನ್ನಾಗಿ ಹೀರಿಕೊಳ್ಳುತ್ತದೆ. ಹಚ್ಚುವುದಕ್ಕೆ ಐದು ನಿಮಿಷ, ನೆನೆಯುವುದಕ್ಕೆ ಐದು ನಿಮಿಷ, ಒಟ್ಟು 10 ನಿಮಿಷದಲ್ಲಿ ಮುಗಿಸಬಹುದು ನಿತ್ಯಾಭ್ಯಂಗವನ್ನು. ಇದು ಯಾರಿಗೂ ಕಷ್ಟದ ಕೆಲಸವಲ್ಲ!

ತೈಲಾಭ್ಯಂಜನದ ನಂತರ ಬೆಚ್ಚಗಿನ ನೀರಿನಲ್ಲಿ ಸ್ನಾನ ಮಾಡಿ ಹೊರ ಬಂದಾಗ ಸಿಗುವಷ್ಟು ಆನಂದ, ಆರಾಮ ಮತ್ತೆಲ್ಲೂ ಇಲ್ಲ! ಅದರಲ್ಲೂ ಹಬ್ಬದ ಓಡಾಟಕ್ಕೆ ಇದು ಹೆಚ್ಚಿನ ಶಕ್ತಿಯನ್ನು ನೀಡುತ್ತದೆ. ಇನ್ನು ಆಹಾರದ ವಿಷಯಕ್ಕೆ ಬರೋಣ. ಸಾಮಾನ್ಯವಾಗಿ ನಮ್ಮೆಲ್ಲರ ಆಹಾರ ಕಾಲಗಳು ಮೂರು- ಬೆಳಗಿನ ತಿಂಡಿ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟ. ಹಬ್ಬದಲ್ಲಿಯೂ ಈ ಆಹಾರ ಕಾಲದ ವ್ಯತ್ಯಾಸ ಮಾಡದಿರುವುದೇ ಒಳಿತು.



ನಮ್ಮ ಜೈವಿಕ ಗಡಿಯಾರವನ್ನು ಗಮನಿಸಿ ಅದನ್ನು ರಕ್ಷಿಸುವುದು ಸಹ ಒಂದು ರೀತಿಯ ಪೂಜೆ. ಹಾಗಾಗಿ ಹಬ್ಬದ ಸಮಯದಲ್ಲಿ ಇದನ್ನು ಭಂಗಗೊಳಿಸುವುದು ಆರೋಗ್ಯಕ್ಕೆ ದೊಡ್ಡ ಪೆಟ್ಟನ್ನೇ ನೀಡುತ್ತದೆ. ಹಬ್ಬದ ಸಮಯದಲ್ಲಿ ಪ್ರಸಾದದ ಹೆಸರಿನಲ್ಲಿ ತಿನಿಸುಗಳನ್ನೆಲ್ಲ ಆಗಾಗ್ಗೆ ಮೆಲ್ಲುವುದು, ಪದೇ ಪದೆ ಕರುಂಕುರುಂ ಎಂದು ಚಪ್ಪರಿಸುವುದು ಸಾಮಾನ್ಯದ ವಿಷಯ. ಈ ಅಭ್ಯಾಸದಿಂದಲೇ ಅಜೀರ್ಣ, ವಾಂತಿ, ಬೇಧಿ, ಜ್ವರ, ತಲೆನೋವು ಕಾಣಿಸಿಕೊಂಡು ಹಬ್ಬದ ಆನಂದಕ್ಕೆ ಧಕ್ಕೆ ಉಂಟಾಗುತ್ತದೆ.

ಹಾಗಾಗಿ ಹಬ್ಬಕ್ಕಾಗಿ ತಯಾರಿಸಿದ ಎಲ್ಲಾ ಖಾದ್ಯಗಳನ್ನು ಸಹ ನಿಗದಿತ ಆಹಾರ ಸಮಯದಲ್ಲಿ, ಹಸಿವಿಗೆ ತಕ್ಕಷ್ಟು ಸೇವಿಸುವುದರಿಂದ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಬಹುದು. ವಿವಿಧ ಬಗೆಯ ಕರಿದ ತಿಂಡಿಗಳನ್ನು, ಸಿಹಿ ತಿನಿಸುಗಳನ್ನು ಸೇವಿಸುವ ಆಹಾರದೊಟ್ಟಿಗೆ ಜೀರ್ಣಕಾರಿ ಪಾನಿಯಗಳನ್ನು ಸೇವಿಸುವುದು ಉಪಯುಕ್ತ.

ಉದಾಹರಣೆಗೆ- ಹಸಿ ಶುಂಠಿ, ಜೀರಿಗೆ, ಸೋಂಪು, ಏಲಕ್ಕಿ, ಲವಂಗ, ಧನಿಯ- ಹೀಗೆ ಯಾವುದಾದರೂ ಒಂದು ದ್ರವ್ಯವನ್ನು ಸ್ವಲ್ಪ ಪ್ರಮಾಣದಲ್ಲಿ ನೀರಿನೊಂದಿಗೆ ಕುದಿಸಿ ಬಿಸಿ ಬಿಸಿಯಾಗಿ ಆಹಾರದೊಂದಿಗೆ ಹೀರುವುದು ಜೀರ್ಣಕಾರಿ. ಇದರಿಂದ ಹಬ್ಬದ ಅಡುಗೆಗಳ ಪೋಷಣೆ ಸಂಪೂರ್ಣ ಶರೀರಕ್ಕೆ ಲಭ್ಯವಾಗಿ ಅಜೀರ್ಣದ ಸಮಸ್ಯೆಗಳು ನಿವಾರಣೆ ಆಗುತ್ತವೆ.

ಹಬ್ಬಗಳ ಬಹಳ ಮುಖ್ಯವಾದ ಆಚರಣೆ ಉಪವಾಸ. ಹಲವಾರು ಜನ ಹಸಿವೆಯನ್ನು ಕಟ್ಟಿ ಕೊಂಡು, ಒಂದು ಹನಿ ನೀರನ್ನು ಸಹ ಕುಡಿಯದೆ ಅಥವಾ ಕೇವಲ ಫಲಗಳನ್ನು/ಹಾಲನ್ನು ಮಾತ್ರ ಸೇವಿಸುವ ಉಪವಾಸವನ್ನು ಪಾಲಿಸುತ್ತಾರೆ. ಹಾಗಾದರೆ, ಉಪವಾಸವೆಂದರೆ ಕೇವಲ ನಿರಾಹಾರರಾಗಿ ಇರುವುದಷ್ಟೆಯಾ ಅಥವಾ ಇದಕ್ಕೂ ಮಿಗಿಲಾದ ವಿಷಯವಿದೆಯಾ ಅನ್ನುವುದರ ಬಗ್ಗೆ ತಿಳಿದು ಕೊಳ್ಳೋಣ.

ಆಯುರ್ವೇದದ ಪ್ರಕಾರ ಆಹಾರ ಸೇವನೆ ಒಂದು ರೀತಿಯ ಹವನ. ಇದನ್ನು ಪೂಜೆ ಎಂದರೂ ತಪ್ಪಾಗಲಾರದು. ಹಸಿವೆ ಮತ್ತು ಬಾಯಾರಿಕೆಗಳಂಥ ಸಹಜ ಶಾರೀರಿಕ ಕ್ರಿಯೆಗಳನ್ನು ತಡೆದು ಯಾವಾಗಲೋ ಏನೇನನ್ನೋ ತಿನ್ನುವುದು ಆರೋಗ್ಯವನ್ನು ಏರುಪೇರು ಮಾಡುತ್ತದೆಯೇ ಹೊರತು ಇದು ಉಪವಾಸ ಎನಿಸುವುದಿಲ್ಲ. ಈ ರೀತಿಯ ಕ್ರಮವಿಲ್ಲದ ಆಚರಣೆಯು ನಮ್ಮೊಳಗೆ ಜಠರಾಗ್ನಿಯ ರೂಪದಲ್ಲಿರುವ ಭಗವಂತನಿಗೆ ಮಾಡುವ ಅಪಮಾನವೇ ಸರಿ.

ಆಯುರ್ವೇದ ಶಾಸದಲ್ಲಿ ಹೇಳಿರುವ ಪ್ರಕಾರ, ಉಪ ಎಂದರೆ ಸಮೀಪ, ವಾಸ ಎಂದರೆ ಇರುವುದು. ಉಪವಾಸವೆಂದರೆ ಸದಾ ಸತ್ವ ಗುಣದೊಟ್ಟಿಗೆ ಇರುವುದು. ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯಗಳನ್ನು ಕಾಯಾ-ವಾಚಾ-ಮನಸ್ಸಿನ ಮೂಲಕ ಮಾಡದೆ ಇರುವುದು. ಎಲ್ಲರ ಒಳಗೂ ಚೈತನ್ಯದ ರೂಪದಲ್ಲಿ ನೆಲೆಸಿರುವ ಆ ಪರಮಾತ್ಮನ ಇರುವಿಕೆಯನ್ನು ತನ್ನೊಳಗೆ ಅರಿತು ಅವನ ಸಮೀಪವಾಗುವ ಪ್ರಯತ್ನವೇ ಉಪವಾಸ. ಈ ಸೂಕ್ಷ್ಮತರವಾದ ಅನುಭವಕ್ಕೆ ಅತಿಯಾದ ಆಹಾರಸೇವನೆಯು ಅಡ್ಡಿಯಾಗದಿರಲಿ ಎಂಬುದು ಉದ್ದೇಶವೇ ಹೊರತು ಉಪವಾಸವೆಂದರೆ ಶರೀರದ ಶೋಷಣೆಯಂತೂ ಅಲ್ಲವೇ ಅಲ್ಲ.

ಹಾಗಾಗಿ ಹಸಿವೆಯನ್ನು ಗೌರವಿಸದೆ, ಜಠರಾಗ್ನಿಗೆ ಆಹಾರದ ಮೂಲಕ ಆಹುತಿಯನ್ನು ನೀಡದೆ ಅದನ್ನು ಹಾಳು ಮಾಡುವ ಪ್ರಕ್ರಿಯೆಯನ್ನು ಆಯುರ್ವೇದವು ಎಂದಿಗೂ ಉಪವಾಸ ಎಂದು ಪರಿಗಣಿಸುವುದಿಲ್ಲ. ಹಾಗಾಗಿ ಉಪವಾಸದ ಹೆಸರಿನಲ್ಲಿ ಹಸಿವೆಯನ್ನು ತಡೆಗಟ್ಟಿ, ನಂತರ ಒಮ್ಮೆಲೇ ಜೀರ್ಣಕ್ಕೆ ಜಡವಾಗುವ ಊಟವನ್ನು ಮಾಡಿದರೆ ಆರೋಗ್ಯ ಕೆಡುವುದರಲ್ಲಿ ಸಂಶಯವೇ ಇಲ್ಲ.

ಹಸಿವೆಯನ್ನು ತಡೆಯುವುದು ಆಯುರ್ವೇದದ ಪ್ರಕಾರ ಸರಿಯಲ್ಲ. ಹಾಗಾಗಿ ಆಹಾರ ಕಾಲದಲ್ಲಿ ಲಘು, ಸಾತ್ತ್ವಿಕ ಆಹಾರವನ್ನು ಸೇವಿಸಿ, ದೈವದ ಉಪಾಸನೆಯಲ್ಲಿ ಇಂದ್ರಿಯ-ಮನಸ್ಸುಗಳನ್ನು ತೊಡಗಿಸಿಕೊಂಡು ಒಳ್ಳೆಯ ಚಿಂತನೆಯನ್ನು ಮಾಡಿ ಪರಮಾತ್ಮನ ಸಮೀಪವಾಗುವ ಪ್ರಯತ್ನವನ್ನು ಮಾಡುವುದೇ ಹಬ್ಬದ ದಿನ ನಾವು ಮಾಡಬೇಕಾದ ನಿಜವಾದ ಮತ್ತು ಸರಿಯಾದ ಉಪವಾಸ. ಇದು ಮಾತ್ರ ಆಯುರ್ವೇದ ಸಮ್ಮತವಾದ ಉಪವಾಸವಾಗುತ್ತದೆ.

ಸ್ನೇಹಿತರೆ, ನಮ್ಮ ಪಾರಂಪರಿಕ ಆಚರಣೆಗಳು ಮತ್ತು ಹಬ್ಬಗಳು ನಮ್ಮ ಆಹಾರ-ವಿಹಾರ-ವಿಚಾರಗಳನ್ನು ಅವಲೋಕಿಸಿ, ಅವುಗಳನ್ನು ಶೋಧಿಸಿ, ಅವುಗಳಲ್ಲಿ ದೈವೀಕತೆಯನ್ನು ಜಾಗೃತ ಗೊಳಿಸುವ ಸದವಕಾಶಗಳು. ಇವು ದೇಹವನ್ನು ದಂಡಿಸಿಕೊಂಡು ರೋಗಗ್ರಸ್ತರಾಗುವ ಶೋಚನೀಯ ಸಂದರ್ಭಗಳಾಗದಿರಲಿ. ನಮ್ಮ ಆರೋಗ್ಯ, ಆಯುಷ್ಯ ಮತ್ತು ಸಂಪತ್ತುಗಳು ವೃದ್ಧಿಯಾಗಿ ಎಲ್ಲರಿಗೂ ಸನ್ಮಂಗಳವನ್ನುಂಟುಮಾಡಲಿ ನಾವು ಆಚರಿಸುವಂಥ ಹಬ್ಬಗಳು ಎಂಬುದು ಆಯುರ್ವೇದದ ಆಶಯ. ಲೋಕಾಃ ಸಮಸ್ತಾಃ ಸುಖಿನೋ ಭವಂತು ಸಮಸ್ತ ಸನ್ಮಂಗಲಾನಿ ಭವಂತು...

**- ಡಾ.** ಸಾಧನಾಶ್ರೀ ಪಿ,

## 10-8-2025 ದಿನ ಭವಿಷ್ಯ

**ಮೇಷ:** ನಿಮ್ಮ ಸಂಗಾತಿಯ ನಿಷ್ಠಾವಂತ ಹೃದಯ ಮತ್ತು ಅದ್ಭುತ ಚೈತನ್ಯ ನಿಮಗೆ ಸಂತೋಷ ನೀಡಬಹುದು. ಇಂದು ಹಣದ ನಷ್ಟವು ಸಂಭವಿಸಬಹುದು. ಆದ್ದರಿಂದ ವಹಿವಾಟುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ನೀವು ಎಷ್ಟು ಜಾಗರೂಕರಾಗಿರುತ್ತೀರೋ ಅಷ್ಟೇ ನಿಮಗೆ ಉತ್ತಮವಾಗಿರುತ್ತದೆ ಮಕ್ಕಳಿಂದ ಅನಿರೀಕ್ಷಿತ ಸುದ್ದಿ ಸಂತೋಷದ ಕ್ಷಣಗಳನ್ನು ತರುತ್ತದೆ.

**ವೃಷಭ:** ನಿಮ್ಮ ಆರೋಗ್ಯ ಮತ್ತು ನೋಟವನ್ನು ಸುಧಾರಿಸಲು ಕೆಲಸಗಳನ್ನು ಮಾಡಲು ಸಾಕಷ್ಟು ಸಮಯ ಹೊಂದಿರುತ್ತೀರಿ. ವ್ಯಾಪಾರಿಗಳಿಗೆ ಇಂದು ವ್ಯಾಪಾರದಲ್ಲಿ ಹಾನಿ ಉಂಟಾಗಬಹುದು ಮತ್ತು ತಮ್ಮ ವ್ಯಾಪಾರವನ್ನು ಉತ್ತಮಗೊಳಿಸಲು ನೀವು ಹಣವನ್ನು ಖರ್ಚು ಮಾಡಬೇಕಾಗುತ್ತದೆ.

**ಮಿಥುನ:** ಕಳೆದ ಉದ್ಯಮಗಳ ಯಶಸ್ಸು ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಇಂದು, ಒಂದು ಪಾರ್ಟಿಯಲ್ಲಿ ನೀವು ಆರ್ಥಿಕ ಭಾಗವನ್ನು ಬಲಪಡಿಸಲು ಪ್ರಮುಖ ಸಲಹೆಯನ್ನು ನೀಡುವ ವ್ಯಕ್ತಿಯನ್ನು ಭೇಟಿ ಮಾಡಬಹುದು. ಆರೋಗ್ಯ ಚೆನ್ನಾಗಿಲ್ಲದ ಒಬ್ಬ ಸಂಬಂಧಿಯನ್ನು ಭೇಟಿ ಮಾಡಿ. ಅಪರಿಚಿತ ವ್ಯಕ್ತಿಗಳೊಂದಿಗೆ ಮಾತನಾಡುವುದು ಸರಿಯಿಲ್ಲ.

**ಕರ್ಕಾಟಕ:** ಆಧ್ಯಾತ್ಮಿಕ ಜೀವನದ ಪೂರ್ವಾಪೇಕ್ಷಿತವಾಗಿರುವಂತಹ ನಿಮ್ಮ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ಒಳ್ಳೆಯದೂ ಹಾಗೂ ಕೆಟ್ಟದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ಧಿ ಜೀವನದ ಹೆಬ್ಬಾಗಿಲಾಗಿದೆ. ಇದು ಜೀವನದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹಾಯ ಮಾಡುತ್ತದೆ ಮತ್ತು ಅಗತ್ಯವಿರುವ ಬೆಳಕನ್ನು ನೀಡುತ್ತದೆ.

**ಸಿಂಹ:** ಕಿರಿಕಿರಿ ನಿಮ್ಮ ಮಾನಸಿಕ ಶಾಂತಿಗೆ ತೊಂದರೆ ತಂದರೂ ಒಬ್ಬ ಸ್ನೇಹಿತರು ನಿಮ್ಮ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅಪಾರವಾದ ಸಹಾಯ ಮಾಡುತ್ತಾರೆ. ಒತ್ತಡ ತೊಡೆದುಹಾಕಲು ಹಿತವಾದ ಸಂಗೀತವನ್ನು ಆಲಿಸಿ. ನಿಮ್ಮ ತಾಯಿಯ ಬದಿಯಿಂದ ಇಂದು ಹಣಕಾಸಿನ ಲಾಭವನ್ನು ಪಡೆಯುವ ಪೂರ್ಣ ಸಾಧ್ಯತೆ ಇದೆ. ನಿಮ್ಮ ಮಾಮ, ತಾತ ನಿಮಗೆ ಆರ್ಥಿಕ ಬೆಂಬಲ ಮಾಡಬಹುದು.

**ಕನ್ಯಾ:** ನೀವು ಪ್ರಯಾಣಿಸಲು ತುಂಬಾ ದುರ್ಬಲರಾಗಿದ್ದರಿಂದ ದೀರ್ಘ ಪ್ರಯಾಣವನ್ನು ತಪ್ಪಿಸಲು ಪ್ರಯತ್ನಿಸಿ. ನಿಮಗೆ ತಿಳಿದ ಜನರ ಮೂಲಕ ಆದಾಯದ ಹೊಸ ಮೂಲಗಳು ಕಂಡುಬರುತ್ತವೆ. ನೀವು ಕಾಳಜಿ ವಹಿಸುವ ಯಾರಾದರ ಜೊತೆಗಿನ ಸಂವಹನದ ಕೊರತೆ ನಿಮಗೆ ಖಿನ್ನತೆಯನ್ನು ಉಂಟುಮಾಡುತ್ತದೆ.

**ತುಲಾ:** ಇದು ನಿಮ್ಮ ಆರೋಗ್ಯದ ಬಗ್ಗೆ ಚಿಂತಿಸಬೇಕಾಗಿಲ್ಲ. ನಿಮ್ಮ ಸುತ್ತಲಿನ ಜನರು ನಿಮ್ಮ ಸ್ಥೈರ್ಯ ಮತ್ತು ಚೈತನ್ಯಗಳನ್ನು ಹೆಚ್ಚಿಸುತ್ತಾರೆ. ಇಂದು ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಹೊಂದಿರುವ ಸಾಧ್ಯತೆ ಇದೆ ಆದರೆ ನಿಮ್ಮ ಬುದ್ಧಿವಂತಿಕೆಯಿಂದ ಈ ಹಾನಿಯನ್ನು ಲಾಭದಲ್ಲಿ ಪರಿವರ್ತಿಸಬಹುದು.

**ವೃಶ್ಚಿಕ:** ನಿಮ್ಮ ಶೀಘ್ರ ಕ್ರಮ ನಿಮ್ಮ ಸುದೀರ್ಘವಾದ ಸಮಸ್ಯೆಯನ್ನು ಪರಿಹರಿಸುತ್ತದೆ. ತಮ್ಮ ಹಣವನ್ನು ಬೆಟ್ಟಿಂಗ್‌ನಲ್ಲಿ ಖರ್ಚು ಮಾಡಿದವರು ಇಂದು ನಷ್ಟ ಅನುಭವಿಸುವ ಸಾಧ್ಯತೆಯಿದೆ. ನೀವು ಎಲ್ಲರ ಬೇಡಿಕೆಗಳನ್ನೂ ಪೂರೈಸಲು ಪ್ರಯತ್ನಿಸಿದಲ್ಲಿ ವಿವಿಧ ದಿಕ್ಕುಗಳಲ್ಲಿ ಹರಿದು ಹೋಗುತ್ತೀರಿ. ಪ್ರಣಯ ನಿಮ್ಮ ಹೃದಯವನ್ನು ಆಳುತ್ತದೆ.

**ಧನು:** ಕಳೆದ ಉದ್ಯಮಗಳ ಯಶಸ್ಸು ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಸ್ವಲ್ಪ ಹೆಚ್ಚು ಹಣ ಮಾಡಲು ನಿಮ್ಮ ನವೀನ ಕಲ್ಪನೆಯನ್ನು ಬಳಸಿ. ಕೌಟುಂಬಿಕ ಒತ್ತಡ ನಿಮ್ಮ ಗಮನ ಬೇರೆಡೆಗೆ ಸೆಳೆಯದಿರಲಿ. ಕೆಟ್ಟ ಸಮಯಗಳು ನಮಗೆ ಇನ್ನೂ ಹೆಚ್ಚನ್ನು ನೀಡುತ್ತವೆ. ಸ್ವಾನುಕಂಪದಲ್ಲಿ ಸಮಯ ವ್ಯರ್ಥ ಮಾಡದೇ ಜೀವನದ ಪಾಠ ಕಲಿಯಲು ಪ್ರಯತ್ನಿಸಿ.

**ಮಕರ:** ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ಮತ್ತು ಆನಂದವನ್ನು ಹಂಚಿಕೊಳ್ಳಿ. ಇಂದು ಮನೆಯ ಯಾವುದೇ ಎಲೆಕ್ಟ್ರಾನಿಕ್ ಸರಕುಗಳ ಕೆಟ್ಟು ಹೋಗುವ ಕಾರಣದಿಂದಾಗಿ ನಿಮ್ಮ ಹಣ ಖರ್ಚಾಗಬಹುದು. ಒಟ್ಟಾರೆ ಒಂದು ಲಾಭದಾಯಕ ದಿನವಾದರೂ ನೀವು ನಿರಾಸೆ ಭರವಸೆಯಿಡಬಹುದಾದ ಯಾರಾದರೂ ನಿಮ್ಮನ್ನು ನಿರಾಸೆಗೊಳಿಸುತ್ತಾರೆ.

**ಕುಂಭ:** ನೀವು ಸಾಮಾನ್ಯವಾಗಿ ಇರುವುದಕ್ಕಿಂತ ಕಡಿಮೆ ಚೈತನ್ಯವನ್ನು ಇಂದು ಕಾಣುತ್ತೀರಿ ನಿಮ್ಮ ಮೇಲೆ ನೀವೇ ಹೆಚ್ಚುವರಿ ಕೆಲಸಕ್ಕೆ ಒತ್ತಡ ಹೇರಬೇಡಿ - ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ ಮತ್ತು ನಿಮ್ಮ ಕೆಲಸಗಳನ್ನು ಇನ್ನೊಂದು ದಿನಕ್ಕೆ ವರ್ಗಾಯಿಸಿ. ನೀವು ಇತರರ ಮಾತುಗಳನ್ನು ನಂಬಿ ಇಂದು ಹೂಡಿಕೆ ಮಾಡಿದಲ್ಲಿ ಇಂದು ಆರ್ಥಿಕ ನಷ್ಟದ ಸಾಧ್ಯತೆಯಿದೆ.

**ಮೀನ:** ನಿಮ್ಮ ಹಾಸ್ಯಪ್ರಜ್ಞೆ ಇನ್ನೊಬ್ಬರಿಗೆ ಸಂತೋಷ ವಸ್ತುಗಳನ್ನು ಹೊಂದುವುದರಲ್ಲದೇ ನಮ್ಮೊಳಗೇ ಇದೆಯೆಂದು ಅರ್ಥ ಮಾಡಿಸುವುದರಿಂದ ಅವರು ಸ್ವತಃ ಈ ಕೌಶಲ್ಯವನ್ನು ಹೊಂದಲು ಪ್ರೋತ್ಸಾಹಿಸಿದಂತಾಗುತ್ತದೆ. ನೀವು ಇಂದು ಗಣನೀಯ ಪ್ರಮಾಣದ ಹಣವನ್ನು ಸಹ ಹೊಂದಿರುತ್ತೀರಿ ಮತ್ತು ಅದರೊಂದಿಗೆ ಮನಸ್ಸಿನ ಶಾಂತಿ ಇರುತ್ತದೆ.

# ಸಾವರ್ಕರ್ ಮತ್ತು ಬೋಸರ ಭಾರತೀಯ ಸೇನೆ

- ಶತ್ರುವನ್ನು ತಡೆಗಟ್ಟುವುದು ಹಾಗೂ ಕಟ್ಟಿ ಹಾಕುವುದೇ ಹೊರತು ನಾವು ಸಿಕ್ಕಿಹಾಕಿಕೊಳ್ಳುವುದಲ್ಲ ಎಂಬುದನ್ನು ಸಾವರ್ಕರರು ಸುಭಾಷರಿಗೆ ಅಂದು ಮನವರಿಕೆ ಮಾಡಿಕೊಟ್ಟರು.
- ಸುಭಾಷರ ಬಳಿ ಸಾವರ್ಕರರು ಸೈನಿಕ ಕ್ರಾಂತಿಯ ಬಗ್ಗೆ ಮಾತನಾಡುವಾಗ, ಮೊದಲನೇ ಮಹಾಯುದ್ಧದಲ್ಲಿ ಭಾರತೀಯ ಕ್ರಾಂತಿಕಾರಿಗಳು ಜರ್ಮನಿಯಲ್ಲಿದ್ದ ಯುದ್ಧಕೈದಿಗಳ ಜತೆಗೂಡಿ ಕ್ರಾಂತಿಸೈನ್ಯ ಕಟ್ಟಿದ್ದ ವಿಷಯವನ್ನು ಚರ್ಚಿಸಿದರು.

ಸುಭಾಷ್‌ಚಂದ್ರ ಬೋಸರು ಸ್ಥಾಪಿಸಿದ ಇಂಡಿಯನ್ ನ್ಯಾಷನಲ್ ಆರ್ಮಿಯ ಮೂಲ ಕಲ್ಪನೆಯ ಪಿತಾಮಹ ವೀರ ಸಾವರ್ಕರ್. ಹುಟ್ಟಿನಿಂದಲೇ ಕ್ರಾಂತಿಕಾರಿಯಾಗಿದ್ದ ವೀರ ಸಾವರ್ಕರ್ ತಮ್ಮ ಬದುಕಿನ ಕಟ್ಟಕಡೆಯ ಕ್ಷಣದವರೆಗೂ ಭಾರತೀಯತೆಯ ಬಗ್ಗೆ ಸ್ಪಷ್ಟತೆ ಇದ್ದಂಥ ವ್ಯಕ್ತಿ. ಸಾವರ್ಕರ್ ಹಾಗೂ ಸುಭಾಷರು ಹಾಕಿದ ಗಟ್ಟಿಯಾದ ಅಡಿಪಾಯದಿಂದಾಗಿಯೇ ಭಾರತೀಯ ಸೇನೆಯಿಂದು ಜಗತ್ತಿನ ಆಕ್ರಮಣಕಾರಿ ಸೇನೆಗಳಲ್ಲಿ ಒಂದೆನಿಸಿ ಕೊಳ್ಳಲು ಸಾಧ್ಯವಾಗಿದೆ.

ಎರಡನೇ ಮಹಾಯುದ್ಧದ ಸಮಯ. ಫ್ರಾನ್ ದೇಶವನ್ನು ಜರ್ಮನಿ ಸೋಲಿಸಿತ್ತು. ಅದೇ ಸಮಯದಲ್ಲಿ ಸುಭಾಷ್ ಚಂದ್ರ ಬೋಸರು ಸಾವರ್ಕರರ ಜತೆ ರಾಜಕೀಯವಾಗಿ ಕೆಲವು ವಿಷಯಗಳನ್ನು ಚರ್ಚಿಸಲು ಬಂಗಾಳದಿಂದ ಬಂದಿದ್ದರು. ಅಖಿಲ ಭಾರತ ಮಟ್ಟದ ಯೋಜನೆಯೊಂದನ್ನು ಕೈಗೆತ್ತಿಕೊಳ್ಳುವ ವಿಷಯದಲ್ಲಿ ಸಾವರ್ಕರರ ಜತೆಗೆ ವಿಚಾರ ವಿನಿಮಯ ನಡೆಸುವುದು ಸುಭಾಷರ ಉದ್ದೇಶವಾಗಿತ್ತು. ಅದು ದೇಶದಾದ್ಯಂತ ಇದ್ದ ಬ್ರಿಟಿಷರ ಸ್ಮಾರಕ/ಪ್ರತಿಮೆಗಳನ್ನು ಉರುಳಿಸುವ ಯೋಜನೆಯಾಗಿದ್ದು, ಸ್ವತಃ ಸುಭಾಷರೇ ಕೋಲ್ಕತಾದಲ್ಲಿ ಪ್ರತಿಮೆಗಳನ್ನು ಉರುಳಿಸುವ ಮೂಲಕ ಚಳವಳಿಗೆ ಚಾಲನೆಯನ್ನು ನೀಡುವವರಿದ್ದರು.

ಸಾವರ್ಕರರ ಬಳಿ ಸುಭಾಷರು ಈ ವಿಷಯವನ್ನು ಪ್ರಸ್ತಾಪಿಸಿದಾಗ, ನಿಮ್ಮಂಥ ಪ್ರತಿಭಾವಂತ ಮುಖಂಡರು ಭಾರತದೊಳಗೆ ಬ್ರಿಟಿಷರ ಪ್ರತಿಮೆಗಳನ್ನು ಉರುಳಿಸುವ ಚಳವಳಿಗಳನ್ನು ಕೈಗೊಂಡು, ನಂತರ ಜೈಲುವಾಸ ಅನುಭವಿಸುವುದರಿಂದ ಸಮಯ ವ್ಯರ್ಥವಾಗುತ್ತದೆ. ಹಾಗಾಗಿ ಬ್ರಿಟಿಷರನ್ನು ರಾಜಕೀಯವಾಗಿ ಮುಗಿಸುವ ಯೋಜನೆಯೊಂದನ್ನು ತಯಾರು ಮಾಡಬೇಕು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ನಿಜವಾದ ರಾಜಕಾರಣವೆಂದರೆ, ಶತ್ರುವನ್ನು ತಡೆಗಟ್ಟುವುದು ಹಾಗೂ ಕಟ್ಟಿ ಹಾಕುವುದೇ ಹೊರತು ನಾವು ಸಿಕ್ಕಿಹಾಕಿಕೊಳ್ಳುವುದಲ್ಲ ಎಂಬುದನ್ನು ಸಾವರ್ಕರರು ಸುಭಾಷರಿಗೆ ಅಂದು ಮನವರಿಕೆ ಮಾಡಿಕೊಟ್ಟರು. ಸುಭಾಷರ ಬಳಿ ಸಾವರ್ಕರರು ಸೈನಿಕ ಕ್ರಾಂತಿಯ ಬಗ್ಗೆ ಮಾತನಾಡುವಾಗ, ಮೊದಲನೇ ಮಹಾಯುದ್ಧದಲ್ಲಿ ಭಾರತೀಯ ಕ್ರಾಂತಿಕಾರಿಗಳು ಜರ್ಮನಿಯಲ್ಲಿದ್ದ ಯುದ್ಧಕೈದಿಗಳ ಜತೆಗೂಡಿ ಕ್ರಾಂತಿಸೈನ್ಯ ಕಟ್ಟಿದ್ದ ವಿಷಯವನ್ನು ಚರ್ಚಿಸಿದರು.

ಎರಡನೇ ಮಹಾಯುದ್ಧಕ್ಕೆ ಜಪಾನ್ ಪ್ರವೇಶಿಸುವ ಮುನ್ಸೂಚನೆಯನ್ನು ಸಾವರ್ಕರರು ಸುಭಾಷರಿಗೆ ಮೊದಲೇ ಕೊಟ್ಟರು. ಹಾಗೇನಾದರೂ ಆದರೆ, ಪೂರ್ವದಲ್ಲಿ ಚದುರಿ ಹೋಗಿ, ಚೆನ್ನಾಗಿ ತರಬೇತಿ ಪಡೆದಿರುವ ಭಾರತೀಯ ಸೈನಿಕರ ಬಲದಿಂದ ಜರ್ಮನಿ ಹಾಗೂ ಜಪಾನ್ ದೇಶಗಳ ಬೆಂಬಲ ಪಡೆದು ಒಳನುಗ್ಗಿದರೆ ಬ್ರಿಟಿಷರಿಂದ ಭಾರತವನ್ನು ಮುಕ್ತಗೊಳಿಸಬಹುದು.



ಆದ್ದರಿಂದ ಜರ್ಮನಿ ಹಾಗೂ ಇಟಲಿಯಲ್ಲಿರುವ ಭಾರತೀಯ ಯುದ್ಧಕೈದಿಗಳನ್ನು ಸಂಘಟಿಸಿ, ಅವರಿಗೆ ಮಾರ್ಗದರ್ಶಕರಾಗಿ ಎಂಬ ಸಲಹೆಯನ್ನು ಸಾವರ್ಕರರು ಸುಭಾಷರಿಗೆ ನೀಡಿದರು. ಈ ಮಾದರಿಯ ಪ್ರಚಂಡ ಹೋರಾಟ ನಡೆಯದೆ ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗುವುದಿಲ್ಲ. ಅಂಥ ಮಹತ್ತರ ಕಾರ್ಯವನ್ನು ನಿಭಾಯಿಸುವ ಎದೆಗಾರಿಕೆ ಇರುವುದು ನಿಮಗೆ ಮಾತ್ರ ಎಂದು ಸಾವರ್ಕರರು ಸುಭಾಷರಿಗೆ ಅಂದು ಹೇಳಿದ್ದರು.


ಸಾವರ್ಕರರ ಭೇಟಿಯಾದ ಕೆಲವೇ ತಿಂಗಳಲ್ಲಿ ಸುಭಾಷ್‌ಚಂದ್ರ ಬೋಸರು ಬ್ರಿಟಿಷರಿಗೆ ಚಳ್ಳೆಹಣ್ಣು ತಿನ್ನಿಸಿ ಭಾರತದಿಂದ ಅದೃಶ್ಯರಾದರು. ಸುಭಾಷ್‌ಚಂದ್ರ ಬೋಸರು ಜರ್ಮನಿ ಹಾಗೂ ಜಪಾನಿನ ಸಹಾಯದಿಂದ, ಇಂಡಿಯನ್ ನ್ಯಾಷನಲ್ ಆರ್ಮಿಯ ಮೂಲಕ ದಕ್ಷಿಣದಲ್ಲಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ಬ್ರಿಟಿಷರಿಂದ ವಶಪಡಿಸಿಕೊಂಡರು.

1944ರ ಹೊತ್ತಿಗೆ ಇಂಡಿಯನ್ ನ್ಯಾಷನಲ್ ಆರ್ಮಿಯು ಬರ್ಮಾ ಗಡಿಯಲ್ಲಿ ಬ್ರಿಟಿಷರ ಸೈನ್ಯವನ್ನು ಹಿಮ್ಮೆಟ್ಟಿಸಿ ಮಣಿಪುರವನ್ನು ವಶಪಡಿಸಿಕೊಂಡಿತ್ತು. ಆ ಸಮಯದಲ್ಲಿ ಜವಾಹರಲಾಲ್ ನೆಹರು ಅವರು, ಸುಭಾಷರು ಅಥವಾ ಅವರ ಸೈನ್ಯ ಭಾರತದೊಳಗೆ ಕಾಲಿಟ್ಟರೆ ಅವರೊಡನೆ ಯುದ್ಧ ಮಾಡಿ ಹಿಂದಕ್ಕೆ ಓಡಿಸಲಾಗುವುದು ಎಂದು ಘೋಷಿಸಿದ್ದರು.

ವೀರ ಸಾವರ್ಕರರನ್ನು ಬ್ರಿಟಿಷರ ಏಜೆಂಟ್ ಎಂದು ಜರಿಯುವ ಕಾಂಗ್ರೆಸ್ಸಿಗರು, ನೆಹರುರನ್ನು ಏನೆಂದು ಕರೆಯುತ್ತಾರೆ? ಬ್ರಿಟಿಷರ ನಿಜವಾದ ಏಜೆಂಟರು ಯಾರಾಗಿದ್ದರು ಎಂಬುದು ನೆಹರುರ ಈ ಮನಸ್ಥಿತಿಯಿಂದ ತಿಳಿಯುತ್ತದೆ. ಇದಾದ ನಂತರ ದುರದೃಷ್ಟವಶಾತ್ ಜರ್ಮನಿ ಹಾಗೂ ಜಪಾನ್ ಯುದ್ಧದಲ್ಲಿ ಸೋತವು, ಸುಭಾಷರು ಅದೃಶ್ಯರಾದರು.

ಸಾವರ್ಕರರು ಶುರುವಿಟ್ಟುಕೊಂಡಿದ್ದ ಸೈನಿಕ ಕ್ರಾಂತಿ ಅಲ್ಲಿಗೇ ನಿಲ್ಲಲಿಲ್ಲ, ಇಂಡಿಯನ್ ನ್ಯಾಷನಲ್ ಆರ್ಮಿಯ ವಿರುದ್ಧ ಕ್ರಮ ಕೈಗೊಳ್ಳುವುದನ್ನು ಬ್ರಿಟಿಷ್ ಅಧಿಕಾರಿಗಳು ವಿರೋಧಿಸಿದ್ದರು, ಆದರೆ ಜವಾಹರಲಾಲ್ ನೆಹರು ಮಾತ್ರ ವಿರೋಧಿಸಲಿಲ್ಲ. ಸುಭಾಷರು ಕಟ್ಟಿದ ಸೈನ್ಯದ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಬಹಿರಂಗವಾಗಿ ಹೇಳಿದ್ದ ನೆಹರು ಅವರು, ಸುಭಾಷರು ಅದೃಶ್ಯರಾದ ನಂತರ ಕೂಡ ಇಂಡಿಯನ್ ನ್ಯಾಷನಲ್ ಆರ್ಮಿಯ ಪರವಾಗಿ ನಿಲ್ಲಲಿಲ್ಲ. ಸೈನ್ಯದಲ್ಲಿದ್ದ ಭಾರತೀಯ ಸೈನಿಕರ ಸಹನೆ ಮೀರಿತ್ತು, ಹೀಗಾಗಿ ಅವರು ಬ್ರಿಟಿಷರ ವಿರುದ್ಧ ಬೀದಿಗಿಳಿದರು.

ಸ್ವಾತಂತ್ರ್ಯದ ಕೂಗು ಕಾಡ್ಗಿಚ್ಚಿನಂತೆ ಹರಡಿತು. 1946ರಲ್ಲಿ ಕರಾಚಿಯಲ್ಲಿದ್ದ ವಿಮಾನಪಡೆಯ ಸೈನಿಕರಿಂದ ಆರಂಭವಾದ ಮುಷ್ಕರವು ಮುಂಬೈ, ಲಾಹೋರ್, ದೆಹಲಿಯವರೆಗೂ ಹಬ್ಬಿತು. ಸುಮಾರು 5200 ಸೈನಿಕರು ಮುಷ್ಕರದಲ್ಲಿ ಭಾಗವಹಿಸಿದ್ದರು. ಇದಾದ ನಂತರ, ನೌಕಾದಳದ ಸುಮಾರು 5000 ಸೈನಿಕರು ಮುಷ್ಕರ ಕೈಗೊಂಡರು. ಕೋಲ್ಕತಾ, ಕರಾಚಿ, ಮದ್ರಾಸ್, ರಂಗೂನ್, ಅಂಬಾಲಾ ಹೀಗೆ ಬಹುತೇಕ ಸೈನಿಕ ಕೇಂದ್ರಗಳಲ್ಲಿ ಈ ಮುಷ್ಕರ ಶುರುವಾಗಿತ್ತು. ಬ್ರಿಟಿಷರಿಗೆ ತಮ್ಮ ಪರಿಸ್ಥಿತಿಯ ಅರಿವಾಯಿತು.



ಇನ್ನೂ ತಾವು ಇಲ್ಲಿದ್ದರೆ ಇಂಡಿಯನ್ ನ್ಯಾಷನಲ್ ಆರ್ಮಿಯ ಸೈನಿಕರು ತಮ್ಮ ವಿರುದ್ಧ ದೊಡ್ಡ ಯುದ್ಧವನ್ನು ಸಾರಿ, ಭಾರತದಿಂದ ಓಡಿಸಿ ಬಿಡುತ್ತಾರೆ ಎಂಬ ಭಯ ಅವರಿಗೆ ಶುರುವಾಗಿತ್ತು. ನಮಗೆ ರಾಜ್ಯ ಬೇಕಿಲ್ಲ, ನೀವು ಇಲ್ಲೇ ಇರಿ ಎಂದರೂ ಇರುವುದಿಲ್ಲ ಎಂದು ಬ್ರಿಟಿಷರು ಹೇಳಿದ್ದರು. ಅಹಿಂಸೆಯಿಂದ ಮಾತ್ರವೇ ನಾವು ಸ್ವಾತಂತ್ರ್ಯವನ್ನು ಗಳಿಸಿದ್ದು ಎಂಬುದು ದೊಡ್ಡ ಸುಳ್ಳು. ಭಾರತೀಯರನ್ನು ಒಡೆದು ಆಳುವ ನೀತಿಯು ಬ್ರಿಟಿಷರಿಗೆ ತಿಳಿದಿತ್ತು. ಯೋಜನಾಬದ್ಧವಾಗಿ ಕ್ರಾಂತಿಕಾರಿಗಳ ಮೂಲಕವೇ ಕುತಂತ್ರಿ ಬ್ರಿಟಿಷರನ್ನು ಓಡಿಸಬೇಕು ಎಂಬ ಸ್ಪಷ್ಟತೆ ಸಾವರ್ಕರರಿಗೆ ಇತ್ತು ಹಾಗೂ ಅದರಲ್ಲಿ ಅವರು ಜಯಗಳಿಸಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಯುವಕರನ್ನು ಸಜ್ಜುಗೊಳಿಸುತ್ತಿದ್ದ ಸಾವರ್ಕರ್ ಅವರು ಬ್ರಿಟಿಷರಿಗೆ ಭಯೋತ್ಪಾದಕರಾಗಿ ಕಂಡರು. ಈ ಕಾರಣಕ್ಕಾಗಿಯೇ ಅವರಿಗೆ ಕರಿನೀರಿನ ಶಿಕ್ಷೆ ವಿಧಿಸಲಾಗಿತ್ತು.

ಬ್ರಿಟಿಷರಿಗೆ ಭಯೋತ್ಪಾದಕರಾಗಿ ಕಂಡಂಥ ಸಾವರ್ಕರ್ ಅವರು ಭಾರತೀಯರ ಪಾಲಿಗೆ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು; ಆದರೆ ಕಾಂಗ್ರೆಸ್ಸಿಗರು ಇಂದಿಗೂ ಸಾವರ್ಕರ್ ಭಯೋತ್ಪಾದಕರಾಗಿದ್ದ ಕಾರಣಕ್ಕೆ ಕರಿ ನೀರಿನ ಶಿಕ್ಷೆ ಅನುಭವಿಸಿದರು ಎಂದು ಹೇಳುತ್ತಾರೆ! ಕಾಂಗ್ರೆಸ್ ಇಂದಿಗೂ ಬ್ರಿಟಿಷರ ಏಜೆಂಟ್‌ನಂತೆ ವರ್ತಿಸುತ್ತಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ವೀರ ಸಾವರ್ಕರ್ ಹಾಗೂ ಸುಭಾಷ್‌ಚಂದ್ರ ಬೋಸರ ಕ್ರಾಂತಿಕಾರಿ ಚಿಂತನೆಗಳಿಂದ ಹುಟ್ಟಿಕೊಂಡ ಇಂಡಿಯನ್ ನ್ಯಾಷನಲ್ ಆರ್ಮಿಯನ್ನು ಸ್ವಾತಂತ್ರ್ಯಾನಂತರದಲ್ಲಿ ನೆಹರು ಹಾಗೂ ಕಾಂಗ್ರೆಸ್ ಸರಿಯಾಗಿ ನಡೆಸಿಕೊಳ್ಳಲಿಲ್ಲ. 1962ರ ಚೀನಾ ವಿರುದ್ಧದ ಯುದ್ಧದ ವೇಳೆ ನಮ್ಮ ಸೈನಿಕರಿಗೆ ಸರಿಯಾದ ಯುದ್ಧ ಸಾಮಗ್ರಿಗಳನ್ನು ಪೂರೈಸುವಲ್ಲಿ ನೆಹರು ವಿಫಲರಾಗಿದ್ದರು.

ಹೀಗಾಗಿ ಸಾವಿರಾರು ಸೈನಿಕರು ಕಾಲಿಗೆ ಬೂಟು ಇಲ್ಲದೆ ಹಿಮಾಲಯದ ತಪ್ಪಲಿನಲ್ಲಿ ಯುದ್ಧದಲ್ಲಿ ತೊಡಗಿಸಿಕೊಳ್ಳಬೇಕಾಗಿ ಬಂದಿತ್ತು. ಅಮೆರಿಕವು ಭಾರತದ ಸಹಾಯಕ್ಕೆಂದು ವಿಮಾನಗಳ ಮೂಲಕ ಯುದ್ಧ ಸಾಮಗ್ರಿಗಳನ್ನು ಪೂರೈಸಿದರೆ, ಆ ವಿಮಾನವು ಕೋಲ್ಕತಾದಲ್ಲಿ ಇಳಿದ ನಂತರ ಅಲ್ಲಿನ ಕಮ್ಯುನಿಸ್ಟ್ ಬೆಂಬಲಿತ ಸಂಘಟನೆಗಳು ಕೂಲಿ ಕಾರ್ಮಿಕರ ಮುಷ್ಕರಕ್ಕೆ ಕರೆ ನೀಡಿ, ಯುದ್ಧ ಸಾಮಗ್ರಿಗಳು ವಾರಗಟ್ಟಲೆ ಕೆಳಗಿಳಿಯದಂತೆ ನೋಡಿಕೊಂಡವು.

ಏಕೆಂದರೆ, ಕಮ್ಯುನಿಸ್ಟರಿಗೆ ಭಾರತವು ಚೀನಾ ವಿರುದ್ಧ ಗೆಲ್ಲಬಾರದು ಎಂಬ ಹಠವಿತ್ತು. ಮತ್ತೊಂದೆಡೆ, ನೆಹರು ಅವರು ಚೀನಾ ದೇಶದ ವಿರುದ್ಧದ ಯುದ್ಧವನ್ನು ಗಂಭೀರವಾಗಿ ತೆಗೆದು ಕೊಂಡಿರಲಿಲ್ಲ. ಆದರೆ, ಚೀನಾ ದೇಶಕ್ಕೆ ಸಹಾಯ ಮಾಡಲೆಂದು ಯುದ್ಧ ಸಾಮಗ್ರಿಗಳನ್ನು ವಿಮಾನದಿಂದ ಕೆಳಗಿಳಿಸಲು ಬಿಡದ ಮತ್ತು ಪರದೇಶದ ಏಜೆಂಟರಾದ ಕಮ್ಯುನಿಸ್ಟರು ವೀರ ಸಾವರ್ಕರರ ಬಗ್ಗೆ ಮಾತನಾಡುತ್ತಾರೆ!

ಚೀನಾ ದೇಶವು 1954ರಿಂದಲೇ ಭಾರತದ ಗಡಿಯನ್ನು ಆಕ್ರಮಿಸಿಕೊಂಡು ಬರುತ್ತಿತ್ತು. ಅದರ ಬಗ್ಗೆ ಇಡೀ ದೇಶವೇ ಎಚ್ಚರಿಕೆ ನೀಡಿದರೂ ನೆಹರು ನಿದ್ರೆ ಮಾತ್ರ ಭಂಗಗೊಳ್ಳಲಿಲ್ಲ. ನೆಹರುರಿಗೆ ಭಾರತೀಯರಿಗಿಂತ ಚೀನಾದ ಮಾವೋನ ಮೇಲಿನ ನಂಬಿಕೆ ಹೆಚ್ಚಾಗಿತ್ತು. ಅರುಣಾಚಲಪ್ರದೇಶ ಭಾಗದ ಭಾರತ-ಚೀನಾ ಗಡಿಯ ವಿಚಾರದಲ್ಲಿ ಉನ್ನತ ಮಟ್ಟದ ಸೇನಾಧಿಕಾರಿಗಳು ಸ್ಪಷ್ಟವಾಗಿ ಹೇಳಿದರೂ ನೆಹರು ತಲೆಕೆಡಿಸಿಕೊಳ್ಳಲಿಲ್ಲ.

ಭಾರತದ ಮೇಲೆ ಚೀನಾ ಆಕ್ರಮಣ ಮಾಡುತ್ತದೆ ಎಂದು ಹೇಳುವುದು ಸುಳ್ಳಾಗುತ್ತದೆ ಎಂದು ನೆಹರು ಅವರು 1962ರ ಆಗಸ್ಟ್ ತಿಂಗಳಲ್ಲಿ ಹೇಳಿದ್ದರು. ಆದರೆ ಲಡಾಖ್ ಪ್ರಾಂತ್ಯದಲ್ಲಿ ನುಗ್ಗಿದ ಚೀನಾ ಸೇನೆಯು ಭಾರತದ ಬಹುದೊಡ್ಡ ಭಾಗವನ್ನು ಆಕ್ರಮಿಸಿಕೊಂಡಿತು. ಸರಿಯಾದ ಯುದ್ಧ ಸಾಮಗ್ರಿಗಳಿಲ್ಲದೆ ನಮ್ಮ ಸೈನಿಕರು ಗಡಿಭಾಗದಲ್ಲಿ ಪ್ರಾಣ ಕಳೆದುಕೊಳ್ಳುವಂತಾಯಿತು.

ಬ್ರಿಟಿಷರ ವಿರುದ್ಧ ಹೋರಾಡಲು ದೊಡ್ಡದೊಂದು ಕ್ರಾಂತಿಕಾರಿ ಸೇನೆಯನ್ನು ಕಟ್ಟುವಲ್ಲಿ ಯಶಸ್ವಿಯಾದ ವೀರ ಸಾವರ್ಕರ್‌ರನ್ನು ಹೇಡಿ ಎನ್ನುವವರು, ಚೀನಾ ದೇಶದೊಂದಿಗೆ ಸಮರ್ಥವಾಗಿ ಸೆಣಸುವಷ್ಟರ ಮಟ್ಟಿಗೆ ಭಾರತೀಯ ಸೇನೆಯನ್ನು ಗಟ್ಟಿಗೊಳಿಸದೆ, ಸಾವಿರಾರು ಚದರ ಕಿಲೋಮೀಟರ್ ಭೂಭಾಗವನ್ನು ಚೀನಾ ದೇಶಕ್ಕೆ ಬಿಟ್ಟುಕೊಟ್ಟ ನೆಹರುರನ್ನು ಏನನ್ನುತ್ತಾರೆ?!

ದೇಶಭಕ್ತಿಯ ವಿಚಾರವಾಗಿ ಭಾರತೀಯ ಮಹಾವಿಶ್ವವಿದ್ಯಾಲಯವೊಂದರ ವಸತಿಗೃಹದಿಂದ ಹೊರದೂಡಲ್ಪಟ್ಟ ಮೊಟ್ಟಮೊದಲ ವಿದ್ಯಾರ್ಥಿ ವೀರ ಸಾವರ್ಕರ್. ವಿದೇಶಿ ಬಟ್ಟೆಗಳಿಗೆ ಬೆಂಕಿಯಿಟ್ಟು ಹೋಳಿ ಹಬ್ಬ ಆಚರಿಸಿದ ಮೊದಲ ದೇಶಾಭಿಮಾನಿ ವೀರ ಸಾವರ್ಕರ್. ಬ್ರಿಟಿಷರ ವಿರುದ್ಧ ನಿಂತಿದ್ದಕ್ಕಾಗಿ ತಾವು ಗಳಿಸಿದ್ದ ಬಿ.ಎ. ಪದವಿಯನ್ನೇ ಕಳೆದುಕೊಂಡ ಮೊದಲ ಭಾರತೀಯ ಪದವೀಧರ ವೀರ ಸಾವರ್ಕರ್.

ಆದರೆ ನೆಹರು ಅವರು ತಮ್ಮ ಬಾಲ್ಯದಲ್ಲಿ ಅಥವಾ ಕಾಲೇಜು ಅಧ್ಯಯನದ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಿರುವ ಕಥೆಗಳನ್ನು ಎಂದಾದರೂ ಕೇಳಿದ್ದೀರಾ? ನೆಹರುರನ್ನು ಬ್ರಿಟಿಷರು ಸರಪಳಿಯಲ್ಲಿ ಬಂಧಿಸಿ ಜೈಲಿಗಟ್ಟಿದ ಘಟನೆ ಒಂದಾದರೂ ಇದೆಯಾ? ಬ್ರಿಟಿಷರ ವಿರುದ್ಧ ಹೋರಾಡಿದ ವೀರ ಸಾವರ್ಕರ್‌ರಿಗೆ ಕರಿನೀರಿನ ಶಿಕ್ಷೆ ಸಿಕ್ಕಿದ ಮೇಲೆ, ಸ್ವಾತಂತ್ರ್ಯ ಹೋರಾಟಗಾರ ನೆಹರುರಿಗೆ ಯಾಕೆ ಬ್ರಿಟಿಷರು ಕರಿನೀರಿನ ಶಿಕ್ಷೆಯನ್ನು ವಿಧಿಸಲಿಲ್ಲ? ಸುಭಾಷ್ ಚಂದ್ರ ಬೋಸರು ಸ್ಥಾಪಿಸಿದ ಇಂಡಿಯನ್ ನ್ಯಾಷನಲ್ ಆರ್ಮಿಯ ಮೂಲಕಲ್ಪನೆಯ ಪಿತಾಮಹ ವೀರ ಸಾವರ್ಕರ್.

ಹುಟ್ಟಿನಿಂದಲೇ ಕ್ರಾಂತಿಕಾರಿಯಾಗಿದ್ದ ವೀರ ಸಾವರ್ಕರ್ ತಮ್ಮ ಬದುಕಿನ ಕಟ್ಟಕಡೆಯ ಕ್ಷಣದವರೆಗೂ ಭಾರತೀಯತೆಯ ಬಗ್ಗೆ ಸ್ಪಷ್ಟತೆ ಇದ್ದಂಥ ವ್ಯಕ್ತಿ. ಸಾವರ್ಕರ್ ಹಾಗೂ ಸುಭಾಷರು ಹಾಕಿದ ಗಟ್ಟಿಯಾದ ಅಡಿಪಾಯದಿಂದಾಗಿಯೇ ಭಾರತೀಯ ಸೇನೆಯಿಂದು ಜಗತ್ತಿನ ಆಕ್ರಮಣಕಾರಿ ಸೇನೆಗಳಲ್ಲಿ ಒಂದೆನಿಸಿಕೊಳ್ಳಲು ಸಾಧ್ಯವಾಗಿದೆ. ಕಾಂಗ್ರೆಸ್ಸಿಗರ ಸೇನಾವ್ಯವಸ್ಥೆಯ ನಿಶ್ಶಕ್ತೀಕರಣದ ನೀತಿಯಿಂದಾಗಿ ನಮ್ಮ ಸೈನಿಕರು ಚೀನಾ ವಿರುದ್ಧದ ಯುದ್ಧದಲ್ಲಿ ಪ್ರಾಣವನ್ನು ಕಳೆದುಕೊಳ್ಳಬೇಕಾಯಿತು.

ಇಲ್ಲದಿದ್ದರೆ ಭಾರತೀಯ ಸೇನೆಯು ಚೀನಾವನ್ನು ಅಂದೇ ಹಿಮ್ಮೆಟ್ಟಿಸುತ್ತಿತ್ತು. ಆಪರೇಷನ್ ಸಿಂದೂರ ಕಾರ್ಯಾಚರಣೆಯ ಮೂಲಕ ಪಾಕಿಸ್ತಾನದ ಅಷ್ಟದಿಕ್ಕುಗಳಿಗೂ ಕ್ಷಿಪಣಿಯನ್ನು ನುಗ್ಗಿಸಿದ್ದು ನಮ್ಮ ಭಾರತೀಯ ಸೇನೆಯೇ. ಅಂಥ ಕಾರ್ಯಾಚರಣೆಯನ್ನು ಅಣಕಿಸಿ, ಸೇನೆಯ ಮನೋಸ್ಥೈರ್ಯ ಕುಗ್ಗುವಂತೆ ಮಾಡಿದ್ದು ಕಾಂಗ್ರೆಸ್ ಪಕ್ಷದ ನಾಯಕರು. ಅಂದು ವೀರ ಸಾವರ್ಕರ್ ಮತ್ತು ಸುಭಾಷ್‌ಚಂದ್ರ ಬೋಸರ ನಡುವೆ ನಡೆದ ಸಂಭಾಷಣೆಯು ಇಂಡಿಯನ್ ನ್ಯಾಷನಲ್ ಆರ್ಮಿಯನ್ನು ಕಟ್ಟಲು ಅಡಿಪಾಯವಾಯಿತು ಎಂಬುದನ್ನು ಇಂಥವರು ಮರೆಯಬಾರದು.

**- ಮೋಹನ್** ವಿಶ್ವ

# ಭಾವ ಲಹರಿ

# ಬಾಳುವಂಥ ಹೂವೇ, ಬಾಡುವಾಸೆ ಏಕೆ?

**ಚಂದವಾಗಿ ಬದುಕಿ ಬಾಳ ಬೇಕಾದ ಈ ಮನಸ್ಸುಗಳ ಒಳಗೆ ಅದು ಯಾವ ಕ್ಷೋಭೆಯ ಕಡಲುಗಳು ಉಕ್ಕುತ್ತಿವೆ? ಹಸಿ ಮಣ್ಣಿನಂಥ ಈ ಮೆದುಳುಗಳ ಒಳಗೆ ಶಾಶ್ವತ ಶೂನ್ಯದ ಬೀಜ ಹೇಗೆ ಮೊಳಕೆಯೊಡೆಯಿತು?**

ಅವನು ಬಯಸಿದ ಯಾವುದನ್ನೂ ಬೇಡ ಅನ್ನಲಿಲ್ಲ. ಹೈಸ್ಕೂಲಿಗೆ ಹೋಗುವುದಕ್ಕೆ ಬೈಕ್ ಬೇಕು ಎಂದಿದ್ದ, ಕೊಡಿಸಿದ್ದೆ. ಅವನು ಬಯಸಿದ ಹೈಸ್ಕೂಲಿಗೇ ಸೇರಿಸಿದ್ದೆ. ದುಬಾರಿ ಸ್ಮಾರ್ಟ್ ಫೋನ್, ಅದಕ್ಕೆ ತಿಂಗಳ ಪ್ಯಾಕ್, ಒಳ್ಳೇ ಬಟ್ಟೆಬರೆ- ಯಾವುದಕ್ಕೂ ಬೇಡವೆಂದಿರಲಿಲ್ಲ. ಆದ್ರೂ ಸಣ್ಣ ವಿಷಯಕ್ಕೆ ಕೋಪಿಸಿಕೊಂಡು ಹೋಗಿ ಬಿಟ್ಟ ಸರ್. ಪರೀಕ್ಷೆಗೆ ಇನ್ನೊಂದು ತಿಂಗಳಿದೆ, ಯಾವಾಗ ಓದ್ತೀಯ, ಸದಾ ಫೋನ್‌ನ ಇರ್ತೀಯಲ್ಲ ಅಂತ ಗದರಿದ್ದಷ್ಟೇ. ನೇಣು ಹಾಕಿಕೊಂಡ ನೋಡಿ ಎಂದು ಆ ಹುಡುಗನ ಅಪ್ಪ ರೋದಿಸುತ್ತಿದ್ದರು.



ಎಸ್ಸೆಸ್ಸೆಲ್ಸಿಯಲ್ಲಿದ್ದ ಅವರ ಮಗ ತಿರುಗಿ ಬಾರದ ಸಾವಿನ ಮನೆಗೆ ಹೋಗಿ ಇವರಿಗೆ ನಿತ್ಯಶೋಕವನ್ನು ದಯಪಾಲಿಸಿದ್ದ. ಬೇರೆ ಮಕ್ಕಳೂ ಇಲ್ಲದ ಇವರ ಮುಂದೆ ದೊಡ್ಡ ಶೂನ್ಯವೊಂದು ನಿಂತಿತ್ತು. ಹದಿಮೂರು ವರ್ಷದ ಹುಡುಗನೊಬ್ಬ ಪ್ರೌಢರಂತೆ ಇದನ್ನು ನೀವು ಓದುವಾಗ ನಾನು ಸ್ವರ್ಗದಲ್ಲಿ ಖುಷಿಯಾಗಿರುತ್ತೇನೆ ಎಂದು ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ಚೆನ್ನಾಗಿ ಓದಿಕೋ ಎಂದು ಪೋಷಕರು ಹೇಳಿದ್ದಕ್ಕೆ ಹೈಸ್ಕೂಲ್ ಹುಡುಗಿಯೊಬ್ಬಳು ಬಾವಿಗೆ ಹಾರುತ್ತಾಳೆ. ಐಐಟಿ ವಿದ್ಯಾರ್ಥಿಯೊಬ್ಬ ಕಾಲೇಜಿನ 10ನೇ ಮಹಡಿಯಿಂದ ಜಿಗಿದು ಜೀವ ಕಳೆದು ಕೊಳ್ಳುತ್ತಾನೆ. ಸಿಇಟಿ ಪರೀಕ್ಷೆಯಲ್ಲಿ ಜಿಲ್ಲೆಗೆ ದ್ವಿತೀಯ ಸ್ಥಾನ ಬಂದಾತ ಪ್ರೇಮ ವೈಫಲ್ಯದಿಂದ ನೊಂದು ಮೈಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿಕೊಂಡು ಸಾಯುತ್ತಾನೆ.

ಇಂಥ ಒಂದಲ್ಲ ಒಂದು ಸುದ್ದಿಯನ್ನು ಪ್ರತಿದಿನ ಓದುತ್ತೇವೆ. ಮನೆಯಲ್ಲಿ ಆ ಪ್ರಾಯದ ಮಕ್ಕಳಿದ್ದರೆ ಸ್ವಲ್ಪ ಎಚ್ಚರಿಕೆ ವಹಿಸುತ್ತೇವೆ. ಕೆಲವರು ಅದನ್ನೂ ಮಾಡುವುದಿಲ್ಲ. ನಿನ್ನೆಯವರೆಗೂ ಚೆನ್ನಾಗಿದ್ದ ಹುಡುಗಿ ಇಂದು ಇದ್ದಕ್ಕಿದ್ದಂತೆ ಜಗತ್ತಿನಿಂದ ಕಣ್ಮರೆಯಾಗುತ್ತಾಳೆ. ಇಂದು ಬೆಳಗ್ಗಿನವರೆಗೂ ನಗು ನಗುತ್ತ ಮಾತಾಡುತ್ತಿದ್ದ ಹುಡುಗ ಕ್ಷಣಾರ್ಧದಲ್ಲಿ ಮಂಕಾಗಿ ಸಂಜೆ ಜೀವ ತೆಗೆದುಕೊಳ್ಳುತ್ತಾನೆ.

ಚಂದವಾಗಿ ಬದುಕಿ ಬಾಳ ಬೇಕಾದ ಈ ಮನಸ್ಸುಗಳ ಒಳಗೆ ಅದು ಯಾವ ಕ್ಷೋಭೆಯ ಕಡಲುಗಳು ಉಕ್ಕುತ್ತಿವೆ? ಹಸಿ ಮಣ್ಣಿನಂಥ ಈ ಮೆದುಳುಗಳ ಒಳಗೆ ಶಾಶ್ವತ ಶೂನ್ಯದ ಬೀಜ ಹೇಗೆ ಮೊಳಕೆಯೊಡೆಯಿತು? ಇದನ್ನು ನೋಡಬೇಕಲ್ಲವೇ. ಮೊದಮೊದಲು ಪತ್ರಿಕೆಗಳಲ್ಲಿ ಜೀವನದಲ್ಲಿ ಜಿಗುಪ್ಸೆಯಿಂದ ಆತ್ಮಹತ್ಯೆ ಮಾಡಿಕೊಂಡರು ಎಂದು ಓದುತ್ತಿದ್ದೆವು.

ವಯಸ್ಕರು ಹಾಗೆ ಮಾಡಬಹುದು, ಆದರೆ ಮಗು ಎಷ್ಟು ಮಹಾ ಜೀವನ ನೋಡಿರುತ್ತದೆ ಎಂಬ ಪ್ರಶ್ನೆ ದೊಡ್ಡವರದು. ಪ್ರತಿ ಜೀವಕ್ಕೂ ಅದರ ಜೀವನ ದೊಡ್ಡದೇ. ಮಕ್ಕಳು ಸಣ್ಣ ಸಂಗತಿಗಳಿಗೂ ಅತಿಯಾಗಿ ಪ್ರತಿಕ್ರಿಯಿಸುತ್ತಿರಾ, ಸಣ್ಣ ಗದರಿಕೆಯನ್ನೂ ಸಹಿಸುತ್ತಿಲ್ಲವಾ ಎಂಬಂಥ ಆತಂಕಗಳು ಕಣ್ಣೆದುರಿಗಿವೆ. ಗದರಿದರೆ, ಸಣ್ಣದೊಂದು ಅವಮಾನವಾದರೆ ಕಳೆದುಕೊಳ್ಳಬಹುದಾದಷ್ಟು ಪ್ರಾಣ ಅಗ್ಗವಾದುದು ಯಾವಾಗ? ಏನು ಇವರನ್ನು ಹೀಗೆ ಮಾಡುವಂತೆ ಪ್ರಚೋದಿಸುತ್ತಿದೆ? ಇವರು ಸದಾ ನೋಡುತ್ತಿರುವ ರೀಲ್‌ಗಳೇ? ಸಾಮಾಜಿಕ ಜಾಲತಾಣಗಳಲ್ಲಿ ಇವರು ಇತರರೊಂದಿಗೆ ತಮ್ಮನ್ನು ನಿರಂತರವಾಗಿ ಹೋಲಿಸಿಕೊಂಡು ಕೀಳರಿಮೆಗೆ ಒಳಗಾಗುತ್ತಿರುವುದೇ? ಏನೆ ಇದರ ಹಿಂದಿದೆ?

ಅಂಕಿ-ಅಂಶಗಳಿಲ್ಲದೇ ಈ ವಿಚಾರವನ್ನು ಮುಂದುವರಿಸಲಾಗುವುದಿಲ್ಲ.

ನಿಮಗೆ ಈ ಸಮೀಕ್ಷೆಯ ವಿವರವೊಂದು ಗೊತ್ತಿರಲಿ. ಭಾರತದ ಕಾಲೇಜು ವಿದ್ಯಾರ್ಥಿಗಳಲ್ಲಿ ಆತ್ಮಹತ್ಯೆಯ ಪ್ರವೃತಿಯ ಕುರಿತು ಇತ್ತೀಚೆಗೆ ನಡೆದ ಒಂದು ಸಮೀಕ್ಷೆ. ಕಳೆದ ವರ್ಷದಲ್ಲಿ (2024) 10 ವಿದ್ಯಾರ್ಥಿಗಳಲ್ಲಿ ಒಬ್ಬ/ಳು ಆತ್ಮಹತ್ಯೆಯ ಆಲೋಚನೆ ಹೊಂದಿದ್ದರು ಎಂಬುದು ಅಧ್ಯಯನದ ಫಲಿತಾಂಶ.

ಅಂದರೆ, ನಿಮ್ಮೂರಿನಲ್ಲಿ ಒಂದು ಸಾವಿರ ವಿದ್ಯಾರ್ಥಿಗಳಿದ್ದಾರೆ ಎಂದಿಟ್ಟುಕೊಳ್ಳಿ. ಅವರಲ್ಲಿ ಆತ್ಮಹತ್ಯೆಯ ಯೋಚನೆ ಹೊಂದಿರುವವರು ನೂರು ಮಂದಿ ಎಂದು ಹೇಳಿದರೆ ಸಮಸ್ಯೆಯ ಗಂಭೀರತೆ ನಿಮಗೆ ಅರ್ಥವಾಗಬಹುದು. ಸಂಶೋಧಕರ ಪ್ರಕಾರ ಭಾರತವು ವಿಶ್ವದ ಅತಿ ಹೆಚ್ಚು ಆತ್ಮಹತ್ಯೆ ಪ್ರಮಾಣ ಹೊಂದಿರುವ ದೇಶಗಳಲ್ಲಿ ಒಂದು.

ಮೆಲ್ಬೋರ್ನ್ ವಿವಿ, ನಿಮ್ಹಾನ್ಸ್ ಮತ್ತು ಹಲವಾರು ಭಾರತೀಯ ವೈದ್ಯಕೀಯ ಕಾಲೇಜುಗಳು ಸೇರಿಕೊಂಡು ಒಂಬತ್ತು ರಾಜ್ಯಗಳಲ್ಲಿ 30 ವಿಶ್ವವಿದ್ಯಾಲಯಗಳ 8542 ವಿದ್ಯಾರ್ಥಿಗಳನ್ನು ಮಾತಾಡಿಸಿ ಮಾಡಿದ ಸಮೀಕ್ಷೆ ಇದು. ಕಳೆದ ವರ್ಷ ಶೇ.12ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಆತ್ಮಹತ್ಯೆಯ ಆಲೋಚನೆ ಮಾಡಿದ್ದಾರೆ.

ಶೇ.5ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಅಂದರೆ 40 ವಿದ್ಯಾರ್ಥಿಗಳಿರುವ ತರಗತಿಯಲ್ಲಿ ಕನಿಷ್ಠ ಐದು ವಿದ್ಯಾರ್ಥಿಗಳು ತಮ್ಮ ಪ್ರಾಣ ತೆಗೆದುಕೊಳ್ಳುವ ಬಗ್ಗೆ ಯೋಚಿಸಿದ್ದಾರೆ. ಇಬ್ಬರು ಈಗಾಗಲೇ ಪ್ರಯತ್ನಿಸಿರಬಹುದು. ಇವು ಕೇವಲ ಅಂಕಿಅಂಶಗಳು ಅನಿಸುತ್ತದೆಯೇ? ಅಥವಾ ನಮ್ಮ ಒಟ್ಟು ಶೈಕ್ಷಣಿಕ- ಸಾಮಾಜಿಕ-ಕೌಟುಂಬಿಕ ವ್ಯವಸ್ಥೆಯ ದುರಂತ, ಮೌನ ಯಾತನೆಯ ಕಥೆ ಅನಿಸುತ್ತದೆಯೋ? ಇದು ಆಶ್ಚರ್ಯ ಮೂಡಿಸದಿದ್ದರೆ, ಇನ್ನೊಂದು ಸಂಗತಿ ಹೇಳುತ್ತೇನೆ ಕೇಳಿ.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ದತ್ತಾಂಶದ ಪ್ರಕಾರ ಕಳೆದ ಹತ್ತು ವರ್ಷಗಳಲ್ಲಿ ವಿದ್ಯಾರ್ಥಿಗಳ ಆತ್ಮಘಾತಕತನದ ವರದಿಗಳು ಎರಡು ಪಟ್ಟು ಹೆಚ್ಚಾಗಿವೆ. ನಿಖರ ಲೆಕ್ಕ ನೋಡ ಬೇಕೆಂದಿದ್ದರೆ, ದೇಶದಲ್ಲಿ 2013ರಲ್ಲಿ 6644 ಆತ್ಮಹತ್ಯೆಗಳಾಗಿದ್ದರೆ, 2022ರಲ್ಲಿ ಅದು 13044ಕ್ಕೆ ಏರಿಕೆಯಾಗಿದೆ.

2022ರ ಒಟ್ಟು ಆತ್ಮಹತ್ಯೆಗಳಲ್ಲಿ ವಿದ್ಯಾರ್ಥಿಗಳ ಪ್ರಮಾಣ ಶೇಕಡಾ 10. ಹೆಚ್ಚಿನ ಅಪಾಯದ ರಾಜ್ಯಗಳಲ್ಲಿ ಕರ್ನಾಟಕದ ಹೆಸರು ಮೇಲಿದೆ. ನಂತರ ಮಹಾರಾಷ್ಟ್ರ ಮತ್ತು ತಮಿಳುನಾಡು. 15-29 ವರ್ಷ ವಯಸ್ಸಿನ ವಿದ್ಯಾರ್ಥಿಗಳು ಇದರಲ್ಲಿ ಹೆಚ್ಚು ಬಾಧಿತರು. ಐಸಿ3 ಸಂಸ್ಥೆ ನೀಡಿರುವ 2024ರ ವರದಿಯ ಪ್ರಕಾರ ವಿದ್ಯಾರ್ಥಿಗಳ ಆತ್ಮಹತ್ಯೆಗಳು ವಾರ್ಷಿಕವಾಗಿ ಶೇಕಡಾ 4ರಷ್ಟು ಹೆಚ್ಚುತ್ತಿವೆ.


ಇನ್ನೂ ಒಂದು ಸಂಗತಿ. ನಾವು ಯಾವುದನ್ನೆಲ್ಲ ಗಣ್ಯ ಪ್ರತಿಷ್ಠಿತ ವಿದ್ಯಾಸಂಸ್ಥೆಗಳು ಎಂದು ಕರೆಯುತ್ತೇವೆಯೋ, ಅಂಥ ಸಂಸ್ಥೆಗಳಲ್ಲಿ ಈ ಬಿಕ್ಕಟ್ಟು ತೀವ್ರವಾಗಿದೆಯಂತೆ. 2019 ಮತ್ತು 2023ರ ನಡುವೆ ಐಐಟಿಗಳು, ಎನ್‌ಐಟಿಗಳು ಮತ್ತು ಐಐಎಂಗಳಲ್ಲಿ 98 ಆತ್ಮಹತ್ಯೆಗಳು ವರದಿಯಾಗಿವೆ. ಅದರಲ್ಲಿ ಐಐಟಿಗಳಲ್ಲಿ 39 ಸಾವು. ಅತಿ ಹೆಚ್ಚು ಐಐಟಿ ಮದ್ರಾಸ್. ಐಐಟಿಗಳಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಶೇ. 61ರಷ್ಟು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಒತ್ತಡ ಪ್ರಮುಖ ಪ್ರಚೋದನೆ.

ಜೊತೆಗೆ ಉದ್ಯೋಗ ಮಾರುಕಟ್ಟೆಯ ಅಸ್ಥಿರತೆ. ಇದು ಇನ್ನಷ್ಟು ಹದಗೆಡಿಸುವ ಸಂಗತಿ. 25 ವರ್ಷದೊಳಗಿನ ಶೇ. 42ರಷ್ಟು ಯುವಕರು ನಿರುದ್ಯೋಗಿಗಳು. ಮೇಲಿನವು ಬರಿದೇ ಒಣ ಅಂಕಿ ಅಂಶಗಳು ಎಂದು ದಯವಿಟ್ಟು ಬದಿಗಿಡಬೇಡಿ. ಸಾವಿಗೀಡಾದ ಮಗುವಿನ ಮನೆಯವರಿಗೆ ಇದು ಅಂಕಿಯಲ್ಲ, ಎದೆಗೆ ಇರಿದ ಮುಳ್ಳು. ಇನ್ನು ಮುಂದಿನ ಮಾತುಗಳು ನನ್ನದಲ್ಲ, ಆತ್ಮಹತ್ಯೆಗಳನ್ನು ಅಧ್ಯಯನ ಮಾಡುತ್ತ ಬಂದಿರುವ ನಾನಾ ತಜ್ಞರದು.

ಶೈಕ್ಷಣಿಕ ಒತ್ತಡ ಮತ್ತು ಉದ್ಯೋಗದ ಒತ್ತಡಗಳು ಹೆಚ್ಚಿನ ಸಾವಿಗೆ ಕಾರಣ ಎಂಬುದು ಮೇಲಿನ ಅಂಶಗಳಲ್ಲಿ ಮನದಟ್ಟಾಗುತ್ತದೆ. ಆದರೆ ಈ ಒತ್ತಡವನ್ನು ಸೃಷ್ಟಿಸುತ್ತಿರುವವರು ಯಾರು? ಒಟ್ಟಾರೆ ವ್ಯವಸ್ಥೆಯೇ ಈ ವಿಷಯದಲ್ಲಿ ಖಳನಾಯಕ ಎಂಬುದು ನಿಮಗೆ ಗೊತ್ತಿರುವಂಥದೇ.

ಎಸ್ಸೆಸ್ಸೆಲ್ಸಿಯಲ್ಲಿ ಮಕ್ಕಳು ಒಂದು ಅಂಕ ಕಡಿಮೆ ಬಂದರೆ ತಮಗಾದ ಸಾರ್ವಜನಿಕ ಅವಮಾನ ಎಂದು ಭಾವಿಸುವ ಪೋಷಕರ ನಿರೀಕ್ಷೆ ಇಲ್ಲಿ ಮೊದಲ ಆರೋಪಿ ನಂಬರ್ ವನ. ಅಷ್ಟು ಅಂಕ ದೊರೆಯದಿದ್ದರೆ ನಮ್ಮಲ್ಲಿ ಸೇರಿಸಿಕೊಳ್ಳುವುದಿಲ್ಲ ಎನ್ನುವ ಪ್ರತಿಷ್ಠಿತ ಸಂಸ್ಥೆಗಳು ಆರೋಪಿ ನಂಬರ್ ಟೂ.

ಬದುಕನ್ನು ಇಂಥ ಅಂಕಿಗಳ ಮಾರಣಾಂತಿಕ ಹಂಗರ್ ಗೇಮ್ ಆಟವಾಗಿಸಿರುವ ಒಟ್ಟಾರೆ ಔದ್ಯೋಗಿಕ ವಾತಾವರಣ ಇದನ್ನೆಲ್ಲ ಆವರಿಸಿರುವ ರಕ್ತಬೀಜ.



ವೈಫಲ್ಯವನ್ನು ನಾಚಿಕೆಗೇಡಿನ ಸಂಗತಿ ಎಂದು ನೋಡುವ ಪೋಷಕರು ಮಕ್ಕಳಲ್ಲಿ ಮಾನಸಿಕ ಆರೋಗ್ಯ ಸಮಸ್ಯೆಯ ಅಪಾಯವನ್ನು ಹೆಚ್ಚಿಸುತ್ತಾರೆ.

ಶೈಕ್ಷಣಿಕ ಕೌನ್ಸೆಲಿಂಗ್ ಎಂಬುದು ನಮ್ಮಲ್ಲಿ ಇನ್ನೂ ಶೈಶವಾವಸ್ಥೆಯಲ್ಲಿರುವ ಪರಿಕಲ್ಪನೆ. ಇನ್ನು ಮಾನಸಿಕ ಆರೋಗ್ಯ ಬೆಂಬಲ ಅಥವಾ ಸೈಕಾಲಜಿಸ್ಟರ ಸಹಾಯ ಪಡೆಯುವುದು ಎಂಬುದು ದೂರದ ಮಾತು ಅಥವಾ ಎಲ್ಲವೂ ಕೈಚೆಲ್ಲಿದ ಮೇಲಿನ ಸಂಗತಿ. 15-24 ವರ್ಷ ವಯಸ್ಸಿನವರಲ್ಲಿ ಹೀಗೆ ಬೆಂಬಲ ಪಡೆಯಲು ಮುಂದೆ ಬರುವವರು ಕೇವಲ 41 ಪ್ರತಿಶತ. ಐಐಟಿಗಳು, ಎನ್ ಐಟಿಗಳಲ್ಲಿ ಕೌನ್ಸೆಲರ್- ವಿದ್ಯಾರ್ಥಿ ಅನುಪಾತ ಅತಿ ಕಡಿಮೆ. ಇದೆಲ್ಲವೂ ವಿದ್ಯಾರ್ಥಿಗಳ ಮಾನಸಿಕ ಕುಸಿತಕ್ಕೆ ಮೂಲ.

ಇತ್ತೀಚಿನ ಅಧ್ಯಯನಗಳ ಪ್ರಕಾರ ಕೌಟುಂಬಿಕ ಸಂಬಂಧಗಳ ಗುಣಮಟ್ಟವೂ ಆತ್ಮಹತ್ಯೆಯ ಸಾಧ್ಯತೆಯನ್ನು ಸೂಚಿಸುವ ಸಂಗತಿಗಳಲ್ಲಿ ಒಂದು. ಕುಟುಂಬದೊಂದಿಗೆ ನಮ್ಮ ಸಂಬಂಧ ಏನೇನೂ ಚೆನ್ನಾಗಿಲ್ಲ ಎನ್ನುವ ಅಥವಾ ಹಾಗೆ ಭಾವಿಸಿದ ವಿದ್ಯಾರ್ಥಿಗಳು ಸಾವಿನತ್ತ ಸರಿಯುವ ಪ್ರಯತ್ನ ಮನಮಾಡುವ ಸಾಧ್ಯತೆ ಗಮನಾರ್ಹವಾಗಿ ಹೆಚ್ಚು.

ಭಾರತದ ಸಮಾಜದಲ್ಲಿ ಕುಟುಂಬವೇ ಭಾವನಾತ್ಮಕ ಮತ್ತು ಆರ್ಥಿಕ ಬೆಂಬಲದ ಪ್ರಾಥಮಿಕ ಮೂಲ. ಕುಟುಂಬ ಸರಿಯಾಗಿ ಕೆಲಸ ಮಾಡದೆ ಹೋದರೆ ಯುವಕರು ಹೆಚ್ಚೆಚ್ಚು ಅಂಚಿಗೆ ಸರಿಯುತ್ತಾ ಹೋಗಬಹುದು. ಮನೆಯಲ್ಲಿ ದಬ್ಬಾಳಿಕೆಯ ವಾತಾವರಣ, ತಲೆಮಾರುಗಳ ನಡುವಿನ ಘರ್ಷಣೆಗಳು, ಭಾವನಾತ್ಮಕ ನಿರ್ಲಕ್ಷ್ಯ ಇದೆಲ್ಲ ಅಸಹನೀಯ ಒಂಟಿತನದ ಭಾವನೆ ಉಂಟು ಮಾಡಬಹುದು.

ಇದು ಮಾನಸಿಕ ಆರೋಗ್ಯ ತಜ್ಞರು ದೀರ್ಘಕಾಲದಿಂದ ಹೇಳುತ್ತ ಬಂದಿರುವ ಮಾತು. ಆರೋಪಿಗಳ ಸಾಲಿನಲ್ಲಿ ಇರುವ ಇನ್ನೊಂದು ಸಂಗತಿಯೆಂದರೆ ಆತ್ಮಹತ್ಯೆಯ ಅಲೆಗಳ ಗುಣ. ಒಂದು ಆತ್ಮಹತ್ಯೆ ಇನ್ನೊಂದನ್ನು ಪ್ರಚೋದಿಸಬಹುದು! ವಿದ್ಯಾರ್ಥಿಯ ಸ್ನೇಹಿತರೋ ತಿಳಿದವರೋ ಪ್ರಾಣ ತೆಗೆದು ಕೊಂಡರೆ, ಅಂಥ ಸಾವುಗಳ ಬಗ್ಗೆ ಸದಾ ಮಾತಾಡುತ್ತಿದ್ದರೆ, ಅದರ ಆಲೋಚನೆಗಳು ಸದಾ ಬರುತ್ತಿದ್ದರೆ, ಆ ಬಗೆಗಿನ ಸುದ್ದಿಗಳನ್ನು ಕೇಳುತ್ತಿದ್ದರೆ ಇದೆಲ್ಲದರಿಂದ ವಿದ್ಯಾರ್ಥಿ ಆತ್ಮಹತ್ಯೆಗೆ ಪ್ರಯತ್ನಿಸುವ ಸಾಧ್ಯತೆ ಗಣನೀಯವಾಗಿ ಹೆಚ್ಚಾಗುತ್ತದಂತೆ.

ಒಬ್ಬ ದುಃಖಿತ ವ್ಯಕ್ತಿಯಿಂದ ಇನ್ನೊಬ್ಬರಿಗೆ ಸಾವು ಹಾಗೆ ಸದ್ದಿಲ್ಲದೆ ದಾಟಿಕೊಳ್ಳುತ್ತದೆ ಭಾವನಾತ್ಮಕ ನೋವೇ ಹೆಚ್ಚಾಗಿ ಮೂಲ ಕಾರಣವಾಗಿದ್ದರೂ, ಆತ್ಮಹತ್ಯೆಗೆ ವೇಗವರ್ಧಕಗಳಾಗಿ ಕೆಲಸ ಮಾಡುವುದು ಮಾದಕ ವಸ್ತುಗಳು. ಹೆಚ್ಚಿದ ಮದ್ಯ ಸೇವನೆ ಮತ್ತು ಆತ್ಮಹತ್ಯೆಯ ಪ್ರಯತ್ನಗಳ ನಡುವೆ ಸ್ಪಷ್ಟವಾದ ಸಂಬಂಧಗಳನ್ನು ಸಮೀಕ್ಷೆಗಳು ಕಂಡುಹಿಡಿದಿವೆ.

ಈ ಮಾದಕ ವಸ್ತುಗಳು ನೋವನ್ನು ಮರೆಸುವ ಬದಲು, ಮನಸ್ಸಿನ ಪ್ರಕ್ಷುಬ್ಧತೆಯನ್ನು ಹೆಚ್ಚಿಸುತ್ತವೆ. ರ‍್ಯಾಗಿಂಗ್, ಬುಲ್ಲೀಯಿಂಗ್, ಕಿರುಕುಳ, ಶಾಲೆಯಲ್ಲಿ ತಾರತಮ್ಯ ಇವೆಲ್ಲವೂ ಆತ್ಮಹತ್ಯೆಯ ಇನ್ನಿತರ ಕಾರಣಗಳು. ಮಕ್ಕಳನ್ನು ಹೇಗೆ ಬೆಳೆಸುತ್ತಿದ್ದೇವೆ ಎಂಬುದನ್ನು ನಾವು ಮತ್ತೆ ಮತ್ತೆ ನೋಡಿಕೊಳ್ಳಬೇಕಾದ ಕಾಲವಿದು.

ಇಷ್ಟು ಅಂಕ ತೆಗೆದರೆ ಮಾತ್ರ ನೀನು ಯಶಸ್ವಿ ಎಂಬ ಭಾವನೆ ಬರುವ ಹಾಗೆ ಸದಾ ಮಾತನಾಡುವುದು ತಪ್ಪು. ನೀನು ಹತ್ತು ಸಲ ಬಿದ್ದರೂ ಹನ್ನೊಂದನೇ ಸಲ ಎದ್ದು ನಿಲ್ಲು, ಆಗ ಗೆಲುವು ನಿನ್ನದಾಗಬಹುದು ಎಂದು ಹುರಿದುಂಬಿಸುವ, ನಿನ್ನೊಂದಿಗೆ ಸದಾ ನಾವಿರುತ್ತೇವೆ ಎಂದು ಭರವಸೆ ನೀಡುವ, ನಿನ್ನ ಸೋಲು- ಗೆಲುವು ನಮಗೆ ಮುಖ್ಯವಲ್ಲ ಬದಲಾಗಿ ನೀನೇ ಮುಖ್ಯ ಎನ್ನುವ ಪೇರೆಂಟಿಂಗ್ ಇಂದಿನ ಅಗತ್ಯ. ಮಕ್ಕಳಿಗೆ ಕೌನ್ಸೆಲಿಂಗ್ ಅಗತ್ಯವಿದೆ, ನಮಗೂ ಇದೆ ಎಂದು ಗುರುತಿಸಿಕೊಳ್ಳುವುದೂ ಜವಾಬ್ದಾರಿಯುತ ಪೇರೆಂಟಿಂಗ್‌ನ ಒಂದು ಭಾಗ. ಶಾಲೆಗಳು, ವಿವಿಗಳು ವಿದ್ಯಾರ್ಥಿಗಳಿಗೆ ತಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಸುರಕ್ಷಿತ ಸ್ಥಳ ನೀಡಬೇಕು. ಮಕ್ಕಳಲ್ಲಿ ಖಿನ್ನತೆಯ ಎಚ್ಚರಿಕೆ ಚಿಹ್ನೆಗಳನ್ನು ಗುರುತಿಸುವ ತರಬೇತಿ ಅಧ್ಯಾಪಕರಿಗೂ ಇರಬೇಕು.


**- ಹರೀಶ್** ಕೇರ

# ಕನ್ನಡ ಕವನಗಳು

## ನಾನಿನ್ನೂ ಉಸಿರಾಡುತ್ತಿರುವೆ

ಉಳ್ಳವರು ಶಿವಾಲಯವ
ಕಟ್ಟುವರು...
ಇದು ಇಂದಲ್ಲ, ಅಂದು
ಅಂದಿದ್ದರು ಬಸವಣ್ಣ
ಇಂದಾದರೂ ನಾ ಕಟ್ಟಬಲ್ಲೇನೆ..?
ಶಿವಾಲಯವನ್ನಲ್ಲ...
ಮೇಲು ಕೀಳು, ಬಡವ ಬಲ್ಲಿದ,
ಹೆಣ್ಣು ಗಂಡು
ಹೀಗೆ, ಎರಡು ತೀರಗಳ ನಡುವೆ
ಗಟ್ಟಿ ಅಲುಗಾಡದ ಸೇತುವೆಯ...
ಹೆಗಲಿಗೆ ಹೆಗಲು ಕೊಟ್ಟು
ಕೈಯ ಚಾಚಿ ಹಿಡಿದು ಸಾಗಿ
ಲೋಕದೆದುರು ಕಿರುನಗೆ
ಬೀರಲು...
ಅದೋ... ಅಲ್ಲೊಂದು ಹೆಣ್ಣು
ಕಾಣೆಯಂತೆ...
ಹಾ... ಇಲ್ಲ ಹೆಣ ಸಿಕ್ಕಿದೆ...
ಹುಡುಕಾಡಿದವರು ಮನೆ
ಸೇರಿದರು
ಇಲ್ಲೊಂದು ಹುಡುಗಿ...ಅಲ್ಲಲ್ಲ
ಮಗು...
ಹರೆಯ ನೋಡದ ಬಾಲೆ
ಕಿಟಾರನೆ ಕಿರುಚಿ ಕನ್ಯಾಪೊರೆ ಕಳಚಿ
ನಿಶ್ಚಲವಾಯಿತು
ಜೀವ ಉಸಿರು ಚೆಲ್ಲಿತು...
ಆದಾರೋ ಬೊಬ್ಬಿರಿದರಂತೆ
ಅನ್ಯಾಯಕ್ಕೆ ಧಿಕ್ಕಾರವೆಂದು
ಕೂಗಿದರಂತೆ
ಅದೊಂದು ಅಸಹನೀಯ ಕೀರಲು
ಧ್ವನಿ
ಯಾರೋ ಗಂಟಲು
ಅದುಮಿದಾಗ...
ಧ್ವನಿ ಕ್ಷೀಣವಾಯಿತು
ಈಗ ನಿರಾಳ...
ಪ್ರವಾಹಕ್ಕೆದುರು ಈಜಿದ ಮೀನು
ಬಲೆಯಲ್ಲಿ ಕೆಡವಿ ಬಿದ್ದು
ಒದ್ದಾಡಿದರೆ,
ನಿಶ್ಯಬ್ಧದಿ ತೇಲಿ ಹೋದ ನಿರ್ಜೀವ
ಮೀನು
ಉಸಿರಾಡಿದೆ...
ನಾನು ಉಸಿರಾಡುತ್ತಿರುವೆ
ಮೌನವನ್ನೇ ಕುಡಿದು

**- ಜನಾರ್ದನ ದುರ್ಗ,** ಪುತ್ತೂರು



## ಅವಳೆಂದರೆ..



ಅವಳೆಂದರೆ
ಮಳೆ;
ಸುರಿದೂ
ಸುರಿದೂ
ಹಸಿರಾದದ್ದು
ನೆನಪು..
ವೈಶಾಖದ ಧಗೆಯಂಥ
ವಿರಹವನ್ನು
ಸಹಿಸಲಾಗದವನಿಗೆ
ಒಲಿದ ಶ್ರಾವಣ..
ಮುಂಗುರುಳನ್ನು ಎಣಿಸಲು
ಪೂರ್ವತಯಾರಿಗಾಗಿ
ತಾರೆಗಳೆಣಿಸೋ ಚಟುವಟಿಕೆಯೇ
ಅವನ ದಿನಚರಿ..
ಮಳೆಯೆಂದರೆ
ಅವಳ ಮನಸು
ಚಂಚಲ;
ವಾತಾವರಣದ ಜೂಜಾಟ..
ಪ್ರೀತಿಯೆಂದರೆ
ಮಳೆಗೆ ನೆನೆದ ತನು;
ಹೆಚ್ಚಾದರೆ
ವಿಪರೀತ ಶೀತ ಕೆಮ್ಮು..

**- ಮೌನರಾಗ ಶಮೀರ್** ನಂದಿಬೆಟ್ಟ (ಸನಂ.)

## ಛಲದ ಹೆಜ್ಜೆಗಳು

ಏಳು, ಎದ್ದೇಳು!
ಆಗಸವ ನೋಡು,
ಕೊನೆಯಿಲ್ಲದ ಅನಂತನೆಡೆಗೆ
ನೋಡು,
ಚೈತನ್ಯದ ಸೊಬಗ ತರುತ್ತಿರುವ
ಆಕಾಶದೆಡೆಗೆ ನೋಡು,
ಜಗದ ನೋವುಗಳ ದಾಟಿ ನಡೆ,
ಮೌನ ಸಾಗರವನೇ ಹೊತ್ತು,
ನಿಲ್ಲದೇ ನಡೆಯುವುದ ಕಲಿ,
ಗುರಿ ಮುಟ್ಟುವವರೆಗೂ ಇರಲಿ
ಛಲ,
ನಡೆದಷ್ಟೂ ಸಂತೋಷದ
ಭಾವಗಳು ಉಕ್ಕಲಿ,
ನಡೆಯಬೇಕು ಮೈಲುಗಳ
ಧಣಿವರಿಯದೆ,
ಜೊತೆಗೆ ತುಟಿಯ ಮೇಲೆ
ನಗುವಿರಲು,
ಎಲ್ಲ ಗೆಲುವುಗಳು, ಎಲ್ಲ
ಕದನಗಳು ನನ್ನದೇ!




# ಜೀವನಕೆ ಜಬಾಬುದಾರ ಯಾರು?

ಬದುಕು ಭರವಸೆಗಳ ಸಾಗರ ಅನಂತ ಸುಖ-ದುಃಖಗಳನ್ನು ಹೊತ್ತು ಸಾಗುವ ಬೃಹದಾಕಾರದ ಹಡಗು. ಈ ಹಡಗು ಸಾಗರದ ಆಳ, ವಿಶಾಲತೆಯನ್ನು ಅರಿತಿದ್ದರೂ ಕೂಡ; ತನಗೆ ಎದುರಾಗುವ ಬಂಡೆಯಂತಹ ಅಲೆಗಳಿಗೆ ಸವಾಲೊಡ್ಡಿ ಪ್ರಯಾಣ ಮಾಡುತ್ತದೆ. ಪ್ರಕೃತಿಯ ಆರ್ಭಟ ತೋರುವ ಸಮಯ-ಸಂದರ್ಭ ಅರಿತವರಾರು? ಹಾಗೇ ನಮ್ಮ ಬದುಕಿನಲ್ಲಿ ಬರುವ ಬಂಡೆಯಂತಹ ಕಷ್ಟ ಕಾರ್ಪಣ್ಯಗಳು ನಮ್ಮನ್ನು ಕುಗ್ಗಿಸಲು ತಾ ಮುಂದು ನಾ ಮುಂದು ಎಂದು ಹಪಹಪಿಸುತ್ತವೆ. ನಮ್ಮ ಕಷ್ಟಗಳ ಆಳ-ಅಗಲ ಅರಿತಿರುವ ನಾವುಗಳು, ಅವುಗಳನ್ನು ತೂಕಬದ್ಧವಾಗಿ ಅಳೆದು ತೂಗಿ ನಮ್ಮ ಸುಖಕರ ಪ್ರಯಾಣವನ್ನು ಮುಂದುವರೆಸುತ್ತಿರಬೇಕು. ಬದುಕು ಬಂಗಾರವಾಗಲು ಅದಕ್ಕೆ ಒಬ್ಬ ಜಬಾಬುದಾರ ಬೇಕು, ಆಗ ಅದು ಹಿಡಿತದ ಬದುಕು, ಪಕ್ವತೆಯ ಬದುಕಾಗುವುದು.

ಈ ಲೇಖನದ ಮುಖ್ಯ ಅಂಶವೇ ಜಬಾಬುದಾರ. ಇದು ಒಬ್ಬ ವ್ಯಕ್ತಿಯು ತನ್ನ ಕಾರ್ಯಗಳು ಮತ್ತು ಕರ್ತವ್ಯಗಳಿಗೆ ಹೇಗೆ ಜವಾಬ್ದಾರನಾಗಬೇಕಾಗಿರುವುದು ಅಥವಾ ಹೊಣೆಗಾರನಾಗಬೇಕಾಗಿರುವುದು ಎಂಬುದನ್ನು ಸೂಚಿಸುತ್ತದೆ. ಜವಾಬ್ದಾರಿಯ ಆಳಕ್ಕಿಳಿದಾಗ ನಾಗರಿಕ ಜವಾಬ್ದಾರಿ, ವೃತ್ತಿಪರ ಜವಾಬ್ದಾರಿ, ಕುಟುಂಬದ ಜವಾಬ್ದಾರಿ, ಸಾಮಾಜಿಕ ಜವಾಬ್ದಾರಿ ಹಾಗೂ ಕಾನೂನು ಜವಾಬ್ದಾರಿ ಹೀಗೆ ಒಟ್ಟಾರೆಯಾಗಿ ಜವಾಬ್ದಾರಿ ಎಂಬುದು ವ್ಯಕ್ತಿಗಳು ಸಮಾಜ ಮತ್ತು ಪರಿಸರದ ಮೇಲೆ ಸಕಾರಾತ್ಮಕ ಪರಿಣಾಮ ಬೀರಲು ಮತ್ತು ಕರ್ತವ್ಯಗಳನ್ನು ಸರಿಯಾಗಿ ನಿಬಾಯಿಸಲು ಸಹಾಯ ಮಾಡುವ ಒಂದು ಮುಖ್ಯವಾದ ಪರಿಕಲ್ಪನೆಯಾಗಿದೆ.

ನಮ್ಮ ಜೀವನ ಕೇವಲ ತುಸು ದಿನದ ಪ್ರಯಾಣವಾಗಿದ್ದು, ಅದನ್ನು ಸಾರ್ಥಕವಾಗಿ ಬದುಕಬೇಕು. ಇದಲ್ಲದೆ, ಬೇರೆಯವರಿಗೆ ಮಾದರಿಯಾಗುವುದರ ಜೊತೆಗೆ ನಂಬಿಕೆ, ಪ್ರೀತಿ ಮತ್ತು ವಿಶ್ವಾಸವನ್ನು ಹೊತ್ತು ಬದುಕಿನ ಸಾರ್ತಕತೆಯ ದಡ ಸೇರಬೇಕು. ನಮ್ಮ ಬದುಕಿಗೆ ಜಬಾಬುದಾರರಾಗಿ ನಾವೇ ನಮ್ಮನ್ನು ವಹಿಸಿಕೊಂಡಾಗ ಮಾತ್ರ ಅದು ಸಪಲತೆಯ ಬದುಕಾದೀತು.

ಒಬ್ಬ ವ್ಯಕ್ತಿ ಬೇರೆಯವರ ರೀತಿ ನೀತಿಗಳನ್ನು ದೃಷ್ಟಿಸಿ, ಅವರಂತೆ ನಾನು ಬದುಕಬೇಕೆಂದಾಗ ಜೀವನ ಚೊಟ್ಟಾಗಿ ಬಿಡುತ್ತದೆ. ಕಷ್ಟಕ್ಕೆ ಪ್ರತಿಕಷ್ಟಗಳನ್ನು ಮೈಮೇಲೆ ಹೊತ್ತುಕೊಂಡಾಗ ಬದುಕ ಪಯಣದಲಿ ಸಾಗಲು ಸಾಧ್ಯವೇ? ನಾವು ನಮ್ಮನ್ನು ದೃಷ್ಟಿಸಿಕೊಂಡು ಹಾಸಿಗೆ ಇದ್ದಷ್ಟು ಕಾಲು ಚಾಚು ಎಂಬ ದೊಡ್ಡವರ ಮಾತಿನಂತೆ ಕೆಟ್ಟದನ್ನು ಕಿತ್ತೊಗೆದು ನಮ್ಮ ಇತಿ-ಮಿತಿಯೊಳಗೆ ರುಚಿಗೆ ತಕ್ಕಷ್ಟು ಉಪ್ಪು ಎನ್ನುವ ಹಾಗೆ ಬದುಕಿಗೆ ಬೇಕಾದ ಸುಖ ಸಂತೋಷ, ವಿನಮ್ರತೆ ಸದಾ ನಮ್ಮಲ್ಲಿಟ್ಟುಕೊಂಡು ಸಾಗಿದಾಗ ಸಾಗರದಷ್ಟು ಸುಖವ ಕಾಣಲು ಸಾಧ್ಯ.

ಮುಂದುವರೆದು, ಮುಗಿಲೆತ್ತರಕೆ ಏರಿಸಿ ಬಣ್ಣಿಸಿದರೂ ಅದು ತುಸುವೆನಿಸುವಂತೆ ಕಾಣುವ ನಿಸರ್ಗದ ಸೊಬಗಿನ ನಡುವೆ ಬದುಕುವ ನಮಗೆ ಮತ್ತು ಅದರ ಬಾಗವಾಗಿರುವ ನಮ್ಮ ಪೀಳಿಗೆಗೆ ಅದನ್ನು ಸಂರಕ್ಷಿಸುವುದು, ನಮ್ಮ ಆದ್ಯ ಕರ್ತವ್ಯವಾಗಿದೆ. ಎಷ್ಟೋ ಆಶೊತ್ತರಗಳನ್ನು ಹೊತ್ತು ಸಾಗುತ್ತಿರುವ ನಾವು ಸ್ವಾರ್ಥಿಯಾಗುತ್ತಿದ್ದೇವೆ. ತಾತ್ಪರ್ಯವೇನೆಂದರೆ, ಈ ಜಗದಲ್ಲಿ ಒಂದಿಷ್ಟು ದಿನಗಳನ್ನು ಕಳೆದು ಹೋಗುವ ನಾವು, ಈ ಸುಂದರ ಭುವಿಯಲ್ಲಿ ಬದುಕಲು ಕಲಿಯುವ ಅನಿವಾರ್ಯ ಬಂದೊದಗಿದೆ. ಒಂಚೂರು ದಾರಿಯಲ್ಲಿ ನಡೆಯುವಾಗ ಕಸ-ಕಡ್ಡಿ ಕಂಡಾಗ, ಕಂಡೂ ಕಾಣದಂತೆ ಚಲಿಸುತ್ತೇವೆ. ಅದೇ ಮುಳ್ಳು ಬಂದಾಗ ಜಾಗೃತರಾಗುತ್ತೇವೆ. ಅಂದರೆ, ಕಷ್ಟಗಳು, ಕೆಟ್ಟ ಸಂದರ್ಭಗಳು ನಮ್ಮ ಸ್ನೇಹಿತರಿದ್ದಂತೆ ಸದಾ ಜೊತೆಗಿರುತ್ತವೆ. ಅವುಗಳನ್ನು ಜಾಗೂರುಕತೆಯಿಂದ ನಿಬಾಯಿಸಿ ಬದುಕಿನ ಕಲಿಕೆಯ ಪಿ.ಹೆಚ್.ಡಿ ಪಡೆಯಬೇಕು.

ಶಿಕ್ಷಣವು ಬದುಕು ಸಾಗಿಸಲು ಬೇಕಾಗಿರುವ ದಾರಿಯಾಗಬಹುದಷ್ಟೆ. ನಾವುಗಳು ಅದರ ಜೊತೆಗೆ ಒಂದಿಷ್ಟು ಸಂಸ್ಕಾರ, ನಡೆ-ನುಡಿ ಮತ್ತು ಬದುಕುವ ಕಲೆಯನ್ನು ಕಲಿಯಬೇಕು. ತದನಂತರ ಜವಾಬ್ದಾರಿ ಅನ್ನುವುದು ಮುಖ್ಯವಾಗಿ ನಮ್ಮ ಯೋಗ್ಯತೆ ಮತ್ತು ಕಸುವುಗಳನ್ನು ಸೂಚಿಸುತ್ತದೆ. ಅದನ್ನು ಹೊರೆಯಾಗಿ ಬಾವಿಸದೆ ತುಸು ತಂಪಾದ ಪಾನಿಯದಂತೆ ಸೇವಿಸಿ, ಬದುಕಲಿ ಮುನ್ನಡೆಯಬೇಕು. ಬದುಕಲ್ಲಿ ಬಂದೊದುಗುವ ಸಂದರ್ಭವನ್ನು ನಿಬಾಯಿಸುವ ವಿವೇಚನಾ ಶಕ್ತಿ ನಮ್ಮ ತಲೆಯಲ್ಲಿ ಶೇಕಡ ನೂರರಷ್ಟಿರಬೇಕು. ಆಗ ಸರಾಗವಾಗಿ ಬಾಳ ಬಂಡಿ ಮುನ್ನಡೆಯುತ್ತದೆ. ಇನ್ನು, ಬೇರೆಯವರ ಮೇಲೆ ಅವಲಂಬಿತರಾಗದೆ ನಮ್ಮ ಜೀವನಕ್ಕೆ ಜವಾಬ್ದಾರರು ನಾವೇ, ಬದುಕಿಗೆ ಬರವಸೆ ಎಂಬ ಶಕ್ತಿಯೂ ನಾವೇ ಎಂಬುದನರಿತು ದಿನಕಳೆದರೆ, ಬದುಕು ಸಾರ್ಥಕವಾದೀತು. ಜೀವನ ಎಂಬ ಮೂರಕ್ಷರದ ಶಬ್ದವನ್ನಷ್ಟೇ ಅರಿಯದೆ ಅದರ ಹುರುಳನ್ನು ಅರ್ಥೈಸಿಕೊಂಡು ಬಾಳಬೇಕು. ನಮನವನ್ನು ಬದಿಗಿಟ್ಟು ಬೇತರೆಯವರನು ಬಣ್ಣಿಸುತ ದೂರ್ತನರಾಗದೆ ಸರ್ವಸಮ್ಮತದ ಮಾನವರಾಗಬೇಕಲ್ಲವೇ? ನಮ್ಮ ಜಬಾಬು ತಿಳಿಯದೆ ಕಾಲಹರಣದಿಂದ ಕಾಲ ಸವೆಯುತಿದೆ; ಇದಕ್ಕೆ ಉತ್ತರವಿಷ್ಟೆ, ಜೀವನದ ಸಂಪೂರ್ಣ ಜವಾಬ್ದಾರಿ ತೆಗೆದುಕೊಳ್ಳುವದು. ಅಂದರೆ ತನ್ನನ್ನು ತಾನು ಅರ್ಥೈಸಿಕೊಂಡು, ತಾನು ಮಾಡಬೇಕಿರುವ ಸಾಮಾಜಿಕ, ನೈತಿಕ ಅಥವಾ ಕಾನೂನುಬದ್ದ ಜವಾಬ್ದಾರಿಗಳ ಸಮ್ಮಿಶ್ರವನ್ನು ಪೋಣಿಸಿ ಸತ್ಕರ್ಮವೇ ಶ್ರೇಷ್ಟವೆಂದು, ಸಾಮರಸ್ಯದ ಬದುಕು ಸಾತ್ವಿಕತೆಯಿಂದ ಸಾನಂದವಾದಾಗ ಬದುಕು ಸಾಕಾರವಾಗುತ್ತದೆ. ಆಗ ಅದುವೇ ಸಗ್ಗ. ಅದುವೇ ಜಬಾಬುದಾರ ಸೂಕ್ತಿ.

**- ದುಂಡೇಶ್** ಕೆ.ಬಿ



## ಮುಪ್ಪು

ಬದುಕೊಂದು ರೋಚಕ ನಾಟಕ, ಮುಪ್ಪು ಅದರ ಕೊನೆಯ ಅಂಕ. ಬಾಲ್ಯ, ಯೌವನ, ಮುಪ್ಪು ಜೀವನದ ಮೂರು ಮುಖ್ಯ ಹಂತಗಳು. ಪ್ರತೀ ಹಂತಗಳೂ ಜೀವನವೆನ್ನುವ ನಾಟಕದ ಪುಟಗಳಲ್ಲಿ ನವರಸಗಳನ್ನು ತುಂಬುತ್ತವೆ. ಬಾಲ್ಯ ಹೆತ್ತವರಿಗೆ ಸೇರಿದ್ದು, ಯೌವನವೂ ನಮ್ಮ ಕೈಯಲ್ಲಿಲ್ಲ. ಅದು ಉದ್ಯೋಗಕ್ಕೆ, ಹೆಂಡತಿಗೆ, ಮಕ್ಕಳಿಗೆ ಸೇರಿದ್ದು, ಮುಪ್ಪು ಮಾತ್ರ ನಮಗೇ ಸೇರಿದ್ದು. ನಮ್ಮದೇ ಆಗುವ ಈ ಕೊನೆಯ ಅಧ್ಯಾಯವನ್ನು ಬರೆಯುವ ಅವಕಾಶ ಎಲ್ಲರಿಗೂ ಸಿಗುವುದಿಲ್ಲ. ಸಿಕ್ಕಿದವರು ಭಾಗ್ಯಶಾಲಿಗಳು.

ಮುಪ್ಪು ಜೀವನದ ಒಂದು ಮಹತ್ತರ ಘಟ್ಟ. ಒಂದು ಪ್ರಬುದ್ಧ ಹಂತವೂ ಹೌದು. ಈ ಹಂತದಲ್ಲಿ ನಮ್ಮನ್ನು ನಾವು ಕಂಡುಕೊಳ್ಳಲು ಬಹಳ ದೊಡ್ಡ ಅವಕಾಶವಿದೆ. ಜೀವನದುದ್ದಕ್ಕೂ ಎಷ್ಟೋ ಕೆಲಸಗಳನ್ನು ಮಾಡಬೇಕೆನ್ನುವ ತುಡಿತಗಳಿದ್ದರೂ ಸಂಸಾರ ಹಾಗೂ ವೃತ್ತಿಜೀವನದ ಒತ್ತಡಗಳು ಎಲ್ಲಾ ಸಮಯವನ್ನು ಕಿತ್ತುಕೊಳ್ಳುತ್ತಿರುವಾಗ ನಮಗೆ ಪ್ರಿಯವಾದ ಕೆಲಸಗಳು, ಹವ್ಯಾಸಗಳು ಪ್ರಾಮುಖ್ಯತೆ ಕಳಕೊಂಡು ಮನದಾಳಕ್ಕೆ ನೂಕಲ್ಪಟ್ಟು ಅವು ಅಲ್ಲಿ ಗೂಡುಕಟ್ಟುತ್ತವೆ. ಹಲವಾರು ಜವಾಬ್ದಾರಿಗಳ ನಿರ್ವಹಣೆಯಲ್ಲಿ ಸ್ವಂತಕ್ಕೆ ಸಮಯ ಸಿಗುವುದೇ ಕಡಿಮೆ. ಆದರೆ ನಿವೃತ್ತರಾಗಿ ಮನೆಯಲ್ಲಿ ಕುಳಿತಾಗ ಸಮಯವೆಲ್ಲ ನಮ್ಮದೇ. ಮಾಡಲಾಗದ ಕೆಲಸಗಳನ್ನು ಮಾಡಲು, ಮರೆತು ಹೋಗಿರುವ ಹವ್ಯಾಸಗಳನ್ನು ಬೆಳೆಸಿಕೊಳ್ಳಲು ಇದು ಸಮರ್ಪಕವಾದ ಸಮಯ. ಈ ಅವಕಾಶವನ್ನು ಉಪಯೋಗಿಸಿಕೊಂಡು ಬೇಕಾದುದನ್ನು ಮಾಡಿಕೊಂಡು ಮಕ್ಕಳು ದೂರದಲ್ಲಿರುವ ನೋವನ್ನು ಮರೆತು ಜೀವನದಲ್ಲಿ ಸ್ವಲ್ಪ ರಂಗು ತುಂಬಿಕೊಂಡು ಜೀವಿಸುವುದರಲ್ಲಿ ಇಡೀ ಜೀವನದ ಸಫಲತೆ ಇದೆ.

ಮನಸ್ಸಿಗೆ ಮುಪ್ಪು ತಾಗದಿದ್ದರೂ ದೇಹಕ್ಕೆ ಮುಪ್ಪು ಬಂದೇ ಬರುತ್ತದೆ. ಪ್ರಾಯಕ್ಕೆ ತಕ್ಕಂತೆ ಒಂದೊಂದೇ ಖಾಯಿಲೆಗಳು ಕಾಡಿಸಿ ಮುಪ್ಪನ್ನು ಸಾಬೀತು ಪಡಿಸುತ್ತಿರುವಾಗ ಮುಪ್ಪನ್ನು ಮರೆಯುವುದು ಸಾಧ್ಯವಿಲ್ಲ. ಮುಪ್ಪನ್ನು ಅದರ ಜೊತೆಯಲ್ಲಿ ಬರುವ ಖಾಯಿಲೆಗಳನ್ನು, ಅನಾನುಕೂಲತೆಗಳನ್ನು ಸ್ವಾಭಾವಿಕ ಎನ್ನುವ ಮನೋಭಾವದಿಂದ ಸ್ವೀಕರಿಸಿ ತೃಪ್ತರಾಗಿ ಜೀವಿಸಿದರೆ ಮುಪ್ಪು ಯಾವತ್ತೂ ಶಾಪವಾಗಲಾರದು. ಕಳೆದು ಹೋಗುತ್ತಿರುವ ದೈಹಿಕ ಶಕ್ತಿಗಾಗಿ ಮರುಗದೆ ಮನಸ್ಸಿನ ಹುಮ್ಮಸ್ಸನ್ನು ಕಾಪಾಡಿಕೊಂಡು ನಗುನಗುತ್ತಾ ಬಾಳುವುದನ್ನು ಸಾಧ್ಯ ಮಾಡಿಕೊಂಡರೆ ಮುಪ್ಪು ಕಷ್ಟವೆನಿಸುವುದಿಲ್ಲ. ಮುಪ್ಪಿನೊಡನೆ ನಗುನಗುತ್ತಾ ಜೀವಿಸಲು ಕಲಿಯುವುದರಲ್ಲಿ ಜೀವನದ ನೆಮ್ಮದಿ ಇದೆ.

ಮುಪ್ಪಿನ ಕಾಲದಲ್ಲಿ ಮುಖ್ಯವಾಗಿ ಬೇಕಾಗಿರುವುದು ಸಮಾಧಾನ ಹಾಗೂ ನೆಮ್ಮದಿ. ಚಿಗುರು, ಹೂ, ಕಾಯಿ, ಹಣ್ಣು, ನೆರಳು ಎಲ್ಲವನ್ನೂ ಸ್ವಲ್ಪವೂ ಬೇಸರಿಸದೆ ಕೊಟ್ಟು ಮುಪ್ಪಾದ ಮರ ಎಂದಾದರೂ ಧರೆಗುರುಳದಿದ್ದೀತೇ? ಅದು ಜೀವನದ ಸತ್ಯ.

ಜೀವನದಲ್ಲಿ ಎದುರಾಗುವ ಎಲ್ಲ ಸಿಹಿಕಹಿಗಳನ್ನು ಸಮಾನ ಮಾನಸಿಕ ನೆಲೆಯಿಂದ ಎದುರಿಸಿ ಎಲ್ಲಿಯೂ ನೆಮ್ಮದಿಗೆ ಧಕ್ಕೆ ಬಾರದಂತೆ ಸಮರ್ಪಕವಾಗಿ ಬಾಳುವುದು ಒಂದು ಕಲೆ ಹಾಗೂ ದೊಡ್ಡ ಸಾಧನೆ. ಇಪ್ಪತ್ತರಲ್ಲಿ ಐವತ್ತರ ಬುದ್ಧಿವಂತಿಕೆ, ಮೂವತ್ತರಲ್ಲಿ ಎಪ್ಪತ್ತರ, ವಿವೇಚನೆ, ಎಪ್ಪತ್ತರಲ್ಲಿ ಇಪ್ಪತ್ತರ ಹುಮ್ಮಸ್ಸು ಮೈಗೂಡಿಸಿಕೊಂಡಾಗ ಈ ಕಲೆಗಾರಿಕೆಯನ್ನು ಜೀವನದುದ್ದಕ್ಕೂ ತೋರಿಸಬಹುದು.



ಮುಪ್ಪಿನ ಜತೆಗೆ ಬದುಕಲು ಕಲಿತಾಗ ಜೀವನವೆನ್ನುವ ಸುಂದರ ನಾಟಕದ ಅಥವಾ ಸ್ವಾರಸ್ಯಕರ ಕಾದಂಬರಿಯ ಕೊನೆಯ ಸಾಲುಗಳನ್ನು ತುಂಬಾ ಮೌಲಿಕವಾಗಿ, ಇಡೀ ಕೃತಿಗೆ ಮೆರುಗು ಕೊಡುವ ಹಾಗೆ ಬರೆಯುವುದು ಸಾಧ್ಯವಾಗದೇ?

ಮುಪ್ಪಿನಲ್ಲಿ ಪರಿಪಕ್ವವಾಗಿ ಜೀವಿಸು ವುದು ಕೂಡಾ ಒಂದು ಸುಯೋಗ. ಒಂದು ಹಣ್ಣಿನ ಪರಿಪಕ್ವತೆಯ ಸಿಹಿ, ಒಳ್ಳೆಯ ಕಾವ್ಯದ ಸ್ವಾರಸ್ಯವಾದ ಕೊನೆಯ ಸಾಲುಗಳು, ದೀಪ ನಂದುವ ಮೊದಲಿನ ಪ್ರಖರ ಬೆಳಕು, ಸೂರ್ಯ ಮುಳುಗುವ ಮೊದಲಿನ ರಂಗು, ಪೂರ್ಣ ಚಂದಿರನ ತಂಪಾದ ಬೆಳಕು ಎಲ್ಲವೂ ಜೀವನದ ಕೊನೆಯ ಹಂತದಲ್ಲಿ ಇರುವಂತೆ ನೋಡಿಕೊಂಡರೆ ಮುಪ್ಪಿನ ತೊಡಕುಗಳು, ಸಾವಿನ ಹೆದರಿಕೆ ಯಾವುದೂ ಕಂಗೆಡಿಸಲಾರವು. ಯಾವುದನ್ನೂ ತಲೆಗೆ ಹಚ್ಚಿಕೊಳ್ಳದೆ ಸುತ್ತಲಿನ ಪ್ರಪಂಚವನ್ನು ಅದು ಇದ್ದ ಹಾಗೇ ಒಪ್ಪಿಕೊಂಡು ಯಾವ ಕಟ್ಟ ಭಾವನೆಗಳಿಗೂ ಎಡೆಕೊಡದೆ ಆತ್ಮವಿಶ್ವಾಸದಿಂದ ಜೀವನವನ್ನು ಹಾಗೂ ಸುತ್ತಲಿನವರನ್ನು ಪ್ರೀತಿಸುತ್ತ ಜೀವಿಸಲು ಕಲಿತರೆ ಮುಪ್ಪು ಯಾವತ್ತೂ ಒಂದು ಹೊರೆಯಾಗಿ ಕಾಡುವುದಿಲ್ಲ.


ಇಡೀ ಜೀವನದಲ್ಲಿ ಮುಪ್ಪು ಸಂತಸದಿಂದ ಅನುಭವಿಸಬೇಕಾದ ಹಂತ, ಅದನ್ನು ಮನಸಾರೆ ಅನುಭವಿಸುವುದೆಷ್ಟು ಚಂದ!

## ಹೆಜ್ಜೆ

ಅವರು ಮನೆಗೆ ಬರ್ತಾರೆ ಅಂದ್ರೆ, ಭಯ ಶುರುವಾಗ್ತಾ ಇತ್ತು, ಅವರದ್ದು ತಿಂಗಳಿಗೊಂದು ಸಲ ನನ್ನ ಮನೆಗೆ ಭೇಟಿಯು ಆಗ್ತಾ ಇತ್ತು. ಅವರು ನಮ್ಮ ಶಾಲೆಯ ವೇದವ್ಯಾಸ ಮೇಷ್ಟ್ರು. ಅವರಿಗೆ ನಾನಂದ್ರೆ, ಎಲ್ಲರಿಗಿಂತ ಸ್ವಲ್ಪ ಹೆಚ್ಚು ಪ್ರೀತಿ, ಮನೆಯಲ್ಲಿ ನನ್ನವರು ಅಂತ ಯಾರು ಇಲ್ಲದ ಕಾರಣ ನನ್ನನ್ನ ಸ್ವಲ್ಪ ಹೆಚ್ಚು ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದರು. ಆಗಾಗ ಬಂದು ಬದುಕಿನ ದಾರಿಯನ್ನ ಸರಿಯಾಗಿ ಮನ ಮುಟ್ಟುವ ಹಾಗೆ ಹೇಳಿ ಹೋಗ್ತಾ ಇದ್ರು. ಆದರೆ ಅವರ ಮಾತುಗಳನ್ನು ಕಿವಿಯಲ್ಲಿ ಕೇಳಿ ಕಾರ್ಯರೂಪಕ್ಕೆ ತರಲು ತುಂಬಾ ಸಮಯ ತೆಗೆದುಕೊಳ್ತಾಯಿದ್ದೆ. ಮೊನ್ನೆ ಬಂದಾಗ ಸ್ವಲ್ಪ ಜೋರು ಮಾತಿನಲ್ಲಿ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ರು. ನೋಡು ಮಗ ನಿನ್ನ ಸಮಸ್ಯೆ ಏನು ಗೊತ್ತಾ, ನೀನು ನಿನ್ನ ಮನೆಯ ಜಗಲಿಯಲ್ಲಿ ಕುಳಿತು ಮನೆಯ ಗೇಟಿನ ಹೊರಗಡೆ ದಾರಿ ಸರಿಯಾಗಿ ಕಾಣುತ್ತಿಲ್ಲ, ನನಗೆ ಇನ್ನು ತುಂಬಾ ದೂರ ಹೋಗುವುದಿದೆ ನಾನು ಹೇಗೆ ತಲುಪೋದು ಅಂತ ಕುಳಿತಲ್ಲೇ ಯೋಚಿಸಿದರೆ ಖಂಡಿತವಾಗಿಯೂ ಮುಂದೆ ಹೋಗುವುದಕ್ಕೆ ಸಾಧ್ಯವಾಗಲ್ಲ. ಎದ್ದು ಒಂದೆರಡು ಹೆಜ್ಜೆ ನಡೆಯುವುದಕ್ಕೆ ಪ್ರಾರಂಭ ಮಾಡು, ನಡಿತಾ ನಡಿತಾ ದಾರಿ ಸರಿಯಾಗಿ ಕಾಣುವುದಕ್ಕೆ ಪ್ರಾರಂಭವಾಗುತ್ತದೆ. ಆಗ ಎಷ್ಟು ದೂರ ತಲುಪಬೇಕು ಅನ್ನೋದು ಗೊತ್ತಾಗುತ್ತೆ. ಎಷ್ಟು ದೂರ ಬಂದಿದ್ದೇನೆ ಅನ್ನೋದು ಗೊತ್ತಾಗುತ್ತೆ. ಬಾಯಿ ಮಾತಿನಲ್ಲಿ ಜಗತ್ತನ್ನೇ ಗೆದ್ದಿದ್ದೇನೆ ಅಂತ ಸಂಭ್ರಮಿಸಬಹುದು ಆದರೆ ಕೆಲಸಕ್ಕಿಳಿದಾಗ ಗೊತ್ತಾಗೋದು ನೀನು ನಿನ್ನೂರನ್ನಾದರೂ ಗೆದ್ದಿದ್ದೀಯಾ? ಅಂತ.

ಅರ್ಥ ಮಾಡ್ಕೊ ಇನ್ನಾದರೂ ಕೆಲಸದ ಕಡೆಗೆ ಮನಸ್ಸು ಮಾಡು.ಮಾತಿಗಿಂತ ಕೆಲಸದ ಕಡೆಗೆ ಹೆಚ್ಚು ಗಮನ ನೀಡು. ಅಂತಂದವರು ಹೋಗೇ ಬಿಟ್ರು. ಆ ಮಾತು ತುಂಬಾ ಆಳವಾಗಿ ಮನಸ್ಸಿಗೆ ನಾಟಿತು. ಇನ್ನಾದರೂ ಬದಲಾಗಬೇಕಲ್ವಾ?

**- ಧೀರಜ್** ಬೆಳ್ಳಾರೆ



# ಧಾರ್ಮಿಕ ಆಚರಣೆಗಳಿಂದ ಮನಸ್ಸಿಗೆ ನೆಮ್ಮದಿ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ದೇವಾಲಯಗಳಯಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆಯುವುದರಿಂದ ಮತ್ತು ಅದರಲ್ಲಿ ಪಾಲ್ಗೊಳುವುದರಿಂದ ಜನರ ಮನಸ್ಸಿನಲ್ಲಿ ಸದ್ಗುಣಗಳು ರೂಪುಗೊಂಡು ನೆಮ್ಮದಿ ದೊರೆಯಲಿದೆ. ಈ ಮೂಲಕ ಗ್ರಾಮಗಳಲ್ಲಿ ಶಾಂತಿ ನೆಲೆಸಲಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ತಿಳಿಸಿದರು.



ತಾಲ್ಲೂಕಿನ ಬಾಗೂರು ಹೋಬಳಿ ವಳಗೇರಹಳ್ಳಿ ಗ್ರಾಮದ ಆಂಜನೇಯ ಸ್ವಾಮಿ ದೇವಾಲಯ ಜೀರ್ಣೋದ್ಧಾರಕ್ಕಾಗಿ ನಡೆದ ದೇವಾಲಯದ ಕಲಾಕರ್ಷಣೆ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ದೇವರ ಕಾರ್ಯಗಳು ಹಾಗೂ ಧಾರ್ಮಿಕ ಸಮಾರಂಭದಲ್ಲಿ ಗ್ರಾಮದಲ್ಲಿನ ಜನತೆ ಸಹೋದರತ್ವದಿಂದ ಒಟ್ಟಾಗಿ ಪಾಲ್ಗೊಳ್ಳುತ್ತಾರೆ. ಇದರಿಂದ ವೈಮನಸ್ಸು ದೂರವಾಗಿ ಸಹೋದರತ್ವದಿಂದ ಬದುಕು ಕಟ್ಟಿಕೊಳ್ಳಬಹುದಾಗಿದೆ ಎಂದರು.

ಗ್ರಾಮದಲ್ಲಿನ ಆಂಜನೇಯ ಸ್ವಾಮಿ ಇತಿಹಾಸ ಪ್ರಸಿದ್ದ ದೇವಾಲಯವಾಗಿದ್ದು, ಇದರ ಜೀರ್ಣೋದ್ಧಾರ ಕಾರ್ಯಕ್ಕೆ ಧಾರ್ಮಿಕ ದತ್ತಿ ಇಲಾಖೆಯಿಂದ ಅನುಮತಿ ಪಡೆದು ಗ್ರಾಮಸ್ಥರು ಮುಂದಾಗಿದ್ದಾರೆ. ಇಲಾಖೆಯ ಸಹಕಾರದ ಜೊತೆಯಲ್ಲಿ ಶಾಸಕರ ನಿಧಿಯಿಂದ 5 ಲಕ್ಷ ರೂ. ಅನುದಾನವನ್ನು ನೀಡಲಾಗುವುದು, ದೇವಾಲಯ ಪೂರ್ಣಗೊಳ್ಳುವ ಹೊತ್ತಿಗೆ ಎರಡನೇ ಕಂತಿನಲ್ಲಿಯೂ ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದರು.

ಗ್ರಾಮದಲ್ಲಿ ದೇಗುಲ ಹಾಗೂ ಶಾಲೆಯ ಗಂಟೆಯ ಶಬ್ದ ಮೊಳಗಿದಾಗ ಜನರು ಎಚ್ಚರಿಕೆಯಿಂದ ಇರುತ್ತಾರೆ, ಶಾಲೆಯ ಗಂಟೆ ನಿತ್ಯ ಸದ್ದು ಮಾಡಿದರೆ ಗ್ರಾಮದಲ್ಲಿನ ಮಕ್ಕಳಲ್ಲಿ ಜ್ಞಾನ ವೃದ್ದಿಯಾಗುತ್ತದೆ, ದೇವಾಲಯದ ಗಂಟೆ ಶಬ್ಧದಿಂದ ಗ್ರಾಮದಲ್ಲಿನ ಹಿರಿಯರು ಮತ್ತು ಯುವಕರು ಎಚ್ಚರಗೊಳ್ಳುತ್ತಾರೆ. ದೇವಾಲಯಕ್ಕೆ ಹೋಗುವುದನ್ನು ರೂಡಿಸಿಕೊಂಡು ಈ ಮಣ್ಣಿನ ಸಂಸ್ಕೃತಿಯನ್ನು ಉಳಿಸಲು ಮುಂದಾಗುತ್ತಾರೆ ಎಂದು ತಿಳಿಸಿದರು.

ಶಾಲೆಯಿಂದ ಜನರಲ್ಲಿ ಅಕ್ಷರ ಜ್ಞಾನ ಬೆಳೆಯುತ್ತದೆ. ಯಾವ ವ್ಯಕ್ತಿ ನಿತ್ಯವೂ ಶಾಲೆಗೆ ತೆರಳಿ ಶಿಕ್ಷಣ ಪಡೆಯುತ್ತಾನೆ, ಆತನ ಮುಂದಿನ ಬದುಕು ಹಸನಾಗಿರುತ್ತದೆ, ಜನರಲ್ಲಿ ಸಂಸ್ಕಾರ ಬೆಳೆಯಬೇಕಾದರೆ ಅದು ಧಾರ್ಮಿಕ ಕಾರ್ಯಕ್ರಮ ಹಾಗೂ ಸನಾತನ ಧರ್ಮ ಪಾಲನೆಯಿಂದ ಮಾತ್ರ ಸಾಧ್ಯ. ಸನಾತನ ಧರ್ಮದ ತಳಹದಿಯ ಮೇಲೆ ದೇಶದ ಅಸ್ತಿತ್ವ ನಿಂತಿದೆ. ಹಾಗಾಗಿ ಈ ಧರ್ಮದಲ್ಲಿ ಜನ್ಮ ಪಡೆದವರು ಪುಣ್ಯವಂತರು ಎಂದು ಹೇಳಿದರು.

ರಂಭಾಪುರಿ ಶಾಖಾ ಮಠದ ಪೀಠಾಧ್ಯಕ್ಷ ಡಾ.ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಗ್ರಾಮದಲ್ಲಿನ ಸಾಕಷ್ಟು ದೇವಾಲಯ ಅಭಿವೃದ್ದಿ ಮಾಡಿರುವ ಗ್ರಾಮಸ್ಥರು ಆಂಜನೇಯ ದೇವಾಲಯ ಅಭಿವೃದ್ದಿಗೆ ಮುಂದಾಗುವ ಮೂಲಕ ಎಲ್ಲಾ ದೇವಾಲಯಗಳಿಗೆ ಕಾಯಕಲ್ಪ ಮಾಡಲಿದ್ದಾರೆ, ದೇವಾಲಯಗಳ ನಿರ್ಮಾಣದಿಂದ ಗ್ರಾಮದಲ್ಲಿ ಶಾಂತಿ ನೆಲೆಸಲಿದೆ, ಗ್ರಾಮಸ್ಥರು ನಿತ್ಯವೂ ದೇವಾಲಯಕ್ಕೆ ತೆರಳುವುದುನ್ನು ರೂಡಿಸಿಕೊಳ್ಳಬೇಕು ಎಂದರು.

ಗ್ರಾಮಗಳಲ್ಲಿ ಎಲ್ಲರೂ ಸಹಬಾಳ್ವೆಯಿಂದ ದೇವಾಲಯ ಕಟ್ಟಲು ಮುಂದಾಗಬೇಕು, ಸಣ್ಣ ಪುಟ್ಟ ಲೋಪಗಳು ಬಂದಾಗ ವೈಯಕ್ತಿವಾಗಿ ತೆಗೆದುಕೊಳ್ಳದೆ ಹೊಂದಾಣಿಕೆ ಮಾಡಿಕೊಳ್ಳಬೇಕು. ಗ್ರಾಮದ ಮುಖಂಡರು ಪ್ರತಿ ಮನೆಯನ್ನು ಸಂಪರ್ಕಿಸಿ ದೇಣಿಗೆ ಪಡೆಯಬೇಕು, ದೇವಾಯ ನಿರ್ಮಾಣ ಮಾಡುವಾಗ ಎಲ್ಲಾ ಭಕ್ತರು ತೊಡಗಿಕೊಳ್ಳುವುದು ಮುಖ್ಯವಾಗಿರುತ್ತದೆ, ದೇವಾಲಯ ನಿರ್ಮಾಣ ಮಾಡಿದರೆ ಸಾಲದು ಪ್ರತಿ ಮನೆಯವರು ನಿತ್ಯವೂ ಪೂಜೆ ಇಟ್ಟುಕೊಂಡು ಗ್ರಾಮದಲ್ಲಿ ನೆಮ್ಮದಿ ನೆಲೆಸುವಂತೆ ಮಾಡಬೇಕು ಎಂದರು.

ಗ್ರಾಮ ದೇವತೆಗಳಾದ ಮಾರುತಿ, ಬೀರಲಿಂಗೇಶ್ವರ, ಕಾಲಭೈರವೇಶ್ವರ, ಲಕ್ಷ್ಮೀದೇವಿ, ವೈದ್ಯನಾಥೇಶ್ವರ, ಬೀಚಗೊಂಡನಹಳ್ಳಿ ಆಂಜನೇಯ ದೇವರ ಉತ್ಸವ ಗ್ರಾಮ ಪ್ರಮುಖ ಬೀದಿಯಲ್ಲಿ ನೆರವೇರಿತು, ವಗ್ಗರಹಳ್ಳಿ ಬಾಲರಾಜ್ ಹಾಗೂ ಶ್ರೀನಿಧಿ ತಂಡದವರು ಧಾರ್ಮಿಕ ಕಾರ್ಯಕ್ರಮ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಭಕ್ತರಿಗೆ ತೀರ್ಥ, ಪ್ರಸಾದ ವಿತರಣೆ ಮಾಡಿದ್ದಲ್ಲದೆ ಅನ್ನದಾನ ಏರ್ಪಡಿಸಲಾಗಿತ್ತು.

ತಹಶೀಲ್ದಾರ್ ಶಂಕರಪ್ಪ, ಧಾರ್ಮಿಕ ದತ್ತಿ ಇಲಾಖೆ ತಹಶೀಲ್ದಾರ್ ಲತಾ ಮಣಿ, ತಾಲ್ಲೂಕು ಅರ್ಚಕರ ಸಂಘದ ಅಧ್ಯಕ್ಷ ವಿ.ಎನ್.ಶ್ರೀಧರಮೂರ್ತಿ, ವಳಗೇರಹಳ್ಳಿ ಆಂಜನೇಯ ಸ್ವಾಮಿ ದೇವಾಲಯ ಅಭಿವೃದ್ದಿ ಸಮಿತಿ ಅಧ್ಯಕ್ಷ ವಿ.ಎನ್.ಶೇಷಮೂರ್ತಿ, ಉಪಾಧ್ಯಕ್ಷ ಗಿರೀಶ್, ಕಾರ್ಯದರ್ಶಿ ವಿ.ಎಸ್.ಮಂಜುನಾಥ್, ಖಜಾಂಚಿ ಶಂಭಲಿಂಗೇಗೌಡ, ನಿರ್ದೇಶಕರಾದ ವಿ.ಎಸ್.ರಮೇಶ್, ಸುಜಾತ ಪ್ರಕಾಶ್, ಚಿಕ್ಕೇಗೌಡ, ಬೋರೇಗೌಡ, ಕೃಷ್ಣಯ್ಯ, ಗ್ರಾಮ ಪಂಚಾಯಿತಿ ಸದಸ್ಯರಾದ ರಮೇಶ್, ಜಯರಾಂ, ಸುಜಾತ, ನಾಗೇಶ್, ಮಾಜಿ ಅಧ್ಯಕ್ಷ ಧರ್ಮೇಗೌಡ, ಮುಖಂಡರಾದ ರಾಮಚಂದ್ರ, ಮಂಜುನಾಥ್, ಶಂಕರಲಿಂಗೇಗೌಡ, ಶಿವಸ್ವಾಮಿ, ಚಂದ್ರೇಗೌಡ, ಎ.ಸಿ. ಆನಂದ್‌ಕುಮಾರ್, ಯೋಗೇಶ್, ಶಶಾಂಕ್ ಗೋಪಾಲಸ್ವಾಮಿ, ಬೀಚಗೊಂಡನಹಳ್ಳಿ, ಕೋಡಿಹಳ್ಳಿ, ಅಣತಿ ಗ್ರಾಮಸ್ಥರು ಪಾಲ್ಗೊಂಡಿದ್ದರು.

## ವಸತಿ ಯೋಜನೆಯಡಿ ಗೋಲ್ಮಾಲ್: 2 ಕೋಟಿ ವಂಚನೆ

» ಮೊದಲನೇ ಪುಟದಿಂದ

ನಂತರ ಜಿಲ್ಲಾ ಪಂಚಾಯಿತಿ ಲಾಗಿನ್‌ಗೆ ಕಳುಹಿಸಬೇಕು. ಅದೇ ರೀತಿ ತಾಲ್ಲೂಕು ಪಂಚಾಯಿತಿ ಲಾಗಿನ್ ನಿರ್ವಹಣೆಯನ್ನು ಲಿಖಿತವಾಗಿ ತರುವುದು ಮತ್ತು ನಿರ್ವಹಣೆ ಮಾಡುವುದು ವಸತಿ ನೋಡಲ್ ಅಧಿಕಾರಿಯ ಪ್ರಮುಖ ಕರ್ತವ್ಯ ವಾಗಿದೆ. ಆದರೆ, ಈ ಯಾವುದನ್ನು ಮೇಲಾಧಿ ಕಾರಿಗಳ ಗಮನಕ್ಕೆ ತರದೆ ದುರುದ್ದೇಶ ಪೂರ್ವಕವಾಗಿ ಎರಡೂ ಲಾಗಿನ್‌ಗಳನ್ನು ದುರ್ಬಳಕೆ ಮಾಡಿಕೊಂಡು ಸರ್ಕಾರದ ಹಣ ದುರು ಪಯೋಗ ಪಡಿಸಿಕೊಂಡಿದ್ದಾರೆಂಬ ಆರೋಪ ಕೇಳಿಬಂದಿದೆ.

**ಇತರರಿಗೆ ತರಬೇತಿ ನೀಡದೇ ಕೃತ್ಯ**

ಫೆಬ್ರವರಿ ತಿಂಗಳಲ್ಲಿ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಹೊಸದಾಗಿ ಲಾಗಿನ್ ಸೃಜನೆ ಮಾಡಲು ಸರ್ಕಾರ ಆದೇಶಿಸಿದ್ದು, ಅದರ ನಿರ್ವಹಣೆಗೆ ಸಂಬಂಧಿಸಿದಂತೆ ಜಿಲ್ಲಾ ನೋಡಲ್ ಅಧಿಕಾರಿಯಾಗಿ ಮಾಸ್ಟರ್ ಟ್ರೈನರ್ ಆಗಿ ತರಬೇತಿ ನೀಡಲಾಗಿರುತ್ತದೆ. ತದನಂತರ ಜಿಲ್ಲಾ ಮಟ್ಟದಲ್ಲಿ ಎಲ್ಲಾ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗು ಎಲ್ಲಾ ತಾಲ್ಲೂಕುಗಳ ವಸತಿ ನೋಡಲ್ ಅಧಿಕಾರಿಗಳಿಗೆ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತರಬೇತಿ ನೀಡಿ ಲಾಗಿನ್ ಉಪಯೋಗಿಸುವ ಬಗ್ಗೆ ತಿಳುವಳಿಕೆ ನೀಡಲಾಗಿತ್ತು.

ಕೆ.ಎಂ.ರಾಜೇಶ್, ದುರುದ್ದೇಶ ಪೂರ್ವವಾಗಿ ಯಾರಿಗೂ ತರಬೇತಿ ನೀಡಿಲ್ಲ. ಲಾಗಿನ್ ನಿರ್ವಹಣೆ ಬಗ್ಗೆ ನೀಡಿದ ನಿರ್ದೇಶನವನ್ನು ಪಾಲಿಸದೇ ಉದ್ದೇಶ ಪೂರ್ವಕವಾಗಿ ಲಾಗಿನ್‌ನಲ್ಲಿ ಇರಬೇಕಾದ ಅಧಿಕಾರಿಗಳ ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ಬದಲಾಗಿ ತನ್ನ ಸ್ವಂತ ವೈಯಕ್ತಿಕ ಮೊಬೈಲ್ ಸಂಖ್ಯೆ ನಮೂದಿಸಿ ಕೊಂಡಿದ್ದಾರೆ. ಈ ಕಾರಣದಿಂದ ಯಾವುದೇ ಮಾಹಿತಿ ಗಳು ಮೇಲಾಧಿಕಾರಿಗಳಗೆ ಲಭ್ಯವಾಗದ ಕಾರಣ ಲಾಗಿನ್‌ಗಳಲ್ಲಿ ನಡೆಯುತ್ತಿರುವ ಬದಲಾವಣೆಗಳು ಯಾರ ಗಮನಕ್ಕೆ ಬಂದಿಲ್ಲ.

## 1 ಕೋ.ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ

» ಮೊದಲನೇ ಪುಟದಿಂದ

ದಿನಗಳಲ್ಲಿ ರಸ್ತೆ ಕಾಮಗಾರಿ ಮುಗಿಸಿದ್ದೇವೆ ಎಂದು ಹೇಳಿದರು.

ಜನಸೇವೆ ಮಾಡುವ ಸೌಭಾಗ್ಯ ಎಲ್ಲರಿಗೂ ಸಿಗುವುದಿಲ್ಲ, ಅದರಂತೆ ನಾನು ಕೂಡ ಶಾಸಕನಾಗಿ ಕಷ್ಟ ಎಂದು ಬಂದ ಎಲ್ಲಾ ವರ್ಗದ ಜನರು, ರೈತರು, ವಿದ್ಯಾರ್ಥಿಗಳು ಎಲ್ಲರಿಗೂ ಕೈಲಾದಷ್ಟು ಸಹಾಯ ಮಾಡಿದ್ದೇನೆ ಎಂದರು.

ಗ್ರಾಮದ ಮುಖಂಡರಾದ ಮಂಜಣ್ಣ ಅವರು ಮಾತನಾಡಿ, ಕಳೆದ 25 ವರ್ಷಗಳಿಂದಲೂ ನಮ್ಮ ಬೇಡಿಕೆಗೆ ಯಾರೂ ಸ್ಪಂದಿಸಿರಲಿಲ್ಲ. ಮೊದಲ ಬಾರಿಗೆ ಶಾಸಕರಾದ ಸ್ವರೂಪ್ ಅವರು ರಸ್ತೆ ಮಾಡಿ ಕೊಟ್ಟಿದ್ದು ಸಂತಸ ತಂದಿದೆ. ಮೂಲ ಭೂತ ಸೌಕರ್ಯ ಹಾಗೂ ಧಾರ್ಮಿಕ ಕೇಂದ್ರಗಳ ಅಭಿವೃದ್ಧಿ ಬಗ್ಗೆ ಸ್ವರೂಪ ಅವರಿಗೆ ಇರುವ ಅಪಾರ ಕಾಳಜಿಗೆ ತಾವು ಅಭಿನಂದನೆ ಸಲ್ಲಿಸುತ್ತೇವೆ. ಇಲ್ಲಿನ ಉತ್ಸವ ಹೊರ ಜಿಲ್ಲೆ, ಹೊರ ರಾಜ್ಯಕ್ಕೂ ಪ್ರಸಿದ್ಧಿ ಪಡೆದಿದೆ, ಆದರೆ ಪ್ರಮುಖವಾಗಿ ಇಲ್ಲಿಗೆ ರಸ್ತೆ ಸಮಸ್ಯೆ ಎದ್ದು ಕಾಣುತ್ತಿತ್ತು, ಇದೀಗ ಶಾಸಕರು ರಸ್ತೆ ನಿರ್ಮಿಸಿ ಕೊಟ್ಟಿರುವುದರಿಂದ ಭಕ್ತರಿಗೆ ಸಾಕಷ್ಟು ಅನುಕೂಲವಾಗಿದೆ ಎಂದರು.

ಜೆಡಿಎಸ್ ಮುಖಂಡ ಕಣದಹಳ್ಳಿ ಮಂಜೇಗೌಡ ಅವರು ಮಾತನಾಡಿ, ಶಾಸಕ ಹೆಚ್.ಪಿ. ಸ್ವರೂಪ್ ಅವರ ಕಾಳಜಿಯಿಂದ ಆಗಿರುವ ಅಭಿವೃದ್ಧಿ ಕೆಲಸಗಳನ್ನು ಸದ್ಬಳಕೆ ಮಾಡಿಕೊಳ್ಳಿ ಎಂದು ಕೋರಿದರು.

ನಂಜೇದೇವರ ಕಾವಲ್, ಸೋಂಪುರ, ಕಿಂಡೀಪುರ, ಮುಗಳ ಕೊಪ್ಪಲು ಹಾಗು ಸುತ್ತಮುತ್ತಲ ಗ್ರಾಮಸ್ಥರು, ಜೆಡಿಎಸ್ ಮುಖಂಡರು ಮತ್ತು ದೇವಾಲಯದ ಭಕ್ತರು ಇದ್ದರು.



ಆಲೂರು: ಶಾಸಕ ಸಿಮೆಂಟ್ ಮಂಜು ದಂಪತಿಗಳು ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ, ಹರಿಹಳ್ಳಿ ಕೆಂಚಾಂಬಿಕೆ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಮಹಿಳೆಯರಿಗೆ ಬಾಗಿನ ಅರ್ಪಿಸಿದರು. ಉಪ ವಿಭಾಗಾಧಿಕಾರಿ ಶ್ರುತಿ ತಹಸೀಲ್ದಾರ್ ಮಲ್ಲಿಕಾರ್ಜುನ, ದೇವಸ್ಥಾನ ಅಭಿವೃದ್ಧಿ ಸಮಿತಿ ಅಧ್ಯಕ್ಷ ರಘೂ ಹರಿಹಳ್ಳಿ ಉಪಸ್ಥಿತರಿದ್ದರು.




ಹಾಸನ: ನಟ ಡಾ.ವಿಷ್ಣುವರ್ಧನ್ ಅವರ ಸಮಾಧಿ ತೆರವು ಖಂಡಿಸಿ ನಗರದಲ್ಲಿ ಶನಿವಾರ ಜಿಲ್ಲಾ ವಿಷ್ಣು ಸೇನಾ ಸಮಿತಿ ವತಿಯಿಂದ ಹೇಮಾವತಿ ಪ್ರತಿಮೆ ಎದುರು ಪ್ರತಿಭಟನೆ ನಡೆಸಲಾಯಿತು. ಕೂಡಲೇ ಸರ್ಕಾರ ಎಚ್ಚೆತ್ತುಕೊಂಡು ಸ್ಮಾರಕವನ್ನು ಅದೇ ಸ್ಥಳದಲ್ಲಿ ಪುನರ್ ಸ್ಥಾಪಿಸಬೇಕು ಎಂದು ಒತ್ತಾಯಿಸಿದರು. ಸಮಿತಿ ಜಿಲ್ಲಾಧ್ಯಕ್ಷ ಮಹಾಂತೇಶ್, ಉಪಾಧ್ಯಕ್ಷ ರಘುನಂದನ್, ವಿಜಯಕುಮಾರ್, ದೇವರಾಜು, ಚಂದ್ರು ನೀಡಿಗೆರೆ, ತಮ್ಲಾಪುರ ಗಣೇಶ್, ಬಿ.ಕೆ.ಪ್ರಕಾಶ, ಸುರೇಶ್, ರಾಜು ಮತ್ತಿತರರಿದ್ದರು.

## ಪಿವಿ-ಪ್ರ್ರಾಮ್ ಸಮಸ್ಯೆಗೆ ವಿಶ್ವಮಟ್ಟದ ಆವಿಷ್ಕಾರ

### ಸಂತಸ ಫರ್ಟಿಲಿಟಿ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕಿ ಡಾ.ಹೆಚ್.ಆರ್.ಸೌಮ್ಯ ದಿನೇಶ್

• ಪ್ರಜೋದಯ ವರದಿ

**ಹಾಸನ:** ವೈದ್ಯಕೀಯ ಕ್ಷೇತ್ರದ ಮಹತ್ವದ ಆವಿಷ್ಕಾರವಾಗಿ ಪಿವಿ-ಪ್ರಾಮ್ ಸಮಸ್ಯೆಗೆ ಮೊದಲ ಬಾರಿಗೆ ಪುನರ್ಜೀವನಾತ್ಮಕ ಚಿಕಿತ್ಸೆಯನ್ನು ಕಂಡು ಹಿಡಿಯಲಾಗಿದೆ ಎಂದು ನಗರದ ಸಂತಸ ಫರ್ಟಿಲಿಟಿ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕಿ ಡಾ.ಹೆಚ್.ಆರ್.ಸೌಮ್ಯ ದಿನೇಶ್ ಅವರು ಹೇಳಿದರು.



ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಿವಿ-ಪ್ರಾಮ್ ( pt p – rsp snrsp m – pl ) ಸಮಸ್ಯೆಗೆ ವಿಶ್ವಮಟ್ಟದಲ್ಲೇ ಮೊದಲ ಬಾರಿಗೆ ಪುನರ್ಜೀವನಾತ್ಮಕ ಚಿಕಿತ್ಸೆ ನೀಡುವುದನ್ನು ನಮ್ಮ ಆಸ್ಪತ್ರೆ ವೈದ್ಯರಿಂದ ಕಂಡುಹಿಡಿಯಲಾಗಿದೆ ಎಂದು ತಿಳಿಸಿದರು.

ಪ್ರತಿ ವರ್ಷ ಪ್ರಪಂಚದಲ್ಲಿ ಸುಮಾರು 7 ಲಕ್ಷ ಮಹಿಳೆಯರಲ್ಲಿ ಪಿವಿ-ಪ್ರಾಮ್ ಕಾಯಿಲೆ ಕಾಣಿಸಿಕೊಳ್ಳುತ್ತಿದ್ದು, ಈ ಸಮಸ್ಯೆ ಕಂಡು ಬರುವ ಗರ್ಭಿಣಿಯರಲ್ಲಿ ಸಾಮಾನ್ಯವಾಗಿ ಗರ್ಭಪಾತ ಆಗುತ್ತಿತ್ತು. ಅದಕ್ಕೆ ಪ್ರಪಂಚದಲ್ಲೇ ಇದುವರೆಗೂ ನಿಖರವಾದ ಚಿಕಿತ್ಸೆ ಇರಲಿಲ್ಲ, ಇದೀಗ ಸಂತಸ ಫರ್ಟಿಲಿಟಿ ವತಿಯಿಂದ ಚಿಕಿತ್ಸೆ ಕಂಡು ಹಿಡಿಯಲಾಗಿದೆ. ಶೇ.70 ರಷ್ಟು ಯಶಸ್ವಿಯಾಗಿದೆ ಎಂದು ಹೇಳಿದರು.

14ನೇ ವಾರದಲ್ಲಿ ಗರ್ಭಜಲ ಸೋರಿಕೆಯಿಂದ ಬಳಲುತ್ತಿದ್ದ ತಾಯಿಗೆ, ಅವಳದೇ ರಕ್ತದಿಂದ ತಯಾರಿಸಲಾದ ಪ್ಲೇಟ್ಲೆಟ್ ರಿಚ್ ಫೈಬ್ರಿನ್ (ಪಿಆರ್‌ಪಿ) ಮತ್ತು ಪ್ಲೇಟ್ಲೆಟ್ ರಿಚ್ ಪ್ಲಾಸ್ಮಾ (ಪಿಆರ್‌ಪಿ)ದ ಮಿಶ್ರಣವನ್ನು ಗರ್ಭಜಲಕೋಶದಲ್ಲಿ ನೇರವಾಗಿ ಚುಚ್ಚಿ ಸೇರಿಸಿದ ಈ ನವೀನ ವಿಧಾನದಿಂದ, ಸೋರಿಕೆ ನಿಂತಿತು ಮತ್ತು ಆ ತಾಯಿ ಆರೋಗ್ಯವಂತ 3.4 ಕೆಜಿ ತೂಕದ ಮಗುವಿಗೆ ಜನ್ಮ ನೀಡಿದಳು-ಇದು ಜಾಗತಿಕ ಮಟ್ಟದಲ್ಲಿ ಮೊಟ್ಟ ಮೊದಲ ಸಾಧನೆ ಎಂದು ಅವರು ತಿಳಿಸಿದರು.

ಈ ಚಿಕಿತ್ಸೆಯು ರೆಪ್ರೊಡ್ಯೂಕ್ಟಿವ್, ಫೀಮೇಲ್ ಚೈಲ್ಡ್ ಅಂತರರಾಷ್ಟ್ರೀಯ ಜರ್ನಲ್‌ನ ಜು. 2024 ಸಂಚಿಕೆಯಲ್ಲಿ ಪ್ರಕಟಗೊಂಡಿದ್ದು, ನಂತರ 14 ಅತೀವ ಅಪಾಯದ ಗರ್ಭಧಾರಣೆಗಳ ಮಲ್ಟಿಸೆಂಟ್ರಿಕ್ ಅಧ್ಯಯನ ರೂಪ ಪಡೆದಿದೆ. ಅದರಲ್ಲಿ 10 ಸೋರಿಕೆಗಳು ಯಶಸ್ವಿಯಾಗಿ ನಿಂತಿದ್ದು, 12 ಆರೋಗ್ಯವಂತ ಮಕ್ಕಳ ಜನನ (3 ಜೋಡಿ ಜವಳಿಗಳೂ ಸೇರಿ)ವಾಗಿದೆ ಹಾಗು ತಾಯಿ ಅಥವಾ ಮಗುವಿಗೆ ಯಾವುದೇ ತೊಂದರೆಗಳಾಗಿಲ್ಲ. ಈ ಸಾಧನೆಗಾಗಿ ಇಂಟರ್ ನ್ಯಾಷನಲ್ ಅಸೋಸಿಯೇಷನ್ ಸ್ಟೆಮ್ ಸೆಲ್ ಆ್ಯಂಡ್ ರೆಜೆನೆರೇಟಿವ್ ಮೆಡಿಸಿನ್ (ಐಎಎಸ್‌ಆರ್‌ಎಂ) ವತಿಯಿಂದ ನನಗೆ 2024 ಹಾಗು 2025ರಲ್ಲಿ ಎಕ್ಸಲೆನ್ಸ್ ಇನ್ ಇನೋವೇಶನ್ ಪ್ರಶಸ್ತಿಗಳು ಲಭಿಸಿವೆ. ಈ ಚಿಕಿತ್ಸೆಯನ್ನು ಎಲ್ಲರಿಗೂ ಮಾಡುವಂತಿಲ್ಲ, ಅದಕ್ಕಾಗಿ ಮಾನದಂಡ ಇದೆ. ವಿಶ್ವದಲ್ಲೇ ಇಂಥಹದ್ದೊಂದು ದೊಡ್ಡ ಅಧ್ಯಯನ ಮಾಡಿದ್ದು ಖುಷಿ ನೀಡಿದೆ ಎಂದರು.

ನಮ್ಮ ಸಂಶೋಧನಾ ತಂಡದಲ್ಲಿ ಡಾ॥ಯೋಗಿತಾ ರಾವ್, ಡಾ॥ಪ್ರಭು ಮಿಶ್ರಾ, ಡಾ॥ ಸೀಮಾ, ಡಾ॥ ಮಂಜುಳಾ ಅನಗನಿ, ಡಾ॥ಲಾವಣ್ಯ ಕಿರಣ್, ಡಾ॥ಲಕ್ಷ್ಮಿಪಾವನ, ಡಾ॥ ಶ್ರೀವಿದ್ಯಾ ಎನ್.ಬಿ ಮತ್ತು ಡಾ॥ ಪ್ರವೀಣ್ ಇದ್ದಾರೆ ಎಂದು ತಿಳಿಸಿದರು.

ಸಂತಸ ನಿರ್ದೇಶಕರಾದ ಡಾ॥ ಶ್ರೀವಿದ್ಯಾ, ಡಾ॥ರಮೇಶ್ ಬಾಬು, ಡಾ॥ಶಿಬಿರಾ ಹೆಗ್ಡೆ, ಡಾ॥ಆದರ್ಶ, ಎಸ್‌ಎಸ್‌ಎಂ ಆಸ್ಪತ್ರೆಯ ಸಿಇಒ ದಿಲೀಪ್ ಇದ್ದರು.

## ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ

» ಮೊದಲನೇ ಪುಟದಿಂದ


ಉಮ್ರಾನ್ ವಿಡಿಯೋ ಡಿಲೀಟ್ ಮಾಡಿದ್ದಾನೆ. ನಂತರ ಅಬ್ದುಲ್ ಅಫ್ತಾಬ್, ರಾಜಿಕ್ ಪಾಷಾ, ಉಮ್ರಾನ್ ಮೇಲೆ ಪೆನ್‌ಷನ್‌ಮೊಹಲ್ಲಾ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ನಗರದಲ್ಲಿ ಗಾಂಜಾ ಮಾರಾಟ ಹೆಚ್ಚಾಗಿದ್ದು 80 ಅಡಿ ರಸ್ತೆ, ಇಲಾಹಿನಗರ, ಚಿಕ್ಕನಾಳು, ಪೆನ್‌ಷನ್‌ಮೊಹಲ್ಲಾ ಭಾಗದಲ್ಲಿ ಗಾಂಜಾ ಮಾರಾಟ ವ್ಯಾಪಕವಾಗಿ ನಡೆಯುತ್ತಿದ್ದು ಅದರಿಂದಲೇ ಸಾಮೂಹಿಕ ಅತ್ಯಾಚಾರ ನಡೆದಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಪೈಶಾಚಿಕ ಕೃತ್ಯದಿಂದ ಇಡೀ ಜಿಲ್ಲೆಯ ಜನರು ಬೆಚ್ಚಿಬಿದ್ದಿದ್ದು, ಇಂತಹ ಘಟನೆಗಳು ಮರುಕಳುಹಿಸದಂತೆ ಆರೋಪಿಗಳಿಗೆ ಕಠಿಣ ಶಿಕ್ಷೆಯಾಗಬೇಕು ಹಾಗು ಗಾಂಜಾ ಮಾರಾಟ ಜಾಲವನ್ನು ಕಂಡುಹಿಡಿದು ಗಾಂಜಾ ಮಾರಾಟಕ್ಕೆ ಪೊಲೀಸರು ಕಡಿವಾಣ ಹಾಕಬೇಕೆಂದು ನಾಗರಿಕರು ಒತ್ತಾಯಿಸಿದ್ದಾರೆ.

## ಮೊದಲ ಬಾರಿಗೆ ಎದೆಗೂಡಿನ ಶಸ್ತ್ರಚಿಕಿತ್ಸೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಮೊದಲ ಬಾರಿಗೆ ರೋಗಿಯೊಬ್ಬರಿಗೆ ಯಶಸ್ವಿಯಾಗಿ ಎದೆಗೂಡಿನ ಶಸ್ತ್ರಚಿಕಿತ್ಸೆ ಮಾಡಲಾಗಿದೆ ಎಂದು ನಗರದ ಹಾಸನಾಂಬ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಜಿ.ಎನ್. ಬಸವರಾಜು ಅವರು ತಿಳಿಸಿದರು.



ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅರಕಲಗೂಡು ತಾಲ್ಲೂಕು ದೊಡ್ಡ ಮಗ್ಗೆಯ ಶಿವರುದ್ರಪ್ಪ (50) ಎಂಬುವವರು ಜು.21 ರಂದು ನಮ್ಮ ಆಸ್ಪತ್ರೆಗೆ ಬಂದು ಒಂದೂವರೆ ವರ್ಷದಿಂದ ಬಲಭಾಗದ ಎದೆ ಭಾಗದಲ್ಲಿ ನೋವಿದೆ, ಅನೇಕ ಕಡೆ ತೋರಿಸಿದರೂ ವಾಸಿಯಾಗಿಲ್ಲ, 2 ತಿಂಗಳಿಂದ ನೋವು ತೀವ್ರವಾಗಿದೆ ಎಂದರು.

ಸಿ.ಟಿ.ಸ್ಕ್ಯಾನ್ ಮಾಡಿಸಿದಾಗ ಬಲಭಾಗದ ಶ್ವಾಸಕೋಶದಲ್ಲಿ 1 ಅತೀ ದೊಡ್ಡ 16X8 ಸಿಎಂ ಗಾತ್ರದ ಗೆಡ್ಡೆ ಇರುವುದು ಗೊತ್ತಾಯಿತು. ಆ ಗಂಟು ಶ್ವಾಸಕೋಶಕ್ಕೆ ಅಂಟಿಕೊಂಡಿತ್ತು. ಅದನ್ನು ಶ್ವಾಸಕೋಶದಿಂದ ಬೇರ್ಪಡಿಸಬೇಕಾದರೆ ಎದೆಗೂಡಿನ ಶಸ್ತ್ರಚಿಕಿತ್ಸೆ ಮಾಡಬೇಕೆಂದು ಅವರ ಕುಟುಂಬ ಸದಸ್ಯರಿಗೆ ತಿಳಿಸಲಾಯಿತು. ರೋಗಿ ಜೀವಕ್ಕೆ ಅಪಾಯ ಇದೆ ಎಂದೂ ಮನವರಿಕೆ ಮಾಡಲಾಯಿತು. ನಂತರ ಶಸ್ತ್ರಚಿಕಿತ್ಸೆಗೆ ಸಮ್ಮತಿಸಿದ ನಂತರ ಜು.23 ರಂದು ಸುಮಾರು 3 ಗಂಟೆ ಶಸ್ತ್ರ ಚಿಕಿತ್ಸೆ ನಡೆಸಿದಾಗ ಬಲಭಾಗದ ಶ್ವಾಸಕೋಶದಲ್ಲಿ ಒಂದಲ್ಲ ಎರಡು ಗೆಡ್ಡೆ ಇದ್ದವು. ಅವುಗಳನ್ನು ಶ್ವಾಸಕೋಶದಿಂದ ಬೇರ್ಪಡಿಸಿ ಮತ್ತು ಶ್ವಾಸಕೋಶದ ಸ್ವಲ್ಪ ಭಾಗವನ್ನು ಕೂಡ ಯಶಸ್ವಿಯಾಗಿ ತೆಗೆಯಲಾಗಿದೆ ಎಂದು ವಿವರಿಸಿದರು.

ಈ ರೀತಿಯ ಚಿಕಿತ್ಸೆ ವೇಳೆ ಉಸಿರಾಟದ ಸಮಸ್ಯೆ ಸೇರಿ ಹಲವು ರೀತಿಯ ಅಪಾಯ ಸಾಧ್ಯತೆ ಹೆಚ್ಚಿತ್ತು. ಆದರೆ ಶ್ವಾಸಕೋಶಕ್ಕಾಗಲಿ, ಹೃದಯ ಹಾಗು ಇತರೆ ಅಂಗಗಳಿಗಾಗಲಿ ಯಾವುದೇ ಹಾನಿಯಾಗದಂತೆ ಕೇವಲ 1.20 ಲಕ್ಷ ರೂ. ವೆಚ್ಚದಲ್ಲಿ ಯಶಸ್ವಿ ಆಪರೇಷನ್ ಮಾಡಲಾಗಿದೆ. ಈ ಅಪರೂಪದ ಶಸ್ತ್ರಚಿಕಿತ್ಸೆಯನ್ನು ಅರಿವಳಿಕೆ ತಜ್ಞರಾದ ಡಾ.ಶಿವಕುಮಾರ್ ಅವರ ನೇತೃತ್ವ ಹಾಗು ಸಿಬ್ಬಂದಿ ಸಹಕಾರದಿಂದ ಯಶಸ್ವಿಯಾಗಿದೆ. ನಂತರ ತೀವ್ರ ನಿಗಾ ಘಟಕದಲ್ಲಿ ನುರಿತ ತಜ್ಞರಾದ ಡಾ.ಪ್ರೇಮಾ ಗುರುನಾಥ್ ಬ್ಯಾಹಟ್ಟಿ ಅವರ ಆರೈಕೆಯಲ್ಲಿ ಚಿಕಿತ್ಸೆ ಪಡೆದರು. ಈಗ ಸಂಪೂರ್ಣ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಮುಂದಿನ 2 ತಿಂಗಳಲ್ಲಿ ಅವರು ಎಲ್ಲಾ ಕೆಲಸ ಮಾಡಬಹುದೆಂದು ವಿವರಿಸಿದರು.

ರೋಗಿ ಶಿವರುದ್ರಪ್ಪ ಮಾತನಾಡಿ, ನಾನು ಎಲ್ಲೆಡೆ ತೋರಿಸಿದೆ ಗುಣ ಆಗಿರಲಿಲ್ಲ, ಗ್ಯಾಸ್ಟಿಕ್ ಇದೆ, ಮಾತ್ರೆ ಕುಡೀರಿ ಎಂದರು ಅಷ್ಟೇ. ಆದರೆ ಡಾ.ಬಸವರಾಜ್ ಅವರು ಶಸ್ತ್ರ ಚಿಕಿತ್ಸೆ ಮಾಡಿ, ಚೆನ್ನಾಗಿ ನೋಡಿಕೊಂಡರು ಎಂದು ಧನ್ಯವಾದ ಹೇಳಿದರು. ಡಾ.ಪ್ರೇಮಾ, ಡಾ.ಅಶ್ವಿನಿ ಇದ್ದರು.

## ಹಾಸನ ಡಿಡಿಪಿಐ ಬಲರಾಂಗೆ ಅಭಿನಂದನೆ

• ಪ್ರಜೋದಯ ವರದಿ

**ಹಾಸನ:** ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ಬಲರಾಮ ಅವರನ್ನು ಜಿಲ್ಲಾ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟದ ಪದಾಧಿಕಾರಿಗಳು ಅವರ ಕಚೇರಿಯಲ್ಲಿ ಭೇಟಿ ಮಾಡಿ ಅಭಿನಂದಿಸಿ ಸ್ವಾಗತಿಸಿದರು.

ಇದೇ ವೇಳೆ ಮಾತನಾಡಿದ ಬಲರಾಮ ಅವರು, ಜಿಲ್ಲೆಯಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಾಣ ಮಾಡುವ ಮೂಲಕ ಎಲ್ಲರ ಸಹಕಾರದಿಂದ ಫಲಿತಾಂಶದ ಗುಣಮಟ್ಟ ಹೆಚ್ಚಿಸಲು ಶ್ರಮಿಸಲಾಗುವುದೆಂದು ಭರವಸೆ ನೀಡಿದರು.

ಜಿಲ್ಲಾ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟದ ಅಧ್ಯಕ್ಷ ಶಿವರಾಮೇಗೌಡ, ಕಾರ್ಯದರ್ಶಿ ಬಿ.ಕೆ.ಗಂಗಾಧರ್, ಉಪಾಧ್ಯಕ್ಷೆ ತಾರಾಸ್ವಾಮಿ, ನಿರ್ದೇಶಕರಾದ ಹೆಚ್.ಡಿ. ಕುಮಾರ್, ವೆಂಕಟರಾಮು, ಸುರೇಂದ್ರ ಕುಮಾರ್, ನಟರಾಜ್, ಸಕಲೇಶಪುರ ತಾಲ್ಲೂಕು ಅಧ್ಯಕ್ಷ ಮಲ್ನಾಡ್ ಜಾಕೀರ್, ಕಾರ್ಯದರ್ಶಿ ಹಲಸುಲಿಗೆ ಗಿರೀಶ್, ಬೇಲೂರು ತಾಲ್ಲೂಕು ಅಧ್ಯಕ್ಷ ರಂಗನಾಥ್ ಮತ್ತಿತರರಿದ್ದರು.



## ಮತಗಳ್ಳತನ: ಕಾನೂನು ಇಲಾಖೆ ಪರಿಶೀಲನೆ

» ಮೊದಲನೇ ಪುಟದಿಂದ

ನಕಲಿ ಮತದಾರರ ಮೂಲಕ ದೊಡ್ಡ ಪ್ರಮಾಣದ ಚುನಾವಣಾ ವಂಚನೆ ನಡೆದಿದೆ ಎಂಬ ರಾಹುಲ್ ಗಾಂಧಿ ಹೇಳಿಕೆಯನ್ನು ತಾವು ನಂಬಿರುವುದಾಗಿ ದೃಢಪಡಿಸಿದರು.

ನ್ಯಾಯಾಂಗವು ಮಧ್ಯಪ್ರವೇಶಿಸಿ ಈ ವಿಷಯವನ್ನು ಸ್ವಂತವಾಗಿ ಏಕೆ ತೆಗೆದುಕೊಳ್ಳಬಾರದು ಎಂದು ಕೇಳಿದಾಗ, ಚುನಾವಣೆಯಲ್ಲಿ ಕುಶಲತೆ ನಡೆಯುತ್ತಿದೆ ಎಂದು ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ. ಇವಿಎಂ ಮತ್ತು ಮತದಾರರ ಪಟ್ಟಿ ಕುಶಲತೆ ನಡೆಯುತ್ತಿದೆ ಎಂದರು.

**ಮತ ಖರೀದಿ ಬಗ್ಗೆ ಗೊತ್ತಿಲ್ಲ:** ಸಿದ್ದರಾಮಯ್ಯ ಬಾದಾಮಿ ಕ್ಷೇತ್ರದಲ್ಲಿ 3 ಸಾವಿರ ಮತಗಳನ್ನು ಖರೀದಿ ಮಾಡಿ ಗೆದ್ದದ್ದು ಎಂಬ ಸಿ.ಎಂ.ಇಬ್ರಾಹಿಂ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿಎಂ, ಇಬ್ರಾಹಿಂ ನಮ್ಮ ಪಕ್ಷದವರಲ್ಲ. ನಾನು ನಾಮನಿರ್ದೇಶನ ಸಲ್ಲಿಸಲು ಹಾಗು ಪ್ರಚಾರಕ್ಕಾಗಿ ಬಾದಾಮಿಗೆ ಹೋಗಿದ್ದೆ. ಅದು ಬಿಟ್ಟರೆ ನನಗೆ ಏನೂ ಗೊತ್ತಿಲ್ಲ. ನಾನು 1,600 ಮತಗಳಿಂದ ಗೆದ್ದಿದ್ದು. ಈ ವಿಚಾರ ನನಗೆ ಹೊಸದು, ಈ ಬಗ್ಗೆ ಗೊತ್ತಿಲ್ಲ. ಅಂತೆಯೇ ವರುಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಸತ್ತವರೆಲ್ಲಾ ಮತ ಹಾಕಿ ನನ್ನನ್ನು ಗೆಲ್ಲಿಸಿದರು ಎಂದು ನಾನು ಹೇಳಿಲ್ಲ. ಒಂದು ವೇಳೆ ಸತ್ತವರು ಮತ ಹಾಕಿದ್ದರೆ ಅದಕ್ಕೆ ಚುನಾವಣಾ ಆಯೋಗ ನೇರ ಹೊಣೆ ಎಂದರು.

## ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ವಿಚಾರ ಸಂಕಿರಣ

• ಪ್ರಜೋದಯ ವರದಿ

**ಹೆತ್ತೂರು:** ಇಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರೌಢಶಾಲಾ ಮತ್ತು ಕಾಲೇಜು ವಿಭಾಗದ ವಿದ್ಯಾರ್ಥಿಗಳಿಗೆ ಸಕಲೇಶಪುರ ತಾಲ್ಲೂಕು ವಕೀಲರ ಸಂಘ, ತಾಲ್ಲೂಕು ಕಾನೂನು ಸೇವಾ ಸಮಿತಿ ಹಾಗೂ ಕರ್ನಾಟಕ ಪಬ್ಲಿಕ್ ಶಾಲೆಯ ಸಂಯುಕ್ತ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣವನ್ನು ಉದ್ಘಾಟಿಸಿದ ಸಕಲೇಶಪುರ ತಾಲ್ಲೂಕು ಜೆ ಎಮ್ ಎಫ್ ಸಿ ಹಿರಿಯ ನ್ಯಾಯಾಧೀಶ ಜಯ ಪ್ರಕಾಶ್ ವಿ.ಮಾತನಾಡಿದರು.

ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯಿದೆ (ಪೋಕ್ಸೋ) ಕುರಿತು ತಾಲ್ಲೂಕು ವಕೀಲರ ಸಂಘದ ಕಾರ್ಯದರ್ಶಿ ವಾಣಿ ಬಿ.ಪಿ. ಉಪನ್ಯಾಸ ನೀಡಿದರು. ವಕೀಲರ ಸಂಘದ ಸಹ ಕಾರ್ಯದರ್ಶಿ ವಿನಯ್ ಬಾಲ ಕಾರ್ಮಿಕ ವಿರೋಧಿ ಕಾಯಿದೆಯ ಕುರಿತು ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಹರೀಶ್ ಕರಡಿಗಾಲ, ಯಸಳೂರು ಪೊಲೀಸ್ ಠಾಣಾಧಿಕಾರಿ ಕತೀಜಾ, ಕಾಲೇಜು ಪ್ರಾಂಶುಪಾಲರಾದ ಮಂಜುನಾಥ, ಉಪ ಪ್ರಾಂಶುಪಾಲರಾದ ಭಾಸ್ಕರ್ ಬಿ., ಉಪನ್ಯಾಸಕಿ ಮಂಜುಳ, ರಾಜ್ಯಶಾಸ್ತ್ರ ಉಪನ್ಯಾಸಕ ಸಿದ್ದೇಶ್, ಇಂಗ್ಲಿಷ್ ಉಪನ್ಯಾಸಕಿ ರೂಪ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

# ನೊಂದವರಿಗೆ ನ್ಯಾಯ ಕೊಡಿಸುವ ಕೆಲಸ ಮಾಡಬೇಕಿದೆ

### ಅಂಬೇಡ್ಕರ್ ಅವರ ತತ್ವಾದರ್ಶಕ್ಕೆ ಕಳಂಕ ಆಗದಂತೆ ಎಚ್ಚರಿಕೆ ವಹಿಸಿ: ದ.ಸಂ.ಸ. ರಾಜ್ಯಾಧ್ಯಕ್ಷ ಗೋವಿಂದ ರಾಜು

• ಪ್ರಜೋದಯ ವರದಿ

**ಹಾಸನ:** ಇಂದಿನ ಯುವ ದಲಿತ ಹೋರಾಟಗಾರರು ಹಿರಿಯ ಹೋರಾಟಗಾರರ ತ್ಯಾಗ ಬಲಿದಾನ ಅರಿತು ಅವರ ಮಾರ್ಗದರ್ಶನದಲ್ಲಿ ಹೋರಾಟಗಳನ್ನು ರೂಪಿಸಿಕೊಂಡು ನೊಂದವರಿಗೆ ನ್ಯಾಯ ಕೊಡಿಸುವ ಕೆಲಸ ಮಾಡಬೇಕಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯಾಧ್ಯಕ್ಷ ಗೋವಿಂದ ರಾಜು ಸಲಹೆ ನೀಡಿದರು.



ನಗರದಲ್ಲಿ ಶನಿವಾರ ಸಂಘದ ಜಿಲ್ಲಾ ಘಟಕದಿಂದ ಹಮ್ಮಿಕೊಂಡಿದ್ದ ಪದಾಧಿಕಾರಿಗಳ ಪದಗ್ರಹಣ ಹಾಗೂ ಸರ್ವಸದಸ್ಯರ ಸಭೆಯಲ್ಲಿ ಮಾತನಾಡಿ ನಮ್ಮ ಸಂಘಟನೆ ಅಂಬೇಡ್ಕರ್ ನೆರಳಿನಲ್ಲಿ ಮುನ್ನಡೆಯುತ್ತಿದ್ದು ಅಂಬೇಡ್ಕರ್ ಅವರ ತತ್ವಾದರ್ಶಕ್ಕೆ ಕಳಂಕ ಆಗದಂತೆ ಜಿಲ್ಲಾ ಹಾಗೂ ತಾಲ್ಲೂಕು ಘಟಕದ ಅಧ್ಯಕ್ಷರು, ಪದಾಧಿಕಾರಿಗಳು ನೊಂದವರಿಗೆ, ಅಹಾಯಕರಿಗೆ, ದೀನ ದಲಿತರಿಗೆ ನ್ಯಾಯಕೊಡಿಸಲು ಹೋರಾಟ ಮಾಡಬೇಕಿದೆ ಎಂದರು.

ಗುರಿ ಇಲ್ಲದ ಚಳುವಳಿ ಜೀವಂತವಾಗಿರುವುದಿಲ್ಲ. ಗುರಿ ಹೊಂದಿರುವ ಚಳುವಳಿಗಳು ಮುಂದಿನ ಪೀಳಿಗೆ ಜೀವಂತವಾಗಿರುತ್ತವೆ. ಆದ್ದರಿಂದ ಯುವ ಹೋರಾಟಗಾರರು ಹಿರಿಯ ಹೋರಾಟಗಾರರ ಹೋರಾಟಗಳನ್ನು ಅರ್ಥಮಾಡಿಕೊಂಡು ಹೋರಾಟಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹಿರಿಯ ಹೋರಾಟಗಾರ ಚಂದ್ರಪ್ರಸಾದ್ ತ್ಯಾಗಿ ಅವರ ಹೋರಾಟಗಳ ಬಗ್ಗೆ ನೆನಪಿಸಿಕೊಂಡರು.

ದಲಿತ ಚಳುವಳಿ ಹೋರಾಟಗಳು ನೊಂದವರಿಗೆ ಆಶ್ರಯ ನೀಡುವಂತಾಗಬೇಕು. ಆದರೆ ಅವರನ್ನೇ ಶೋಷಣೆ ಮಾಡುವ ಮಾತುಗಳು ಇತ್ತೀಚೆಗೆ ಕೇಳಿ ಬರುತ್ತಿದ್ದು ಇದು ಕೊನೆಯಾಗಬೇಕು. ಅಂಬೇಡ್ಕರ್ ಹೆಸರಿಗೆ ಕಳಂಕ ತರುವಂತ ಯಾವುದೇ ಕೆಲಸ ಮಾಡದೇ ಸಂಘಟನೆಗಳನ್ನು ಬಲಪಡಿಸಿಕೊಂಡು ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಹೋರಾಟ ಮಾಡಬೇಕು ಎಂದು ಸಲಹೆ ನೀಡಿದರು.

ಧರ್ಮಸ್ಥಳದಲ್ಲಿ ಪತ್ರಕರ್ತರ ಮೇಲೆ ನಡೆದಿರುವ ದಾಳಿ ಖಂಡನೀಯ. ಈಗಾಗಲೇ ಪ್ರಕರಣಗಳ ಕುರಿತು ಎಸ್‌ಐಟಿ ತನಿಖೆ ನಡೆಯುತ್ತಿದ್ದು ಯಾರು ತಪ್ಪು ಮಾಡಿದ್ದಾರೆ ಅಂತಹ ಗೋಮುಖವ್ಯಾಗ್ರಗಳನ್ನು ಬಯಲಿಗೆ ಎಳೆಯಬೇಕಾಗಿದೆ. ಈ ಬಗ್ಗೆ ಸರ್ಕಾರ ಹಾಗೂ ಗೃಹ ಮಂತ್ರಿಗಳು ಎಚ್ಚರಿಕೆ ವಹಿಸಬೇಕು ಎಂದು ಆಗ್ರಹ ಮಾಡಿದರು.

ಇನ್ನು ಇತ್ತೀಚಿನ ದಿನಗಳಲ್ಲಿ ಅಂಬೇಡ್ಕರ್ ಬಗ್ಗೆ ಅವಹೇಳನವಾಗಿ ಮಾತನಾಡುತ್ತಿರುವುದು ಹೆಚ್ಚಾಗಿ ನಡೆಯುತ್ತಿದ್ದು ಇದನ್ನು ಪ್ರತಿಯೊಬ್ಬರೂ ಖಂಡಿಸಿ ಅವರಿಗೆ ಕಠಿಣ ಶಿಕ್ಷೆಯಾಗುವಂತೆ ಹೋರಾಟ ಮಾಡುವುದು ಪ್ರಸ್ತುತ ಸಂದರ್ಭದಲ್ಲಿ ಅನಿವಾರ್ಯವಾಗಿದೆ. ಇನ್ನು ಸಂವಿಧಾನ ವಿರೋಧಿ ಹೇಳಿಕೆಗಳು ಆಗಾಗ ಕೇಳಿಬರುತ್ತಿರುವುದು ಸಂವಿಧಾನಕ್ಕೆ ಮಾರಕವಾಗಿದೆ. ನಾವೆಲ್ಲರೂ ಸಂವಿಧಾನವನ್ನು ಉಳಿಸುವ-ರಕ್ಷಿಸುವ ಹೋರಾಟಗಳನ್ನು ರೂಪಿಸಿಬೇಕಾಗಿದೆ ಎಂದರು.

ದಲಿತ ಸಂಘಟನೆಗಳ ಒಕ್ಕೂಟದಿಂದ ಈಗಾಗಲೇ ಪಿಟಿಸಿಎಸ್ ಕಾಯ್ದೆ ಬಗ್ಗೆ ಹೋರಾಟ ಮಾಡಿ ಸರ್ಕಾರದ ಗಮನ ಸೆಳೆಯಲಾಗಿದೆ. ಈಗಾಗಲೇ ಸರ್ಕಾರ ಹೊರಡಿಸಿರುವ ಸುಗ್ರಿವಾಜ್ಞೆ ಅವೈಜ್ಞಾನಿಕವಾಗಿದ್ದು ಇದನ್ನು ತಿದ್ದುಪಡಿ ತರುಲು ಸರ್ಕಾರಕ್ಕೆ ಒತ್ತಡ ಹಾಕುವ ಕೆಲಸ ಮಾಡಬೇಕಿದೆ. ಆಗಸ್ಟ್ 15ರಂದು ಸ್ವಾತಂತ್ರ್ಯ ದಿನಾಚರಣೆ ಧ್ವಜರೋಣ ಮಾಡಲು ಬರುವ ಸಚಿವರುಗಳಿಗೆ ಸಂಘಟನೆಗಳ ಮುಖಂಡರು ಮನವಿ ನೀಡುವಂತೆ ತಿಳಿಸಿದರು.

ಅಂಬೇಡ್ಕರ್ ಬಂದು ಹೋಗಿರುವ ನೆಲದಲ್ಲಿ ಸಂಘಟನೆ ಬಲಗೊಳಿಸಿ ಸಲಹೆ

ಕಾರ್ಯಕ್ರಮದಲ್ಲಿ ರಾಜ್ಯಾಧ್ಯಕ್ಷ ಗೋವಿಂದ ರಾಜ್ ಅವರು ಹಾಸನ ಜಿಲ್ಲಾ ಘಟಕದ ಪದಾಧಿಕಾರಿಗಳ ಘೋಷಣೆ ಮಾಡಿ ದರು. ಹಾಸನ ಜಿಲ್ಲೆಯ ಮುಖ್ಯ ಸಂಘಟನಾ ಸಂಚಾಲಕರಾಗಿ ಮಂಜುತೇಜೂರು, ಪ್ರಧಾನ ಸಂಚಾಲಕರಾಗಿ ಅನಂತರಾಜ್ (ಅನು), ಸಂಚಾಲಕರಾಗಿ ಉಮೇಶ್, ಮಂಜು ಇವರ ಆಯ್ಕೆಯ ಜೊತೆಗೆ ತಾಲ್ಲೂಕು ಘಟಕದ ಸಂಚಾಲಕರನ್ನು ಘೋಷಣೆ ಮಾಡಿದರು.

ಅಂಬೇಡ್ಕರ್ ಹಾಕಿಕೊಟ್ಟಿರುವ ಹಾದಿಯಲ್ಲಿ ಸಂಘಟನೆಗೆ ಯಾವುದೇ ಕಪ್ಪು ಚುಕ್ಕಿ ಬಾರದೆ ತಮಗೆ ನೀಡಿರುವ ಜವಾಬ್ದಾರಿಯನ್ನು ನೊಂದವರ, ಅಸಹಾಯಕರ, ದೀನದಲಿತರ ನೋವುಗಳಿಗೆ ಸ್ಪಂದಿಸುವ ಮೂಲಕ ಹಾಸನ ಜಿಲ್ಲೆಯಲ್ಲಿ ಹಿರಿಯ ಮಾರ್ಗದರ್ಶನ ಹಾಗೂ ಅವರ ಹೋರಾಟದ ತ್ಯಾಗ, ಬಲಿದಾನವನ್ನು ಅರಿತುಕೊಂಡು ಸಂಘಟನೆಯನ್ನು ಬಲಪಡಿಸಬೇಕು ಮತ್ತು ಅಂಬೇಡ್ಕರ್ ಬಂದು ಹೋಗಿರುವ ನೆಲದಲ್ಲಿ ಸಂಘಟನೆ ಬಲಗೊಳಿಸಿ ಎಂದು ಸಲಹೆ ನೀಡಿದರು.

ದಲಿತ ಮುಖಂಡ ಹೆಚ್.ಕೆ.ಸಂದೇಶ್, ಕೆ.ಈರಪ್ಪ, ವಿರೇಶ್ ಹಿರೇಹಳ್ಳಿ, ಶಂಕರ್‌ರಾಜ್, ಆರ್‌ಪಿಐ ರಾಜ್ಯಾಧ್ಯಕ್ಷ ಸತೀಶ್, ರಾಜ್ಯ ಸಂಘಟನಾ ಸಂಚಾಲಕ ಧರ್ಮಯ್ಯ, ಖಜಾಂಚಿ ಶಿವಶಂಕರ್, ಮೈಸೂರು ವಿಭಾಗೀಯ ಅಧ್ಯಕ್ಷ ಶಿವರಾಜ್‌ಬೆಳವಾಡಿ, ತಟ್ಟೆಕೆರೆ ಮಂಜಣ್ಣ, ದಿನೇಶ್, ವಿಜಯಕುಮಾರ್, ಜೈಭೀಮ್ ಬ್ರಿಗೇಡ್ ಜಿಲ್ಲಾಧ್ಯಕ್ಷ ರಾಜೇಶ್, ವಿಠಲ್, ಕುಮಾರ್, ಜಗದೀಶ್ ಇನ್ನಿತರರು ಇದ್ದರು

## ಬೆಲೆ ಏರಿಕೆಗೆ ಬಂಡವಾಳಶಾಹಿಗಳೇ ಕಾರಣ

» ಮೊದಲನೇ ಪುಟದಿಂದ

ಆದರೆ ಇಲ್ಲಿ ಬಡವರಿಗೆ 2 ಸಾವಿರ ಕೊಟ್ಟರೆ ಅಥವಾ ಬಸ್ ಫ್ರೀ ಮಾಡಿದರೆ ಸರ್ಕಾರವನ್ನು ಜನರನ್ನು ಮಾಧ್ಯಮಗಳು ತರಾಟೆಗೆ ತೆಗೆದು ಕೊಂಡು ಜಾಡಿಸುತ್ತಾರೆ ಎಂದು ಎಚ್ಚರಿಕೆ ನೀಡಿದರು.

ಇಲ್ಲಿ ಕೆಲವರೆ ಶ್ರೀಮಂತರಾದರೆ ಸಮಸ್ಯೆ ಇಲ್ಲ. ಬಡಜನರಿಗೆ ಒಳ್ಳೆಯ ಸಂಬಳ ಕೊಟ್ಟರೆ, ಸಣ್ಣವರು ಶ್ರೀಮಂತರಾದರೆ ಆಗ ಸಮಸ್ಯೆ ಸೃಷ್ಠಿಯಾಗುತ್ತದೆ. ಹೀಗೆ ಕಷ್ಟ ಪಟ್ಟು ದುಡಿದರೆ ಅವರಿಗೆ ಸಂಬಳ ಕೊಡುವುದು ಅವರು ತೆಗೆದುಕೊಳ್ಳುವುದು ಸರಿಯಾಗುತ್ತದೆ ಎಂದರು.

ದುಡಿಮೆಗೆ ತಕ್ಕ ಕೂಲಿ ಕೇಳುವುದು ಮೂಲಭೂತ ಹಕ್ಕಲ್ಲ, ಕೂಲಿ ಜಾಸ್ತಿ ಕೇಳುವ ಹಾಗಿಲ್ಲ, ಕೂಲಿ ನಮ್ಮ ಹಕ್ಕು ಎಂಬುದನ್ನು ಕಾರ್ಮಿಕರು ಹೇಳುವ ಹಾಗಿಲ್ಲ ಇಂತಹ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ಇಂತಹ ಸಮಸ್ಯೆಗಳನ್ನು ಎದುರಿಸಬೇಕಾದರೆ ನಾವು ದುಡಿಯುವ ಜನರು ಒಟ್ಟಾಗಿ ಹೋರಾಟ ಮಾಡುವುದೆ ಪರಿಹಾರವಾಗಿದೆ ಎಂದರು.

**ಬಂಡವಾಳಶಾಹಿಗಳಿಂದ ದೇಶ ನಲುಗುತ್ತಿದೆ**

ಸಿಐಟಿಯುನ ಜಿಲ್ಲಾಧ್ಯಕ್ಷ ಧರ್ಮೇಶ್ ಮಾತನಾಡಿ, ಹಾಸನ ಸಮ್ಮೇಳನ ಎರಡು ದಿನಗಳು ನಡೆಯಬೇಕಿತ್ತು ಆದರೆ ರಾಜ್ಯ ಸಮ್ಮೇಳನ ನಮ್ಮ ಜಿಲ್ಲೆಯಲ್ಲಿ ನಡೆಯುವುದರಿಂದ ನಾವು ಒಂದೇ ದಿನಕ್ಕೆ ಸೀಮಿತಗೊಳಿಸಿದ್ದೇವೆ. ಇಂದು ಕಾರ್ಮಿಕರು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಜನವಿರೋಧಿ ನೀತಿಗಳಿಗೆ ಬಲಿಯಾಗುತ್ತಿದ್ದಾರೆ ಎಂದು ಹೇಳಿದರು.

ದೇಶ-ವಿದೇಶಗಳ ನಡುವೆ ಭಯೋತ್ಪಾದನಾ ಚಟುವಟಿಕೆಗಳು ಹೆಚ್ಚಾಗುತ್ತಿದ್ದೆ. ಯುದ್ಧ, ಭಯೋತ್ಪಾಧನೆ, ಬಂಡವಾಳಶಾಹಿ ನೀತಿಗಳಿಂದ ಎಲ್ಲಾ ದೇಶಗಳು ನಲುಗುತ್ತಿದೆ. ಈ ದೇಶದ ರಾಜಕೀಯ, ಆರ್ಥಿಕ ಬದಲಾವಣೆ ಯಾದರೆ ಮಾತ್ರ ಸಾಮಾಜಿಕ ಬದಲಾವಣೆ ಸಾಧ್ಯ ಎಂದರು.

ಕಾರ್ಮಿಕ ಮುಖಂಡ ಪಿ. ಸತ್ಯನಾರಾಯಣ ಸಮ್ಮೇಳನದ ಧ್ವಜಾರೋಹಣ ನೆರವೇರಿಸಿದರು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ, ಕೆಎಸ್‌ಆರ್‌ಟಿಸಿ ನೌಕರರ ಸಂಘದ ಮುಂಜುನಾಥ್, ಡಿಎಸ್ ಜಿಲ್ಲಾ ಸಂಚಾಲಕ ಪೃಥ್ವಿ, ಭಾರತ ವಿದ್ಯಾರ್ಥಿ ಫೆಡರೇಷನ್ ಜಿಲ್ಲಾ ಕಾರ್ಯದರ್ಶಿ ರಮೇಶ್ ಹಾಸನ್ ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019